# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ನಾಲ್ಕನೆಯ ಅಧಿವೇಶನ

10ನೇ ಡಿಸೆಂಬರ್ 2024

ಮಂಗಳವಾರ

## ವಿಷಯಾನುಕ್ರಮಣಿಕೆ (Index)

01. ಸಂತಾಪ ಸೂಚನೆ

**ಪದ್ಮಭೂಷಣ ಪುರಸ್ಕೃತ ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸರ್ಕಾರದ ಮಾಜಿ ವಿದೇಶಾಂಗ ಸಚಿವರು ಹಾಗೂ ಮಹಾರಾಷ್ಟ್ರ ಮಾಜಿ ರಾಜ್ಯಪಾಲರಾದ ಶ್ರೀ ಎಸ್.ಎಂ.ಕೃಷ್ಣರವರ ನಿಧನದ ಬಗ್ಗೆ.**

- ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಡಾ: ಡಿ.ತಿಮ್ಮಯ್ಯ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಸಿ.ಟಿ.ರವಿ
- ಶ್ರೀ ಹೆಚ್.ವಿಶ್ವನಾಥ್
- ಶ್ರೀ ಎಂ.ನಾಗರಾಜು
- ಶ್ರೀ ತಿಪ್ಪಣ್ಣ ಕಮಕನೂರ
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಎನ್.ರವಿಕುಮಾರ್
- ಶ್ರೀ ಮಂಜುನಾಥ್ ಭಂಡಾರಿ

– ಶ್ರೀಮತಿ ಉಮಾಶ್ರೀ

– ಶ್ರೀ ಕೆ.ಎಸ್.ನವೀನ್

– ಶ್ರೀ ಮಧು ಜಿ.ಮಾದೇಗೌಡ

– ಶ್ರೀ ನಸೀರ್ ಅಹ್ಮದ್

– ಶ್ರೀ ಹೆಚ್.ಪಿ.ಸುಧಾಮ್‌ದಾಸ್

– ಶ್ರೀ ಐವನ್ ಡಿ' ಸೋಜಾ

– ಡಾ: ಕೆ.ಗೋವಿಂದರಾಜು

– ಶ್ರೀ ಕೇಶವ ಪ್ರಸಾದ್. ಎಸ್.

---

(734) 10.12.2024 11.30 ಹೆಚ್‌ವಿ.ವಿಕೆ

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, ದಿನಾಂಕ 10ನೇ ಡಿಸೆಂಬರ್ 2024**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಿದ್ದರು**

**01. ಸಂತಾಪ ಸೂಚನೆ**

**ವಿಷಯ: ಪದ್ಮಭೂಷಣ ಪುರಸ್ಕೃತ ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸರ್ಕಾರದ ಮಾಜಿ ವಿದೇಶಾಂಗ ಸಚಿವರು ಹಾಗೂ ಮಹಾರಾಷ್ಟ್ರದ ಮಾಜಿ ರಾಜ್ಯಪಾಲರಾದ ಶ್ರೀ ಎಸ್.ಎಂ.ಕೃಷರವರ ನಿಧನದ ಬಗ್ಗೆ.**

----

**ಸಭಾಪತಿಯವರು:-**

ಪದ್ಮಭೂಷಣ ಪುರಷ್ಕೃತ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸರ್ಕಾರದ ಮಾಜಿ ವಿದೇಶಾಂಗ ಸಚಿವರಾಗಿದ್ದ ಶ್ರೀ ಎಸ್.ಎಂ.ಕೃಷ್ಣ ಅವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

**ಸೋಮನಹಳ್ಳಿ ಮಲ್ಲಯ್ಯ ಕೃಷ್ಣ**

ಪದ್ಮಭೂಷಣ ಪುರಸ್ಕೃತ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸರ್ಕಾರದ ಮಾಜಿ ವಿದೇಶಾಂಗ ಸಚಿವರಾಗಿದ್ದ ಶ್ರೀ ಎಸ್.ಎಂ.ಕೃಷ್ಣ ಅವರು ದಿನಾಂಕ:10.12.2024ರಂದು ನಿಧನ ಹೊಂದಿರುತ್ತಾರೆ.

1932ರ ಮೇ 01 ರಂದು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಸೋಮನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಪ್ರೌಢ ಶಿಕ್ಷಣ, ಮೈಸೂರಿನ ಮಹಾರಾಜ ಕಾಲೇಜಿನಿಂದ ಬಿ.ಎ., ಪದವಿ, ಬೆಂಗಳೂರು ಸರ್ಕಾರಿ ಕಾನೂನು ಕಾಲೇಜಿನಿಂದ ಟೆಕ್ಸಾಸ್‌ನ ಸದರನ್ ಮೆಥೋಡಿಸ್ಟ್ ವಿಶ್ವವಿದ್ಯಾಲಯ ಹಾಗೂ ಜಾರ್ಜ್ ವಾಷಿಂಗ್‌ಟನ್‌ನ ಲಾ ಕಾಲೇಜಿನಿಂದ ಕಾನೂನು ಪದವಿಯನ್ನು ಹೊಂದಿದ್ದ ಶ್ರೀಯುತರು ಬೆಂಗಳೂರಿನ ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು.

1962ರಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಆಯ್ಕೆಯಾಗುವ ಮೂಲಕ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದ ಶ್ರೀಯುತರು 4, 5 ಮತ್ತು 7ನೇ

ಲೋಕಸಭೆಯ ಸದಸ್ಯರಾಗಿ 1972-77ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ, 1996-1999ರವರೆಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು 1989-1993ರ ಅವಧಿಯಲ್ಲಿ ವಿಧಾನಸಭೆಯ ಸಭಾಧ್ಯಕ್ಷರಾಗಿ, 1993-1994ರಲ್ಲಿ ಮೊದಲ ಉಪ ಮುಖ್ಯಮಂತ್ರಿಯಾಗಿ, 1999-2004ರವರೆಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ 2004 ರಿಂದ 2008ರವರೆಗೆ ಮಹಾರಾಷ್ಟ್ರದ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು.

ಕೇಂದ್ರ ಸರ್ಕಾರದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿ, ಹಣಕಾಸು ಖಾತೆ ರಾಜ್ಯ ಸಚಿವರಾಗಿ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವರಾಗಿ ವಿವಿಧ ಹುದ್ದೆಗಳಲ್ಲಿ ಸ್ಮರಣೀಯವಾಗಿ ಜನಸೇವೆಯನ್ನು ಸಲ್ಲಿಸಿರುತ್ತಾರೆ. ವಿಶ್ವ ಭೂಪಟದಲ್ಲಿ ಬೆಂಗಳೂರು ನಗರದ ಚಿತ್ರಣ ಬದಲಿಸಿ ಬೆಂಗಳೂರನ್ನು "ಸಿಲಿಕಾನ್ ಸಿಟಿ"ಯನ್ನಾಗಿ ಪರಿವರ್ತಿಸಿದ ಹರಿಕಾರರಾಗಿದ್ದ ಶ್ರೀಯುತರು ಕರ್ನಾಟಕಕ್ಕೆ ಜಾಗತಿಕ ಮಟ್ಟದಲ್ಲಿ ಹೆಸರನ್ನು ತಂದವರು. ತಾಲ್ಲೂಕು ಮಟ್ಟದಲ್ಲಿ "ಭೂಮಿ" ತಂತ್ರಜ್ಞಾನವನ್ನು ಜಾರಿಗೆ ತರುವ ಮೂಲಕ ಡಿಜಿಟಲೀಕರಣಕ್ಕೆ ನಾಂದಿ ಹಾಡಿದ ಕೀರ್ತಿಗೆ ಭಾಜನರಾಗಿದ್ದಾರೆ.

ಶ್ರೀಯುತರ ದೂರದರ್ಶಿತ್ವ, ಶಿಸ್ತುಬದ್ಧ ಜೀವನ, ಸಜ್ಜನಿಕೆಯ ನಡವಳಿಕೆ, ಅಧ್ಯಯನಶೀಲ ಪ್ರವೃತ್ತಿ ಹಾಗೂ ವ್ಯಕ್ತಿತ್ವವು ಉದಯೋನ್ಮುಖ ರಾಜಕಾರಣಿಗಳಿಗೆ ಸ್ಫೂರ್ತಿದಾಯಕವಾಗಿದೆ. ಶ್ರೀಯುತರು ರಾಷ್ಟ್ರ ಹಾಗೂ ರಾಜ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಗಾಗಿ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

ಮಿತಭಾಷಿ, ಸೌಮ್ಯ ರಾಜಕಾರಣಿ ಹಾಗೂ ಅಜಾತಶತ್ರುಗಳಾಗಿದ್ದ ಶ್ರೀಯುತರ ನಿಧನದಿಂದಾಗಿ ರಾಷ್ಟ್ರ ಹಾಗೂ ರಾಜ್ಯವು ಒಬ್ಬ ಶ್ರೇಷ್ಠ ರಾಜಕೀಯ ಮುತ್ಸದ್ದಿಯನ್ನು ಕಳೆದುಕೊಂಡಂತಾಗಿದೆ.

(ಮುಂದು)

(735) 10.12.2024 11.40 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಭಾಪತಿಯವರೇ, ಗಲೇ ತಾವು ಪ್ರಸ್ತಾಪಿಸಿದಂತೆ ಮಾನ್ಯ ಎಸ್.ಎಂ.ಕೃಷ್ಣರವರು ಈ ರಾಜ್ಯ ಕಂಡಂಥ ಅಭೂತಪೂರ್ವ ಪುರುಷರಾಗಿದ್ದಾರೆ. ಸರಳ, ಸಜ್ಜನಿಕೆ ಹಾಗೂ ದೂರದೃಷ್ಟಿ ಇದ್ದಂಥ ರಾಜಕಾರಣಿಯಾಗಿದ್ದರು ಮತ್ತು ದೂರದೃಷ್ಟಿಯುಳ್ಳವರೂ ಆಗಿದ್ದರು. ಅವರು ಪ್ರಥಮ ಬಾರಿಗೆ 1962ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದು ಶಾಸಕರಾಗಿದ್ದರು. ವಿಧಾನಸಭೆ, ವಿಧಾನ ಪರಿಷತ್ತು, ಲೋಕಸಭೆ ಮತ್ತು ರಾಜ್ಯ ಸಭೆಯ ಸದಸ್ಯರೂ ಆಗಿದ್ದರು. ಮಾನ್ಯ ದೇವರಾಜ ಅರಸುರವರ ಸಚಿವ ಸಂಪುಟದಲ್ಲಿ ಕೈಗಾರಿಕಾ ಸಚಿವರಾಗಿ ಕೆಲಸ ಮಾಡಿದ್ದರು. ನಂತರ, ಉಪ ಮುಖ್ಯಮಂತ್ರಿಗಳಾಗಿ, ಸಭಾಧ್ಯಕ್ಷರಾಗಿ, ಮುಖ್ಯಮಂತ್ರಿಯಾಗಿ, ಕೇಂದ್ರದಲ್ಲಿ ಸಚಿವರಾಗಿ ಹಾಗೂ ರಾಜ್ಯಪಾಲರಾಗಿ ಈ ಎಲ್ಲಾ ಹುದ್ದೆಗಳಲ್ಲಿ ಅತ್ಯಂತ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಅವರೊಬ್ಬ ಯಶಸ್ವಿ ರಾಜಕಾರಣಿಗಳಾಗಿದ್ದರು. ಅವರ ಜೀವನವನ್ನು ನೋಡಿದಾಗ, ಅವರು ಎಂತಹ ಕ್ಲಿಷ್ಟ ಸಮಯ ಬಂದರೂ, ಯಾವುದೇ ತೊಂದರೆಗಳು ಬಂದರೂ ಕೂಡ ಬಹಳ ಸಮಾಧಾನದಿಂದ ಮತ್ತು ಹಿರಿಯರೆಲ್ಲರನ್ನೂ ಕರೆದು, ಅವರ ಜೊತೆ ಚರ್ಚೆ ಮಾಡಿ, ಅವರ ಅಭಿಪ್ರಾಯ ತೆಗೆದುಕೊಂಡು ಎಲ್ಲವನ್ನೂ ಸಮಗ್ರವಾಗಿ ನಿರ್ವಹಿಸಿರುವಂಥದ್ದನ್ನು ನಾವು ನೋಡಿದ್ದೇವೆ. ಕಾವೇರಿ ಜಲ ವಿವಾದದ ವಿಷಯವನ್ನು, ಡಾ:ರಾಜಕುಮಾರ್‌ರವರ ಅಪಹರಣದ ಸಂದರ್ಭಗಳನ್ನು ಬಹಳ ಉತ್ತಮ ರೀತಿಯಲ್ಲಿ ನಿಭಾಯಿಸಿ, ರಾಜ್ಯದ ಜನರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಂಡಿದ್ದರು. ಎದುರಾಗುತ್ತಿದ್ದ ಅನೇಕ ಸಮಸ್ಯೆಗಳ ಕುರಿತಂತೆ ಸಂಪುಟದ ಹಿರಿಯ ಸದಸ್ಯರ ಜೊತೆ ಮಾತನಾಡಿ, ಅವರ ನಂಬಿಕೆ, ವಿಶ್ವಾಸ, ಪ್ರೀತಿಯನ್ನು ಗಳಿಸಿಕೊಂಡು, ಸತತವಾಗಿ 5 ವರ್ಷಗಳ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದರು. ಆ ಸಂದರ್ಭದಲ್ಲಿ ಬಂದಂಥ ಅನೇಕ ವಿಷಯಗಳ ಬಗ್ಗೆ ಅಂದರೆ, ಆಲಮಟ್ಟಿ, ತುಂಗಭದ್ರಾ ಮತ್ತು ಕಾವೇರಿ ಜಲವಿವಾದ ಇರಬಹುದು ಅಥವಾ ರೈತರ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ವಿಷಯಗಳು ಬಂದಾಗ ರೈತರಿಗೆ ಅನುಕೂಲ ಮಾಡಿಕೊಡುವಂತಹ ವಾತಾವರಣವನ್ನು ನಿರ್ಮಾಣ ಮಾಡಿಕೊಡುತ್ತಿದ್ದರು. ಅದೇರೀತಿ, ಕೆರೆಗಳನ್ನು ಅಭಿವೃದ್ಧಿ ಮಾಡಬೇಕು

ಎನ್ನುವ ವಿಷಯ ಬಂದಾಗ ವಿಶ್ವಬ್ಯಾಂಕ್‌ನಿಂದ ಸಾಲ ಪಡೆದು, 3 ವರ್ಷಗಳ ಅವಧಿಯಲ್ಲಿ 1000 ಕೆರೆಗಳನ್ನು ಅಭಿವೃದ್ಧಿಪಡಿಸುವಂತಹ ಕೆಲಸ ಮಾಡಿದ್ದರು.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಡ್ರಾಪ್ ಔಟ್ ಆಗುವಂಥ ವಿಷಯ ಬಂತು. ಆಗ ಮಾನ್ಯ ವಿಶ್ವನಾಥ್‌ರವರು ಸಚಿವರಾಗಿದ್ದರು ಮತ್ತು ಮಾನ್ಯ ವಿಜಯಭಾಸ್ಕರ್‌ರವರು ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಬಡವರ ಮಕ್ಕಳು ಕುರಿ ಕಾಯುವುದಕ್ಕೆ, ದನ ಕಾಯುವುದಕ್ಕೆ ಹೋಗುತ್ತಿದ್ದುದರಿಂದ ಡ್ರಾಪ್ ಔಟ್ ಆಗುವಂಥದ್ದು ಆಗುತ್ತಿತ್ತು. ಈ ಕುರಿತು ನಮ್ಮೆಲ್ಲರ ಜೊತೆ ಮಾತನಾಡಿ, ಈ ಡ್ರಾಪ್ ಔಟ್ ಆಗುವುದನ್ನು ತಡೆಯುವುದಕ್ಕೆ ಏನು ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡಿದಾಗ, "ಮಿಡ್ ಡೇ ಮೀಲ್" ಯೋಜನೆಯನ್ನು ಪ್ರಾರಂಭ ಮಾಡಬೇಕೆನ್ನುವ ತೀರ್ಮಾನವಾಯಿತು. ಇಡೀ ರಾಷ್ಟ್ರದಲ್ಲೇ ಪ್ರಪ್ರಥಮವಾಗಿ ರಾಯಚೂರು ಜಿಲ್ಲೆಯಿಂದಲೇ ಈ ಯೋಜನೆಗೆ ಸ್ವತಃ ಅವರೇ ಬಂದು ಚಾಲನೆ ನೀಡಿದರು. ಇದರ ಜೊತೆ, ಮಹಿಳೆಯರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ "ಸ್ತ್ರೀ ಶಕ್ತಿ" ಯೋಜನೆಯನ್ನು ಮಾನ್ಯ ಸೋನಿಯಾ ಗಾಂಧಿಯವರಿಂದ ಉದ್ಘಾಟನೆ ಮಾಡಿಸಿದರು.

ರಾಜ್ಯದ ಅಭಿವೃದ್ಧಿಗಾಗಿ ಅನೇಕ ಹೊಸ ಯೋಜನೆಗಳನ್ನು ಜಾರಿಗೆ ತಂದಿದ್ದರು. KNNL (Karnataka Neeravari Nigam Limited), KBJNL (Krishna Bhagya Jala Nigam Limited) ಪ್ರಾರಂಭ ಮಾಡಿರುದಂಥದ್ದನ್ನು, ರಸ್ತೆಗಳನ್ನು ಅಭಿವೃದ್ಧಿ ಮಾಡಲು KRDCL (Karnataka Road Development Corporation Limited), KSHIP (Karnataka State Highways Improvement Project) ಪ್ರಾರಂಭ ಮಾಡಿದರು. ಒಟ್ಟಾರೆಯಾಗಿ, ಅವರ ಕಲ್ಪನೆ, ಅವರ ವಿಚಾರ, ಅವರ ದೂರದೃಷ್ಟಿ ರಾಜ್ಯದ ಅಭಿವೃದ್ಧಿಗೆ ಮತ್ತು ಜನತೆಗೆ ಸಂಬಂಧಪಟ್ಟಿರುವಂಥದ್ದೇ ಆಗಿತ್ತು. ಮಾನ್ಯ ಸಭಾಪತಿಗಳೆ, ನಾನು 1980 ನೇ ಇಸವಿಯಿಂದಲೂ ಅವರ ಜೊತೆಗಿದ್ದೆ. 1984ರಲ್ಲಿ ಮಂಡ್ಯದಲ್ಲಿ ಮಾನ್ಯ ಶಂಕರೇಗೌಡರ ವಿರುದ್ಧ ಚುನಾವಣೆಗೆ ನಿಂತು ಸೋತಿದ್ದರು. ಹಿಂದೆ ನಮ್ಮ ಭಾಗದ ಲೋಕಸಭಾ ಸದಸ್ಯರಾಗಿದ್ದ ಶ್ರೀ ಬಿ.ವಿ.ದೇಸಾಯಿಯವರು ತೀರಿಕೊಂಡ ಹಿನ್ನೆಲೆಯಲ್ಲಿ 1987ರಲ್ಲಿ ರಾಯಚೂರಿನಲ್ಲಿ ಉಪಚುನಾವಣೆ ನಡೆಯುವಂತಹ ಸಂದರ್ಭ

ಬಂತು. ಮಾನ್ಯ ಕೆ.ಹೆಚ್.ಪಾಟೀಲ್‌ರವರು ಮತ್ತು ಮಾನ್ಯ ಸಚ್ಚಿದಾನಂದ ಸ್ವಾಮಿಜಿಯವರು ನನ್ನನ್ನು ಕರೆದು, ಮಾನ್ಯ ಎಸ್.ಎಂ.ಕೃಷ್ಣರವರು ರಾಯಚೂರಿನಿಂದ ಉಪ ಚುನಾವಣೆಗೆ ಸ್ಪರ್ಧಿಸುವಂತೆ ಹೇಳಿ ಎಂದು ಸೂಚನೆ ಕೊಟ್ಟರು. ಈ ಕುರಿತು ಒಂದು ದಿನ ಬೆಳಗ್ಗೆ ಮಾನ್ಯ ಎಸ್.ಎಂ.ಕೃಷ್ಣರವರನ್ನು ಭೇಟಿಯಾಗಿ ವಿಷಯ ತಿಳಿಸಿದಾಗ ಅವರು, ನೀವು ನನ್ನ ಬಳಿ ವಿಷಯವನ್ನು ತೆಗೆದುಕೊಂಡು ಬಂದಿದ್ದೀರಿ; ಬಹಳ ಸಂತೋಷ, ನಿಮಗೆ ನನ್ನ ಕೃತಜ್ಞತೆಗಳು ಎಂದು ಹೇಳಿದರಲ್ಲದೇ, ಪಕ್ಷದ ವರಿಷ್ಠರಾದ ಮಾನ್ಯ ರಾಜೀವ್‌ಗಾಂಧಿಯವರು ಈ ಕುರಿತು ನನಗೆ ಸೂಚನೆ ಕೊಟ್ಟರೆ ಆ ನಿಟ್ಟಿನಲ್ಲಿ ಪ್ರಯತ್ನ ಮಾಡಬಹುದು; ಇಲ್ಲದಿದ್ದರೆ ಬೇಡ. ದಯವಿಟ್ಟು ಇದನ್ನು ಇಲ್ಲಿಗೆ ಡ್ರಾಪ್ ಮಾಡಿ, ಇದು ಹೊರಗಡೆ ಗೊತ್ತಾಗುವುದು ಬೇಡ ಎನ್ನುವ ಮಾತನ್ನು ಹೇಳಿದರು. ಅವರು ತಮ್ಮ ರಾಜಕಾರಣದ ಜೀವನದಲ್ಲಿ ವಿವಿಧ ಹಂತಗಳ ಮೂಲಕ ಮೇಲೆ ಬಂದರು. ಯಾವಾಗ ಎಲ್ಲಿ ಏನಾಗುತ್ತಾರೆ ಎನ್ನುವುದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಹೈಕಮಾಂಡ್‌ನ ಆದೇಶ ಮೇರೆಗೆ, ಸಂದರ್ಭಕ್ಕನುಗುಣವಾಗಿ ಅವರಿಗೆ ಹುದ್ದೆಯನ್ನು ನೀಡಿದ ನಂತರ ವಿಷಯ ನಮಗೆ ಗೊತ್ತಾಗುತ್ತಿತ್ತು. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದರು. ಆದರೆ ಆ ಸಂದರ್ಭದಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗುತ್ತಾರೆ ಎಂದು ನಾವುಗಳು ಅವರ ಮನೆ ಮುಂದೆ ಟೆಂಟ್ ಹಾಕಿಕೊಂಡು ಕುಳಿತುಕೊಂಡಿದ್ದೆವು. ಮಾನ್ಯ ಎಸ್.ಎಂ.ಕೃಷ್ಣ ದಂಪತಿಗಳು ಮಲಯ ಮಹದೇಶ್ವರ ಬೆಟ್ಟಕ್ಕೂ ಹೋಗಿ ಬಂದರು. ಇನ್ನು ಒಂದು ಗಂಟೆಯೊಳಗೆ ಸಿಎಲ್‌ಪಿ ಮೀಟಿಂಗ್ ನಡೆಯುತ್ತದೆ; ಮಾನ್ಯ ಎಸ್.ಎಂ.ಕೃಷ್ಣರವರೇ ಮುಖ್ಯಮಂತ್ರಿಗಳಾಗುತ್ತಾರೆ ಎಂದು ಇಡೀ ರಾಜ್ಯದ ಜನರು ಕಾಯುತ್ತಿದ್ದರು. ನಾವು ಅವರ ಜೊತೆಗೆ ಇದ್ದೆವು. ಆದರೆ, ಬೇರೆ ರೀತಿಯ ಸಂದರ್ಭ ಬಂದು ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದರು. ಅಂತಹ ಸಮಯದಲ್ಲೂ ಮಾನ್ಯ ಎಸ್.ಎಂ.ಕೃಷ್ಣರವರು ವಿಚಲಿತರಾಗಲಿಲ್ಲ. ನಮಗೆಲ್ಲರಿಗೂ ಧೈರ್ಯ ತುಂಬಿ, ಹೈಕಮಾಂಡ್‌ನಿಂದ ಏನು ಆದೇಶ ಬರುತ್ತದೆಯೋ ಅದನ್ನು ಪಾಲಿಸಬೇಕಾಗುತ್ತದೆ ಎಂಬ ಮಾತನ್ನು ಹೇಳಿದರು. ಆ ದಿನ ಸಾಯಂಕಾಲದವರೆಗೆ ಬಂದಂಥ ಜನರನ್ನು ಅವರೇ ಸಮಾಧಾನ ಮಾಡಿ ಕಳುಹಿಸಿದರು. ಹೀಗೆ, ಎಂತಹ ಸಂದರ್ಭ ಬಂದರೂ ಅದನ್ನು ನಿಭಾಯಿಸುವಂತಹ ಶಕ್ತಿಯನ್ನು ಪಡೆದಿದ್ದರು. ಇದರಿಂದಲೇ ಅವರು ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಒಳ್ಳೆಯ ಹೆಸರನ್ನು ಪಡೆದರು. ಸನ್ಮಾನ್ಯರು

ಅಗಲಿರುವಂಥದ್ದು ಅತ್ಯಂತ ದುಃಖಕರವಾದುದಾಗಿದೆ. ಪದ್ಮ ವಿಭೂಷಣ ಪುರಸ್ಕೃತರಾದ ಸನ್ಮಾನ್ಯರು ಇಡೀ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಮಾರ್ಗದರ್ಶನ ನೀಡಿದ್ದರು.

ರಾಜ್ಯದ 114 ತಾಲ್ಲೂಕುಗಳು ಹಿಂದುಳಿದಿದ್ದ ಕಾರಣದಿಂದ ಅದರ ಅಭಿವೃದ್ಧಿ ಸಲುವಾಗಿ ಡಾ:ನಂಜುಂಡಪ್ಪನವರ ವರದಿಯನ್ನು ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಪ್ರಯತ್ನ ಮಾಡಿದರು. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಆಗಿದ್ದಾಗ ಹೆಚ್‌ಕೆಡಿಬಿ ಪ್ರದೇಶಗಳ ಅಭಿವೃದ್ಧಿಗೆ ರೂ.44 ಕೋಟಿ ನೀಡಿದ್ದರು. ಮಾನ್ಯ ಧರ್ಮ್‌ಸಿಂಗ್‌ರವರ ಕಡೆಯಿಂದ ಹೇಳಿಸಿ, ನನ್ನನ್ನು ಹೆಚ್‌ಕೆಡಿಬಿ ಚೇರ್‌ಮೆನ್ ಆಗಬೇಕೆಂದು ಆದೇಶ ಮಾಡಿಸಿದರು. ಆ ಸಂದರ್ಭದಲ್ಲಿ ಹೆಚ್‌ಕೆಡಿಬಿ ಪ್ರದೇಶದ ಅಭಿವೃದ್ಧಿ ಕುರಿತು ಮಾತನಾಡಲು ಹೋದಾಗ ಅವರು, ನಿಮಗೆ ರೂ. 100 ಕೋಟಿ ನೀಡುತ್ತೇನೆ, ನೀವು ಮುಂದುವರೆಯಿರಿ ಎನ್ನುವ ಮಾತನ್ನು ಹೇಳಿದರು. ಅವರು ಮಾತು ಕೊಟ್ಟಂತೆ, ಇತಿಹಾಸದಲ್ಲೇ ಮೊದಲ ಬಾರಿಗೆ ಹೆಚ್‌ಕೆಡಿಬಿ ಭಾಗಕ್ಕೆ ಅಭಿವೃದ್ಧಿಗೆಂದು ರೂ.100 ಕೋಟಿ ಅನುದಾನ ನೀಡಿದರು. ಕಾವೇರಿ, ಕೃಷ್ಣಾ ಮತ್ತು ತುಂಗಭದ್ರಾ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟ ಅನೇಕ ಸಮಸ್ಯೆಗಳಿಗೆ ಸ್ಪಂದಿಸುವಂತಹ ಕೆಲಸ ಮಾಡಿದ್ದರು. ಕೊಪ್ಪಳ, ರಾಯಚೂರು, ಬಳ್ಳಾರಿ ಭಾಗಗಳಲ್ಲಿ ಟೇಲ್ ಎಂಡ್‌ಗೆ ಸಂಬಂಧಪಟ್ಟಂತೆ ಅನೇಕ ಸಮಸ್ಯೆಗಳಿತ್ತು. ಈ ಸಮಸ್ಯೆಯನ್ನು ನಿವಾರಿಸಲು ಏನೇನು ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಅವರ ಜೊತೆ ಚರ್ಚೆ ಮಾಡಿದರು. ಅಲ್ಲೊಂದು ಕೆನಾಲ್ ಬ್ರೀಚ್ ಆಯಿತು. ಆಗ ಅವರು ಉಪ ಮುಖ್ಯಮಂತ್ರಿಗಳಾಗಿದ್ದರು ಮತ್ತು ಆ ಸಂದರ್ಭದಲ್ಲಿ ಅವರು ದೆಹಲಿಯಲ್ಲಿದ್ದರೂ ಅಲ್ಲಿಂದ ಹೈದರಾಬಾದ್‌ಗೆ ಬಂದು, ಹೈದರಾಬಾದ್‌ನಿಂದ ಹೆಲಿಕಾಪ್ಟರ್ ಮೂಲಕ ಪೀಡಿತ ಪ್ರದೇಶಕ್ಕೆ ಬಂದು, ರೈತರಿಗೆ ಸಮಾಧಾನ ಮಾಡಿ, ಒಂದು ದಿವಸ ಅಲ್ಲೇ ಇದ್ದು, ಯುದ್ಧೋಪಾದಿಯಲ್ಲಿ ಕೆಲಸ ಮಾಡಿಸಿ ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆದು ನಿಂತಿದ್ದು ಬೆಳೆ ಹಾಳಾಗದಂತೆ ವ್ಯವಸ್ಥೆ ಮಾಡಿಸಿದರು. ಈ ರೀತಿ ಅನೇಕ ಸಂದರ್ಭದಲ್ಲಿ ರೈತರ ಪರವಾಗಿ ಕೆಲಸ ಮಾಡಿ, ಅವರಿಗೆ ಸಹಕಾರ ನೀಡಿ ಮುಂದಾಳತ್ವ ವಹಿಸಿದ್ದ ಮಾನ್ಯ ಎಸ್.ಎಂ.ಕೃಷ್ಣರವರು ನಮ್ಮನ್ನು ಅಗಲಿ ಹೋಗಿದ್ದಾರೆ. ಸದರಿ ಸಂತಾಪ ಸೂಚನೆಗೆ ನನ್ನ ಅನುಮೋದನೆ ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಮುತ್ಸದ್ದಿಯಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರ ಎಸ್.ಎಂ.ಕೃಷ್ಣರವರನ್ನು ಕಳೆದುಕೊಂಡಿದ್ದು ನಮ್ಮೆಲ್ಲರಿಗೂ ದುಃಖವಾಗಿದೆ. ಸನ್ಮಾನ್ಯರು ದೂರದೃಷ್ಟಿಯುಳ್ಳವರು, ಶಿಸ್ತುಬದ್ಧ ಜೀವನವನ್ನು ಮಾಡಿದವರು, ಎಲ್ಲರನ್ನೂ ಬಹಳ ವಿಶ್ವಾಸದಿಂದ ಕಾಣುವವರೂ ಆಗಿದ್ದರು. ಹಿರಿಯರು-ಕಿರಿಯರು ಎನ್ನದೇ ಎಲ್ಲರನ್ನೂ ಗೌರವಿಸುವಂತಹ ಸ್ವಭಾವವನ್ನು ಹೊಂದಿದ್ದರು. ಯುವಕರನ್ನು ಪ್ರೋತ್ಸಾಹಿಸುವುದರ ಜೊತೆಗೆ, ಸಮಕಾಲೀನರನ್ನು ಯಾವಾಗಲೂ ಜೊತೆಯಲ್ಲಿಟ್ಟುಕೊಂಡು, ಗೌರವಿಸಿ, ಪ್ರೋತ್ಸಾಹಿಸಿ ಅನೇಕರಿಗೆ ರಾಜಕೀಯ ಜೀವನವನ್ನು ಕಟ್ಟಿಕೊಟ್ಟಿದ್ದರು. ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಯುವಕರು ಬೆಳೆಯಬೇಕು, ಅವರೆಲ್ಲರೂ ಉತ್ತಮ ರೀತಿಯಲ್ಲಿ ಸೇವೆ ಮಾಡಬೇಕು ಎಂದು ಕನಸು ಕಂಡಿದ್ದರು.

(ಮುಂದು)

(736) 10-12-2024 11.50 ಡಿಎಸ್-ಬಿಎನ್ಎಸ್

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):**

ಅವರ ಅಗಲಿಕೆ ಇಡೀ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಇವತ್ತು ದೊಡ್ಡ ನಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ. ಅವರು ಮಿತ ಭಾಷಿಕರಾಗಿದ್ದರು. ಯಾರನ್ನು ಯಾವ ರೀತಿ ಗೌರವಿಸಬೇಕು ಎನ್ನುವುದನ್ನು ಅವರನ್ನು ನೋಡಿ ನಾವು ಕಲಿಯಬೇಕು. ಅನೇಕ ಸಂದರ್ಭಗಳಲ್ಲಿ ನಾವು ಯುವಕರಾಗಿ ಅವರನ್ನು ಹಿಂಬಾಲಿಸಿದ್ದು ಉಂಟು. ನಾವು ಯಾವಾಗ ಹೋದರು ಎಷ್ಟು ಬೇಕು ಅಷ್ಟು ಮಾತ್ರ ಮಾತನಾಡುತ್ತಿದ್ದರು. ರಾಜಕೀಯದಲ್ಲಿದ್ದರೂ ಕೂಡ ಯಾವ ರೀತಿ ನಾವು ಜೀವನದಲ್ಲಿ ನಡೆದುಕೊಳ್ಳಬೇಕು ಎನ್ನುವ ಪ್ರಜ್ಞೆಯನ್ನು ಮೂಡಿಸುವುದರಲ್ಲಿ ಅವರು ಬಹಳ ನಿಸ್ಸೀಮರಾಗಿದ್ದರು. ಅವರು ಅಲ್ಪವೇ ಮಾತನಾಡಿದರೂ ಕೂಡ ಅರ್ಥಗರ್ಭಿತವಾಗಿರುತ್ತಿತ್ತು. ಬೇರೆ ಯಾರೇ ಆಗಿದ್ದರೂ ಅದನ್ನು ಒಪ್ಪುವಂತಹ ರೀತಿಯಲ್ಲಿ ಅವರು ಮಾತುಗಳು ಇರುತ್ತಿತ್ತು. ಒಬ್ಬ ವ್ಯಕ್ತಿ ಸದನದ ಸದಸ್ಯರು ಆಗಿದ್ದರು. ಕೆಳಮನೆಯ ಸದಸ್ಯರು ಆಗಿದ್ದರು, ರಾಜ್ಯಸಭೆ ಮತ್ತು ಲೋಕಸಭೆಯಲ್ಲೂ ಇದ್ದರು. ಕೇಂದ್ರ

ಸಚಿವರಾಗಿ ಅನೇಕ ಸಾಧನೆಗಳನ್ನು ಮಾಡಿದ್ದರು. ಈ ರಾಜ್ಯಕ್ಕೆ ಅವರು ಮೊದಲ ಉಪ ಮುಖ್ಯಮಂತ್ರಿಯಾಗಿ ಬಂದವರು. ಆ ಸ್ಥಾನವನ್ನು ಬಹುಶಃ ಅವರಿಗಾಗಿಯೇ ಕೊಡಲಾಯಿತು ಎಂದು ನನಗನಿಸುತ್ತದೆ. ಅವರಾದ ನಂತರ ಬಹಳ ಜನ ಉಪ ಮುಖ್ಯಮಂತ್ರಿಗಳಾಗಿದ್ದರು. ಅದು ಬೇರೆ ವಿಷಯ. ಅವರು ಪ್ರಥಮ ಉಪ ಮುಖ್ಯಮಂತ್ರಿಗಳಾಗಿದ್ದರು. ಅದಾದ ನಂತರ ಅವರು ಮುಖ್ಯಮಂತ್ರಿಗಳಾದರು. ಆದರೆ ಅವರಿಗೂ ನನಗೂ ಬಹಳ ಅವಿನಾಭಾವ ಸಂಬಂಧವಿತ್ತು. ನಾವು ಕಿರಿಯರಾಗಿದ್ದರೂ ಕೂಡ 1991-92 ರಲ್ಲಿ ಅವರು ಸ್ಪೀಕರ್ ಆಗಿದ್ದರು. ನನಗೆ ಜ್ಞಾಪಕವಿದೆ, ನನ್ನ ಇಬ್ಬರು ಸ್ನೇಹಿತರು ಇದೇ ಸದನದ ಸದಸ್ಯರಾಗಿದ್ದರು. ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಮತ್ತು ಶ್ರೀ ಎಲ್.ಎನ್.ಮೂರ್ತಿ ಇವರ ಹತ್ತಿರ ನನ್ನನ್ನು ಕರೆಯುವುದಕ್ಕೆ ಹೇಳಿ ಕಳುಹಿಸಿದ್ದರು. ನನಗೆ ರಾಷ್ಟ್ರ ಮಟ್ಟದಲ್ಲಿ ಡಾ॥ ಸುಬ್ರಹ್ಮಣ್ಯ ಸ್ವಾಮಿ ಎಂಬುವರ ಪರಿಚಯವಿತ್ತು. ಆಗ ಶ್ರೀ ಪಿ.ವಿ.ನರಸಿಂಹರಾವ್‌ರವರು ಪ್ರಧಾನ ಮಂತ್ರಿಗಳಾಗಿದ್ದರು. ಅವರ ಹತ್ತಿರ ಸಂಬಂಧ ಬಹಳ ಚೆನ್ನಾಗಿತ್ತು. ಆ ಕಾರಣದಿಂದ ಅವರು 'ನಾರಾಯಣಸ್ವಾಮಿ, ನಾನು ಮುಖ್ಯಮಂತ್ರಿಯಾಗಬೇಕೆನ್ನುವುದು ನನ್ನ ಅನಿಸಿಕೆಯಾಗಿದೆ, ನೀನು ಏನು ಹೇಳುತ್ತೀಯಾ' ಎಂದು ನನ್ನನ್ನು ಕೇಳಿದರು. 'ನಾವೇನು ಹೇಳುವುದು, ನಾವು ಸಣ್ಣ ಜನ, ನಾವು ಏನು ಹೇಳುವುದಿದೆ' ಎಂದು ನಾನು ಹೇಳಿದೆ. 'ನನಗೆ ನೀವು ಒಂದು ಸಹಾಯ ಮಾಡಬಹುದೇ, ನಾನು ಡಾ॥ ಸುಬ್ರಹ್ಮಣ್ಯ ಸ್ವಾಮಿಯವರನ್ನು ಭೇಟಿ ಮಾಡುವುದಕ್ಕೆ ನೀವು ಅವರ ಹತ್ತಿರ ಮಾತನಾಡಬಹುದೇ' ಎಂದು ಕೇಳಿದರು. 'ಇಷ್ಟೊಂದು ದೊಡ್ಡ ಮಾತು ಏಕೆ ಸರ್, ನಾನು ಅವರ ಹತ್ತಿರ ಮಾತನಾಡುತ್ತೇನೆ ಎಂದು' ಹೇಳಿ, ನಾನು ಅವರ ಹತ್ತಿರ ಮಾತನಾಡಿದೆ, ತಕ್ಷಣ ಅವರು ಒಪ್ಪಿದರು. ಇವರು ದೆಹಲಿಗೆ ಹೋದಾಗ ಅವರ ಹತ್ತಿರ ಮಾತನಾಡಿದರು. ಅದಾದ ನಂತರ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದರು. ಆಗ ಮುಖ್ಯಮಂತ್ರಿಯಾಗಿದ್ದು ಶ್ರೀ ವೀರಪ್ಪ ಮೊಯ್ಲಿಯವರು. ಆದರೆ ಅಲ್ಲಿಂದ ಎರಡು ಕವರ್ ಬಂದಿತ್ತು. ಅದರಲ್ಲಿ ಉಪ ಮುಖ್ಯಮಂತ್ರಿ ಎಂದು ಇವರ ಹೆಸರು ಬರೆದಿದ್ದರು. ಅವತ್ತು ಪ್ರಾರಂಭವಾದ ಅವರ ಎತ್ತರದ ಜೀವನ ಕೊನೆಗೆ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತು. ಈ ದೇಶಕ್ಕೆ ಉತ್ತಮವಾದ ಕೊಡುಗೆಯನ್ನು ಕೊಡುವುದಕ್ಕೆ ಆಯಿತು. ಆದರೆ, ಅವರು ಮುಖ್ಯಮಂತ್ರಿಯಾದಾಗ ಅವರ ಆಡಳಿತದ ಹಾದಿ ಬಹಳ ಸುಗಮವಾಗಿರಲಿಲ್ಲ. ಅವರು ಅನೇಕ

ಸಂಕಷ್ಟಗಳನ್ನು ಎದುರಿಸಬೇಕಾಯಿತು. ಉತ್ತಮ ಆಡಳಿತ ಕೊಡಬೇಕೆಂದರೂ ಬರಗಾಲ ಅವರನ್ನು ಪೀಡಿಸುತ್ತಿತ್ತು. ಆಗ ಬಹಳ ಅನಾವೃಷ್ಟಿ ಕಾಲ. ಅವರು ಅದನ್ನು ಎದುರಿಸಬೇಕಾಯಿತು. ಬರಗಾಲದ ಜೊತೆಗೆ ಕಾವೇರಿ ನೀರಿನ ಸಮಸ್ಯೆ. ಬರಗಾಲವಿರುವುದರಿಂದ ತಮಿಳುನಾಡಿಗೆ ನೀರು ಬಿಡಬೇಕಾಯಿತು, ಆದರೆ ಇಲ್ಲಿ ರೈತರು ಒಪ್ಪುವುದಿಲ್ಲ. ಇಂತಹ ಪರಿಸ್ಥಿತಿಯನ್ನು ನಿಭಾಯಿಸಬೇಕಾದರೆ ಕೋರ್ಟ್‌ಗೆ ಪ್ರಕರಣ ದಾಖಲಾಯಿತು. ಕೋರ್ಟ್‌ನಿಂದ ಅವರ ಮೇಲೆ strictures pass ಆಯಿತು. ಅವರ ನೇತೃತ್ವದ ಸರ್ಕಾರ ಇರಬೇಕಾದರೆ ಪಾದಯಾತ್ರೆ ಮಾಡಬೇಕಾಯಿತು. ಅವರು ಇವೆಲ್ಲಾ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅದು ಮಾತ್ರವಲ್ಲ, ಕಾಡುಗಳ್ಳ ವೀರಪ್ಪನ್‌ರವರು ಶ್ರೇಷ್ಠ ನಟ ಡಾ॥ ರಾಜಕುಮಾರ್‌ರವರನ್ನು ಅಪಹರಣ ಮಾಡಿದರು. ಅದಕ್ಕಾಗಿ ಅವರು ತುಂಬಾ ಶ್ರಮಪಡಬೇಕಾಯಿತು. ಈ ರೀತಿ ಅನೇಕ ಕಷ್ಟಗಳನ್ನು ಅವರು ಎದುರಿಸಬೇಕಾಯಿತು. ಇಂತಹ ಒಬ್ಬ ಮುತ್ಸದ್ಧಿ ರಾಜ್ಯಪಾಲರಾಗಿ ಕೆಲಸ ಮಾಡಿದ್ದರು. ಬಹುಶಃ ಅವರು ಅಲಂಕರಿಸದಿರುವಂತಹ ಒಂದು ಸ್ಥಾನ ಎಂದರೆ ದೇಶದ ಪ್ರಧಾನ ಮಂತ್ರಿಯಾಗಲಿಲ್ಲ. ಈ ಎಲ್ಲಾ ಹುದ್ದೆಗಳನ್ನು ಅವರು ಅಲಂಕರಿಸಿದ್ದರು. ಅವರ ಜೀವನ ಬಹುಶಃ ನಮ್ಮೆಲ್ಲರಿಗೂ ಕೂಡ ಒಂದು ಪಾಠವಾಗಿದೆ. ನಿನ್ನೆಯೂ ಕೂಡ ನಾವು ಅನೇಕರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದೇವೆ. ಶಿಕ್ಷಣ ತಜ್ಞರು ಇರಬಹುದು, ಅಥವಾ ಕಾರ್ಮಿಕರಿಗೆ ಕೆಲಸ ಕೊಡುವಂತಹ ಕಾರ್ಖಾನೆಗಳನ್ನು ತೆರೆದಿರುವಂತಹ ಶ್ರೀ ರತನ್ ಟಾಟಾರವರಿಗೂ ಕೂಡ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದೇವೆ. ಹೀಗೆ ಇಂತಹ ವ್ಯಕ್ತಿತ್ವಗಳಿಂದ ಕಲಿಯುವಂಥದ್ದು ಈಗಿನ ಪೀಳಿಗೆಗೆ ಬಹಳಷ್ಟು ಇದೆ. ಇದನ್ನು ನಾವು ಮೈಗೂಡಿಸಿಕೊಳ್ಳಬೇಕು. ಅವರ ಜೀವನವೇ ನಮಗೆ ಪಾಠ ಆಗಬೇಕು. ಅವರ ನಡವಳಿಕೆ ಯಾವ ರೀತಿ ಇತ್ತು ಅದನ್ನು ನೋಡಿ ನಾವು ಕಲಿತುಕೊಳ್ಳಬೇಕು. ನಾನು ಶ್ರೀ ಸಾರೆಕೊಪ್ಪ ಬಂಗಾರಪ್ಪನವರ ಶಿಷ್ಯನಾಗಿ ಬಂದವನು. ಒಂದು ಕಾಲಘಟ್ಟದಲ್ಲಿ 1998-99 ರಲ್ಲಿ ಅವರು ರಾಜ್ಯಸಭೆಯ ಸದಸ್ಯರಾಗಿದ್ದರು. ಶ್ರೀ ಬಂಗಾರಪ್ಪನವರು, ನಾವು ದೆಹಲಿಗೆ ಹೋದೆವು. ಶ್ರೀ ಬಂಗಾರಪ್ಪನವರನ್ನು ರಾಜ್ಯದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಾವು ಅಂದುಕೊಂಡು ದೆಹಲಿಗೆ ಹೋಗಿದ್ದೆವು. ಶ್ರೀಯುತರು (ಶ್ರೀ ಎಸ್.ಕೃಷ್ಣ) ನಮಗೆ ಫೋನ್ ಮಾಡಿದರು. ನಾವು ಅಲ್ಲೇ ಇದ್ದೆವು. 'ಒಂದು ನಿಮಿಷ ಮನೆಗೆ ಬಂದು ಹೋಗಿ' ಎಂದು ಹೇಳಿದರು. ದೆಹಲಿಯಲ್ಲಿ ಅವರ ಮನೆಗೆ ಹೋದೆವು. 'ಶ್ರೀ ಬಂಗಾರಪ್ಪನವರು, ನಾನು ಒಂದು ನಿಮಿಷ

ಮಾತನಾಡಬೇಕಲ್ಲ' ಎಂದು ಹೇಳಿದರು. 'ಆಯಿತು ಸರ್, ಕೇಳುತ್ತೇನೆ' ಎಂದು ಹೇಳಿದೆ. ಅವರು ಒಪ್ಪಿಕೊಂಡರು. ಇವರ ಮನೆಗೆ ಕರೆದುಕೊಂಡು ಹೋದೆವು. ಚಹಾ ಕುಡಿಯುತ್ತಾ ಮಾತನಾಡುತ್ತಾ ಶ್ರೀ ಎಸ್.ಎಂ.ಕೃಷ್ಣರವರು 'ಬಂಗಾರಪ್ಪರವರೇ, ನನಗೂ ನಿಮ್ಮ ಅವಶ್ಯಕತೆ ಇದೆ, ನೀವು ನನಗೆ ಆಶೀರ್ವಾದ ಮಾಡಬೇಕೆಂದು' ಹೇಳಿದರು. 'ಹೇ, ಏಕೆ ಅಷ್ಟು ದೊಡ್ಡ ಮಾತನಾಡುತ್ತೀರಿ, ಆಶೀರ್ವಾದ ನಮ್ಮ ನಮ್ಮಲ್ಲಿ ಏಕೆ, ನಾವೆಲ್ಲಾ ಸ್ನೇಹಿತರು' ಎಂದು ಹೇಳಿದರು. ನಾನು ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ಕರ್ನಾಟಕಕ್ಕೆ ಬರುತ್ತಿದ್ದೇನೆ ಎಂದು ಹೇಳಿದ ತಕ್ಷಣ ಆಶ್ಚರ್ಯವಾಯಿತು. ಬೆಳಗ್ಗೆ ಶ್ರೀಮತಿ ಸೋನಿಯಾ ಗಾಂಧಿಯವರನ್ನು ಭೇಟಿ ಮಾಡುವುದಿತ್ತು. ಅಲ್ಲಿಗೆ ಹೋದಾಗ ಅವರನ್ನು ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಆಗಲೇ ತೀರ್ಮಾನವಾಗಿದೆ ಎಂಬುದು ಗೊತ್ತಾಯಿತು. ಹಾಗೆ ಅವರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ರೀತಿಯ ಜವಾಬ್ದಾರಿಗಳನ್ನು ನಿರ್ವಹಿಸಿದ ಆ ಮಹಾನುಭವರವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅಂಥವರಿಗೆ ನಾವು ಇವತ್ತು ಶ್ರದ್ಧಾಂಜಲಿಯನ್ನು ಅರ್ಪಿಸುವಂತಹ ಕಾರ್ಯವನ್ನು ಮಾಡುತ್ತಿದ್ದೇವೆ. ಇವತ್ತು ರಾಜಕೀಯ ರಂಗದಲ್ಲಿ ನಮ್ಮನ್ನು ಅಗಲಿದ ಶ್ರಿ ಎಸ್.ಎಂ.ಕೃಷ್ಣರವರಿಂದ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಬಹಳ ರಾಜಕೀಯವಾಗಿ, ಸಾಮಾಜಿಕವಾಗಿ ನಮಗೆಲ್ಲರಿಗೂ ಆಘಾತವಾಗಿದೆ. ಅದು ತುಂಬಲಾರದ ನಷ್ಟವಾಗಿದೆ. ಆದರೆ, ಅವರನ್ನು ಕಳೆದುಕೊಂಡಿರುವಂತಹ ಅಪಾರ ಬೆಂಬಲಿಗರೆಲ್ಲರಿಗೂ ಕೂಡ ಇವತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ಕೊಡಲಿ. ಅವರ ಕುಟುಂಬಕ್ಕೂ ಭಗವಂತನು ಶಕ್ತಿ ಕೊಡಲಿ ಎಂದು ನಾನು ಪ್ರಾರ್ಥನೆ ಮಾಡುತ್ತಾ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ನಮ್ಮ ಸದನದಲ್ಲಿ ನಾವು ಒಂದು ನಿಯಮವನ್ನು ಮಾಡಿಕೊಂಡಿದ್ದೇವೆ. ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಶ್ರದ್ಧಾಂಜಲಿಯನ್ನು ಮಾಡಿ ಸದನವನ್ನು ಮುಂದೂಡಬೇಕೆಂದು ತೀರ್ಮಾನ ಮಾಡಿದ್ದೆವು. ಆದರೆ ಇದೊಂದು ವಿಶಿಷ್ಟವಾದಂತಹ ಸನ್ನಿವೇಶ. ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಅತ್ಯಂತ ಹೆಸರುವಾಸಿಯಾದಂತಹ ಒಬ್ಬ ಶ್ರೇಷ್ಠ ರಾಜಕಾರಣಿ ಮತ್ತು ಮುಖ್ಯಮಂತ್ರಿಯಾಗಿದ್ದಂಥವರು. ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಇದನ್ನು

ಸ್ವಲ್ಪ ಸಡಿಲಿಸಿ ಬೇರೆಯವರು ಯಾರಾದರೂ ಮಾತನಾಡುವವರಿದ್ದರೆ ಮಾತನಾಡಲಿ. ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅನುಮತಿ ಕೊಡುತ್ತೇನೆ. ಐದು ನಿಮಿಷ ಮಾತನಾಡಬೇಕು. ನಾನು ಹೆಸರನ್ನು ಕರೆಯುತ್ತೇನೆ. ಈಗ ಡಾ॥ತಿಮ್ಮಯ್ಯನವರು ಮಾತನಾಡಲಿ.

(ಮುಂದು)

(737) 10/12/2024 12:00 ಎಸ್‌ಪಿಆರ್/ಜಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ॥ಡಿ.ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ದಿವಂಗತ ಎಸ್.ಎಂ.ಕೃಷ್ಣ ರವರು ನಮ್ಮ ರಾಜ್ಯದ ಒಬ್ಬ ಸುಶಿಕ್ಷಿತ, ಶಿಸ್ತಿನ ಮುಖ್ಯ ಮಂತ್ರಿಗಳು ಮತ್ತು ಸಮಾಜ ಸೇವಕರಾಗಿದ್ದರು. ಕಳೆದ ಅನೇಕ ವರ್ಷಗಳಲ್ಲಿ ಅವರು ಮೂರು ಬಾರಿ ಲೋಕಸಭಾ ಸದಸ್ಯರಾಗಿ ಮತ್ತು ಒಂದು ಬಾರಿ ರಾಜ್ಯ ಸಭಾ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಶ್ರೀಯುತರು 1989-1993 ರ ಅವಧಿಯಲ್ಲಿ ವಿಧಾನ ಸಭೆಯ ಸಭಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. 1993-94 ರಲ್ಲಿ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ ಹಾಗೂ 1999-2004 ರ ವರೆಗೆ ಮುಖ್ಯಮಂತ್ರಿಗಳಾಗಿ ಈ ನಾಡಿನ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಬಗ್ಗೆ ಬಹಳ ಮುಖ್ಯವಾಗಿ ನಾವು ನೆನೆಸಿಕೊಳ್ಳಬೇಕಾದುದ್ದು ಏನೆಂದರೆ, ಬೆಂಗಳೂರು ನಗರವನ್ನು "ಸಿಲಿಕಾನ್ ಸಿಟಿ" ಯನ್ನಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ಅಧಿಕಾರಾವಧಿಯ ಸಂದರ್ಭದಲ್ಲಿ ದಿವಂಗತ ಡಾ॥ ರಾಜ್‌ಕುಮಾರ್ ಅವರ ಅಪಹರಣವಾಗಿತ್ತು. ಆ ಸಂದರ್ಭದಲ್ಲಿ ಅವರು ತೆಗೆದುಕೊಂಡ ನಿಲುವನ್ನು ನಾವು ಮರೆಯುವುದಕ್ಕೆ ಆಗುವುದಿಲ್ಲ. ಒಂದು ಪಕ್ಷ ಆ ದಿನ ರಾಜ್‌ಕುಮಾರ್ ರವರ ಜೀವಕ್ಕೆ ಕುಂದು ಬಂದಿದ್ದರೆ, ಇಡೀ ರಾಜ್ಯವೇ ಬೆಂಕಿ ಹತ್ತಿಕೊಂಡು ಉರಿಯುವ ಪರಿಸ್ಥಿತಿಯದ್ದಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಶ್ರೀಯುತರು ನಮ್ಮ ನಾಡನ್ನು ಹಾಗೂ ಡಾ॥ ರಾಜ್‌ಕುಮಾರ್‌ರವರನ್ನೂ ರಕ್ಷಣೆ ಮಾಡಿದರು. ಇಂತಹ ದೊಡ್ಡ ಕೀರ್ತಿ ಶ್ರೀಯುತರಿಗೆ ಸಲ್ಲುತ್ತದೆ.

1999-2002 ರ ಅವಧಿಯಲ್ಲಿ ನಾನು ಆರೋಗ್ಯ ಇಲಾಖೆಯಲ್ಲಿ ಹೆಚ್ಚುವರಿ ನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಆಗ ನಾನು ಏಡ್ಸ್ ವಿಭಾಗದ ಮುಖ್ಯಸ್ಥನಾಗಿದ್ದೆನು. ಅವತ್ತಿನ ದಿನಗಳಲ್ಲಿ

ಏಡ್ಸ್ ರೋಗವು ಇಡೀ ರಾಷ್ಟ್ರ ಮತ್ತು ರಾಜ್ಯವನ್ನೇ ತಲ್ಲಣಗೊಳಿಸಿತ್ತು. ಅಂದಿನ ಪರಿಸ್ಥಿತಿಯಲ್ಲಿ ನಾವು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಹಾಗೂ ತಡೆಗಟ್ಟುವಿಕೆಯ ಕ್ರಮಗಳ ಬಗ್ಗೆ ಅವರು ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರತಿ ತಿಂಗಳೂ ಸಮೀಕ್ಷೆ ನಡೆಸುತ್ತಿದ್ದರು. ಇವರು ತೆಗೆದುಕೊಂಡ ಕ್ರಮಗಳಿಂದಾಗಿ ನಾವು ಕೇವಲ ಎರಡ್ಮೂರು ವರ್ಷಗಳಲ್ಲಿಯೇ ರೋಗವನ್ನು ನಿಯಂತ್ರಣ ಮಾಡುವ ಪರಿಸ್ಥಿತಿಗೆ ಬಂದಿತು. ಶ್ರೀಯುತರು ಈ ನಾಡು ಕಂಡ ಶಿಸ್ತಿನ ಮತ್ತು ಸರಳ ವ್ಯಕ್ತಿತ್ವದ ವ್ಯಕ್ತಿಯಾಗಿದ್ದರು. ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ನಾನು ಬಯಸುತ್ತೇನೆ. ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಪೀಠಕ್ಕೆ ವಂದಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ದಿವಂಗತ ಮಾನ್ಯ ಎಸ್.ಎಂ.ಕೃಷ್ಣ ರವರಿಗೆ ಅನೇಕ ಹಿರಿಯರ ಒಡನಾಡಿಗಳಿದ್ದಾರೆ. ಇವತ್ತಿನ ಬೆಳಗ್ಗೆ ದೂರದರ್ಶನದ ಯಾವುದೇ ಚಾನೆಲ್‌ಗಳನ್ನು ನೋಡಿದರೂ ಅಲ್ಲಿ ಅವರ ಗುಣಗಾನಗಳನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಶ್ರೀಯುತರು ನೀಡಿರುವ ಕೊಡುಗೆಯನ್ನು ನಾವು ಯಾರೂ ಸಹ ಮರೆಯುವಂತಿಲ್ಲ. ಅವರೊಬ್ಬ ಮಾದರಿ ವ್ಯಕ್ತಿಯಾಗಿದ್ದರು. ಸಂತಾಪ ಸೂಚನೆಯಲ್ಲಿ ಪ್ರಸ್ತಾಪಿಸಿದಂತೆ, ಸಾಂಸ್ಕೃತಿಕ, ಸಾಹಿತ್ಯ ನೆಲೆಗಟ್ಟುಗಳಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ ಇತ್ತು. ಇವರು ಮಿತಭಾಷಿಗಳಾಗಿದ್ದು, ಉತ್ತಮ ಆಡಳಿತಗಾರರಾಗಿದ್ದರು. ಕೇಲವೇ ರಾಜಕಾರಣಿಗಳು ಮಾತ್ರವೇ ನಾಲ್ಕೂ ಸದನಗಳನ್ನು ನೋಡಿದ್ದಾರೆ. ಆ ಪೈಕಿ ಶ್ರೀಯುತರೂ ಸಹ ಒಬ್ಬರಾಗಿದ್ದಾರೆ. ಸದರಿಯವರು ನಾಲ್ಕೂ ಸದನಗಳನ್ನು ಅಲಂಕರಿಸಿ, ಮಂತ್ರಿಗಳಾಗಿ, ಸಭಾಧ್ಯಕ್ಷರಾಗಿ, ಕೇಂದ್ರ ಸಚಿವರಾಗಿ, ರಾಜ್ಯಪಾಲರಾಗಿ ಹತ್ತು ಹಲವಾರು ಹುದ್ದೆಗಳನ್ನು ಅಲಂಕರಿಸಿದ್ದು, ಎಲ್ಲಾ ಹುದ್ದೆಗಳಿಗೆ ಆ ಸ್ಥಾನಗಳ ಗೌರವವನ್ನು ತುಂಬಿದ್ದರು ಎನ್ನುವ ವಿಚಾರವನ್ನು ನಾವುಗಳು ಮನಸಾರೆ ಇಂದು ಮಾತನಾಡುತ್ತಿದ್ದೇವೆ. ಅವರು ಅತ್ಯಂತ ಶಿಸ್ತುಬದ್ಧವಾದ ರಾಜಕಾರಣಿಯಾಗಿದ್ದರು. ಇವರು ಯಾವತ್ತೂ ಯಾವುದೇ ಸಂದರ್ಭದಲ್ಲಿಯೂ ಧೃತಿಗೆಡದೇ, ಸಮಯೋಚಿತವಾಗಿ ಕೆಲಸ ಮಾಡುತ್ತಿದ್ದರು. ಈ ಬಗ್ಗೆ ಡಾ॥ ತಿಮ್ಮಯ್ಯನವರು ಉದಾಹರಣೆಯನ್ನು ನೀಡಿದ್ದಾರೆ. ಡಾ॥ ರಾಜ್‌ಕುಮಾರ್ ರವರು ಅಪಹರಣವಾದ ಸಂದರ್ಭದಲ್ಲಿ ಅವರು ಬಹಳ ಸ್ಥಿತಪ್ರಜ್ಞರಾಗಿ ಬಹಳ ಅಚ್ಚುಕಟ್ಟಾಗಿ ರಾಜ್ಯದ ಎಲ್ಲಾ

ಜನರ ಆತಂಕವನ್ನು ನಿವಾರಣೆ ಮಾಡಿದ ಕೀರ್ತಿಗೆ ಪಾತ್ರರಾಗಿದ್ದಾರೆ. ನಮಗೆಲ್ಲಾ ತಿಳಿದಿರುವಂತೆ, ಅವರು ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ವಹಿಸಿಕೊಂಡ ಸಂದರ್ಭದಲ್ಲಿ 18,000 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡಿಸಿದ್ದರು. ಅವರ ಅಂತಿಮ ಅಧಿಕಾರಾವಧಿಯಲ್ಲಿ 34,000 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡಿಸಿದ್ದರು. ಇಡೀ ರಾಜ್ಯ ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರ್ತಿಸುವಂತಹ ಕೆಲಸವನ್ನು ಮಾಡಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಅವರು ಕೆಲಸ ಮಾಡಿದ ಎಲ್ಲಾ ವಿಚಾರಗಳಲ್ಲೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ. ಬಹಳ ಮುಖ್ಯವಾಗಿ ಹೇಳುವುದಾದರೆ, ಅವರು ಕಾಲೇಜಿನ ಉಪನ್ಯಾಸಕರಾಗಿಯೂ ಸಹ ಕರ್ತವ್ಯ ನಿರ್ವಹಿಸಿದ್ದಾರೆ. "ಎಲ್ಲಾ ವೃತ್ತಿಗಳಗಿಂತ ನನಗೆ ಉಪನ್ಯಾಸಕ ವೃತ್ತಿಯೇ ಬಹಳ ತೃಪ್ತಿಕೊಟ್ಟಿದೆ" ಎಂದು ಅವರು ಮುಖ್ಯಮಂತ್ರಿಗಳಾಗಿದ್ದಾಗ ಪ್ರಸ್ತಾಪಿಸಿದ್ದರು. ಇನ್ನೂ ಅನೇಕ ಸದಸ್ಯರುಗಳು ಮಾತನಾಡುವವರಿದ್ದಾರೆ. ಹೀಗಾಗಿ ಅವರ ಬಗ್ಗೆ ಹೆಚ್ಚಿನ ವಿಚಾರಗಳನ್ನು ಪ್ರಸ್ತಾಪಿಸಲು ನಾನು ಬಯಸುವುದಿಲ್ಲ.

ಮತ್ತೊಂದು ವಿಚಾರ ಹೇಳುವುದಾದರೆ, ಅವರು ನನಗೆ ಬಹಳ ಹತ್ತಿರದ ಸಂಬಂಧಿಯಾಗಿದ್ದಾರೆ. ಅವರ ಪತ್ನಿ ಶ್ರೀಮತಿ ಪ್ರೇಮ ರವರು ನನ್ನ ಅತ್ತೆಯಾಗಿದ್ದಾರೆ. ಶ್ರೀಮತಿ ಪ್ರೇಮಕ್ಕ ಹಾಗೂ ನನ್ನ ಅತ್ತೆಯವರು ಅಕ್ಕ ತಂಗಿಯಾಗಿದ್ದಾರೆ. ಈ ವಿಚಾರದಲ್ಲಿ ನಾನು ಒಂದು ಸನ್ನಿವೇಶವನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಯಸುತ್ತೇನೆ. ಅವರು ಮದುವೆಯಾಗಿ ಮಾವನ ಮನೆಗೆ ಅಳಿಯನಾಗಿ ಹೋದ ಹಾಗೂ ನಾನೂ ಸಹ ಮದುವೆಯಾಗಿ ಮಾವನ ಮನೆಗೆ ಅಳಿಯನಾಗಿ ಹೋದ ಎರಡೂ ಸಂದರ್ಭಗಳನ್ನು ಇಲ್ಲಿ ಪ್ರಸ್ತಾಪಿಸಬೇಕೆಂದು ಅನ್ನಿಸುತ್ತಿದೆ. ಹೀಗಾಗಿ ಹೇಳುತ್ತಿದ್ದೇನೆ. ನನ್ನ ಶ್ರೀಮತಿಯ ಅಜ್ಜನವರು ಅಂದರೆ ದಿವಂಗತ ಎಸ್.ಎಂ.ಕೃಷ್ಣ ರವರ ಮಾವನವರು ನನ್ನ ಮದುವೆಯಾಗಿ ಹೆಂಡ್ತಿಯೊಂದಿಗೆ ಅವರ ಮನೆಗೆ ಹೋದಾಗ ನನಗೆ ತಿನ್ನಲು ಬಾಳೆಹಣ್ಣನ್ನು ನೀಡಿದ್ದರು. ಆಗ ನಾನು ಅವರ ಎದುರಿಗೆ ಅದನ್ನು ಸುಳಿದು ತಿಂದೆ. ಆಗ ಸ್ವಲ್ಪ ಹೊತ್ತಿನ ನಂತರ ಅಜ್ಜನವರು ನನಗೆ ಪ್ರಸಂಗವೊಂದನ್ನು ಹೇಳಿದರು. ಆಗ ನನ್ನ ಶ್ರೀಮತಿಯವರೂ ಸಹ ಅಲ್ಲಿಯೇ ಇದ್ದರು. ಈ ಹಿಂದೆ ಅದೇ ಮನೆಗೆ ಶ್ರೀಯುತರು ಅಳಿಯನಾಗಿ ಬಂದ ಸಂದರ್ಭದಲ್ಲಿಯೂ ಸಹ ಅದೇ ಅಜ್ಜನವರು

ಅವರಿಗೂ ಸಹ ತಿನ್ನಲು ಬಾಳೆಹಣ್ಣನ್ನು ಕೊಟ್ಟಿದ್ದರಂತೆ. ಆಗ ಶ್ರೀಯುತರು ಬಾಳೆಹಣ್ಣನ್ನು ಸುಳಿದು ಅರ್ಧ ಹಣ್ಣನ್ನು ಅವರು ತಿಂದು, ಇನ್ನರ್ಧ ಹಣ್ಣನ್ನು ಅವರ ಶ್ರೀಮತಿಯವರಿಗೆ ನೀಡಿದ್ದರಂತೆ. ಅಂದಿನ ಸಂದರ್ಭವನ್ನು ನನಗೆ ನೆನಪು ಮಾಡಿಕೊಟ್ಟರು. ಅಜ್ಜನವರು ಬಾಳೆಹಣ್ಣನ್ನು ಏಕೆ ನೀಡಿದ್ದರು ಎಂದು ತಿಳಿಸಿದರು. ಏಕೆಂದರೆ, ನಮ್ಮ ಮುಂದಿನ ದಾಂಪತ್ಯ ಜೀವನದಲ್ಲಿನ ಎಲ್ಲಾ ವಿಚಾರಗಳಲ್ಲಿಯೂ ಕೂಡ ಇಷ್ಟೇ ಸರಿ ಸಮಾನವಾಗಿ ನೀನು ನಿನ್ನ ಮನೆಯವರನ್ನು ನೋಡಿಕೊಳ್ಳುತ್ತೀಯಾ ಇಲ್ಲವೋ ಎಂಬುದನ್ನು ನಾನು ಪರೀಕ್ಷೆ ಮಾಡಿದೆ ಎಂಬುದಾಗಿ ಅಜ್ಜ ನನಗೆ ತಿಳಿಸಿದರು. ಆಗ ನನ್ನ ತಲೆಗೆ ಹೊಳೆದಿರಲಿಲ್ಲ. ಅವರು ಹಣ್ಣನ್ನು ನನಗೆ ಕೊಟ್ಟರು ಅದನ್ನು ನಾನು ತಿಂದೆ. ಮದುವೆಯಾಗಿ 50 ವರ್ಷಗಳ ಹಿಂದಿನ ಸಂದರ್ಭದಲ್ಲಿ ಶ್ರೀಯುತರು ಉತ್ತೀರ್ಣರಾಗಿದ್ದು, ನಾನು ಅನುತ್ತೀರ್ಣನಾಗಿದ್ದೆ. ತಮ್ಮ ಜೀವನದಲ್ಲಿ ಇಂತಹ ಸಂಬಂಧವನ್ನು ಅವರು ತಮ್ಮ ಮನೆಯೊಳಗಿನಿಂದ ಪ್ರಾರಂಭಿಸಿ, ಉತ್ತಮ ಸಂಸ್ಕಾರದಲ್ಲಿ ಬಂದ ಮಹಾನ್ ವ್ಯಕ್ತಿಯಾಗಿದ್ದರು. ನಾಡಿಗೆ ಅಷ್ಟೇ ಕೀರ್ತಿಯನ್ನು ಬರುವ ಕೆಲಸವನ್ನು ಅವರು ನಿರ್ವಹಿಸಿದ್ದರು. ನಾವೆಲ್ಲರೂ ಹೇಳುವಂತೆ, "ಹುಟ್ಟಿದಾಗ ಉಸಿರು ಇರುತ್ತದೆ ಹೆಸರು ಇರುವುದಿಲ್ಲ. ಆದರೆ, ಸತ್ತಾಗ ಉಸಿರು ಇರುವುದಿಲ್ಲ ಹೆಸರು ಇರುತ್ತದೆ". ಇಂದಿನ ದಿನ ನಾವುಗಳೆಲ್ಲರೂ ತುಂಬು ಹೃದಯದಿಂದ ಅವರ ಬಗ್ಗೆ ಮಾತನಾಡುತ್ತಿದ್ದೇವೆ ಎಂದರೆ, ಅವರು ಅಷ್ಟು ಹೆಸರನ್ನು ಮಾಡಿದ್ದಾರೆ; ನಾಡಿನ ಎಲ್ಲಾ ಜನರ ಕೀರ್ತಿಗೆ ಪಾತ್ರರಾಗಿದ್ದಾರೆ. ಇವರ ನಿಧನದಿಂದಾಗಿ ರಾಜ್ಯ ಮತ್ತು ರಾಷ್ಟ್ರಕ್ಕಾಗಿರುವ ನಷ್ಟ ಹಾಗೂ ಅವರ ಕುಟುಂಬಕ್ಕಾಗಿರುವ ನಷ್ಟವನ್ನು ಭಗವಂತನು ಭರಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ನಮ್ಮ ರಾಜ್ಯವು ಅತ್ಯಂತ ಎತ್ತರದಲ್ಲಿ ಬೆಳೆದ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಿದೆ. ಪ್ರಾಯಶಃ ಅವರಿಂದ ನಾವು ಕಲಿಯುವುದು ಬಹಳಷ್ಟಿದೆ. ಇತ್ತೀಚಿನ ದಿನಗಳಲ್ಲಿ ನಾವು ನೋಡಿದಂತೆ, ಯಾವುದೇ ಸ್ಥಾನದಲ್ಲಿರಲಿ ದ್ವೇಷದಿಂದ ಅಥವಾ ಬೇರೆ ಬೇರೆ ಸಂದರ್ಭಗಳಲ್ಲಿ ನಮ್ಮ ನಿಯಂತ್ರಣವನ್ನು ಕಳೆದುಕೊಂಡು ನಾವು ಮಾತನಾಡುತ್ತೇವೆ. ಆದರೆ, ಅವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಕಂಡಂತೆ, he has never lost his patience. ಯಾವುದೇ ಪರಿಸ್ಥಿತಿಯಲ್ಲಿ ಎಷ್ಟೇ

ಒತ್ತಡದಲ್ಲಿದ್ದರೂ ಅವರು ಯಾವ ರೀತಿಯಾಗಿ ನಡೆದುಕೊಳ್ಳುತ್ತಿದ್ದರು ಎನ್ನುವುದನ್ನು ನಾವು ಇಂದು ನೆನಪಿಸಿಕೊಳ್ಳಬೇಕಾಗುತ್ತದೆ. ಶ್ರೀಯುತರು 1962 ರಲ್ಲಿ ಮೊದಲನೆ ಬಾರಿ ಸಮಾಜವಾದಿ ಪಕ್ಷದಿಂದ ಸ್ವತಂತ್ರವಾಗಿ ಆಯ್ಕೆಗೊಂಡು ವಿಧಾನ ಸಭೆಯನ್ನು ಪ್ರವೇಶಿಸಿದ್ದರು. 1962 ರಲ್ಲಿ ನಮ್ಮ ತಂದೆಯವರೂ ಸಹ ಸಮತಾವಾದಿ ಪಕ್ಷದಿಂದ ವಿಧಾನ ಸಭೆಯನ್ನು ಪ್ರವೇಶಿಸಿದ್ದರು. ಹೀಗಾಗಿ ನಮ್ಮ ತಂದೆಯೊವರೊಂದಿಗೆ ಅವರಿಗೆ ಅತ್ಯಂತ ಒಳ್ಳೆಯ ಸಂಬಂಧವಿತ್ತು. ನಾನು ಮೊದಲನೆ ಬಾರಿಗೆ ಅವರನ್ನು ಕಂಡಾಗ "ನಮೋಶಿ ಎಂದರೆ, ಗಂಗಾಧರ ನಮೋಶಿಯವರು ನಿಮಗೆ ಏನಾಗಬೇಕು" ಎಂದು ಕೇಳಿದ್ದರು. ಆಗ ನಾನು ಅವರ ಮಗನೆಂದು ತಿಳಿಸಿದೆನು. ಆಗ ಅವರು "ಗಂಗಾಧರ ನಮೋಶಿಯವರ ಮಗ ನೀನು ಹೇಗೆ ಭಾರತೀಯ ಜನತಾ ಪಕ್ಷದಲ್ಲಿ?" ಎಂದು ಕೇಳಿದ್ದರು. ಆಗ ಅವರು ನಮ್ಮ ತಂದೆಯವರನ್ನು ಕುರಿತು, he was my very good friend, ಎಂಬುದಾಗಿ ಹೇಳಿದ್ದು ನನಗೆ ಇಂದಿಗೂ ಸಹ ನೆನಪಿದೆ.

ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಮಗೆ ಸೆಪ್ಟೆಂಬರ್ 17 ನೇ ತಾರೀಖಿನಂದು ಸ್ವಾತಂತ್ರ್ಯ ದೊರೆತಿದೆ. ನಾವು 1995 ನೇ ಇಸವಿಯಿಂದ ನನ್ನ ನೇತೃತ್ವದ ಸಂಘವೊಂದರಿಂದ ವಿಮೋಚನಾ ದಿನಾಚರಣೆಯ ಆಚರಣೆ ಮಾಡಿಕೊಂಡು ಬಂದಿದ್ದೆವು. 1998 ರಲ್ಲಿ ಇದಕ್ಕೆ 50 ವರ್ಷಗಳಾದಾಗ 50 ನೇ ವಾರ್ಷಿಕೋತ್ಸವವೆಂದು ಇದಕ್ಕೆ ಎಲ್ಲರೂ ಮಾನ್ಯತೆಯನ್ನು ನೀಡಿದರು. ನಮ್ಮ ನೆರೆಯ ರಾಜ್ಯಗಳಲ್ಲಿ ಅಂದರೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ 50 ವರ್ಷವನ್ನು ಆಚರಿಸಲಾಯಿತು. ಇದಾದ ನಂತರ ಸರ್ಕಾರದ ವತಿಯಿಂದಲೇ ಇದರ ಆಚರಣೆಯನ್ನು ಮಾಡಬೇಕೆಂದು ನಾವು ಪ್ರಯತ್ನಿಸಿದಾಗ, ಸರ್ಕಾರವು ಇದಕ್ಕೆ ಅನುಮತಿಸಿರಲಿಲ್ಲ. ಆದರೆ, ಈ ವಿಚಾರವನ್ನು ಶ್ರೀಯುತರಿಗೆ ಬಹಳ ಸುದೀರ್ಘವಾಗಿ ತಿಳಿಸಿದ ನಂತರ, ಅವರು "ಹೌದು ಇದು ನಿಜವಾದ ಸ್ವಾತಂತ್ರ; ನಿಮಗೆ ಸ್ವಾತಂತ್ರ್ಯ ದೊರೆತಿದ್ದು ಇದೇ ದಿನ" ಎಂದು ಹೇಳಿದರು.

(ಮುಂದು)

(738)10-12-2024/12-10/BKP-KS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶಿಲ್ ಜಿ. ನಮೋಶಿ (ಮುಂದು):**

ಅವರು 2002ರಿಂದಲೇ ಈ ದಿನಾಚರಣೆಯನ್ನು ನಾವು ಸರ್ಕಾರದಿಂದಲೇ ಆಚರಣೆ ಮಾಡುತ್ತೇವೆಂದು ಬಹಳ ಖುಷಿಯಿಂದ ಆದೇಶ ಮಾಡಿ, ಅವರು ಆ ಕಾರ್ಯಕ್ರಮದಲ್ಲಿಯೂ ಭಾಗವಹಿಸಿದರು. ಅಂದರೆ, ಅವರು ನಮ್ಮ ಭಾಗಕ್ಕೆ ಧ್ವಜಾರೋಹಣ ಕಾರ್ಯಕ್ರಮಕ್ಕೆ ಬಂದು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಎಂದು ನಾನು ಈ ಸಂದರ್ಭದಲ್ಲಿ ಹೇಳಲಕ್ಕೆ ಬಯಸುತ್ತೇನೆ. 2002 ರಲ್ಲಿ ನಡೆದಂತಹ ಒಂದು ಸಂದರ್ಭದಲ್ಲಿ ಬಹುಶಃ ರಾಜಕಾರಣಿಗಳಾದ ನಾವುಗಳು ಕ್ರೀಡೆಯಲ್ಲಿ ಯಾರದರೂ ಬಹಳ ಆಸಕ್ತಿಯಿಂದ ಪಾಲ್ಗೊಳ್ಳುತ್ತೇವೆ ಎನ್ನುವ ಸಂದರ್ಭವನ್ನು ನಾನು ಕಂಡಿದ್ದು ಮೊದಲು ಶ್ರೀಮಾನ್ ಎಸ್.ಎಂ. ಕೃಷ್ಣರವರು ಮತ್ತು ಶ್ರೀಮಾನ್ ಎಸ್. ಬಂಗಾರಪ್ಪನವರು. ಶ್ರೀಮಾನ್ ಬಂಗಾರಪ್ಪನವರು ಮಂತ್ರಿಯಾಗಿದ್ದಾಗ ನಮ್ಮ ಊರಿನಲ್ಲಿ ಅವರ ಜೊತೆ badminton ಕೂಡ ಆಡಿದ್ದೇನೆ. ಒಂದು ಸಂದರ್ಭದಲ್ಲಿ ಯಾವುದೋ ಕಾರಣಕ್ಕೆ ಬೆಂಗಳೂರಿನಲ್ಲಿ ITF (International Tennis Federation) ರವರು tournament ಏರ್ಪಡಿಸಿದ್ದನ್ನು ರದ್ದು ಮಾಡಿದ್ದರು. ಏತಕ್ಕೆ ರದ್ದು ಮಾಡಿದ್ದರೋ ಗೊತ್ತಾಗಲಿಲ್ಲ. ಆದರೆ, ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರಿಗೆ ಅದೇಶ ಮಾಡಿ ನಿಮ್ಮ ಊರಿನಲ್ಲಿ ಏರ್ಪಡಿಸಿ ಎಂದವರು ಹೇಳಿದರು. ಆಗ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ನಮ್ಮ ಊರಿನಲ್ಲಿ ಮಾಡಿಯೇ ಮಾಡುತ್ತೇವೆಂದು ಮೊದಲ ಬಾರಿಗೆ ಐಟಿಎಫ್ ಅಂತಹ international event ಅನ್ನು ನಮ್ಮ ಊರಿನಲ್ಲಿ ಏರ್ಪಾಡು ಮಾಡಿದ್ದರು. ಆ ಸಂದರ್ಭದಲ್ಲಿ ನೀವು ವಿಚಾರ ಮಾಡಬಹುದು. ಒಬ್ಬ ಮುಖ್ಯಮಂತ್ರಿಯಾಗಿ ಐಟಿಎಫ್ ಅನ್ನು ಉದ್ಘಾಟನೆ ಮಾಡಲಕ್ಕೆ ಗುಲ್ಬರ್ಗಕ್ಕೆ ಬರುತ್ತಾರೆ. ಅವರು ಅಲ್ಲಿಗೆ ಬಂದಾಗ ಇತರೆ ಮಂತ್ರಿಗಳು ಯಾರೂ ಇರಲಿಲ್ಲ. ನಾನು ಸಹ ರೆಗ್ಯೂಲರ್ ಆಗಿ ಟೆನ್ನಿಸ್ ಆಡುತ್ತಿದ್ದೇನೆಂದು ಅವರಿಗೆ ಹೇಳಿದಾಗ ಮತ್ತು ನೀವು ಸಹ ಟೆನ್ನಿಸ್ ಆಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆಂದಾಗ ಅವರು "Tennis is my only passion apart from politics", ಎಂದು ಬಹಳ ಹೆಮ್ಮೆಯಿಂದ ಹೇಳಿಕೊಂಡರು.

ಮತ್ತೆ ಇನ್ನೊಂದು ಸಂತೋಷದ ವಿಚಾರ ಎಂದರೆ, ಅತ್ಯಂತಹ ಹಿಂದಳಿದ ಕಲ್ಯಾಣ ಕರ್ನಾಟಕ ಭಾಗ. ಅದರಲ್ಲಿ ಬಹುಶಃ ಎಲ್ಲರಿಗೂ ಗೊತ್ತಿರುವಂತಹದ್ದು ಡಾ॥ ನಂಜುಂಡಪ್ಪ ನವರ ವರದಿಯ ಪ್ರಕಾರ 175 ತಾಲ್ಲೂಕುಗಳಿಗೆ ಅವರು ಏನು ಸೂಚ್ಯಾಂಕಗಳನ್ನು ಮಾಡಿದ್ದಾರೆ. ಅದರಲ್ಲಿ 175ನೇ ತಾಲ್ಲೂಕು ದೇವದುರ್ಗ ತಾಲ್ಲೂಕು. ಅದು ಅತ್ಯಂತ ಹಿಂದುಳಿದ ತಾಲ್ಲೂಕು. ಇವತ್ತು ಕೆಕೆಆರ್‌ಡಿಬಿ ಯಲ್ಲಿ ಏನು ಹಣ ಹಂಚಿಕೆ ಮಾಡುತ್ತಿದ್ದಾರೆ. ಅದನ್ನೂ ಸೂಚ್ಯಾಂಕದ ಆಧಾರದ ಮೇಲೆ ಹಂಚಿಕೆ ಮಾಡುತ್ತಿದ್ದಾರೆ. ಕೆಲವು ಕಡೆ ಹೆಚ್ಚು ಕಡಿಮೆ ಕೊಡುತ್ತಿರಬಹುದು. ಆದರೆ, ಸೂಚ್ಯಾಂಕದ ಆಧಾರದ ಮೇಲೆಯೇ ಹಣವನ್ನು ಹಂಚಿಕೆ ಮಾಡುತ್ತಿದ್ದಾರೆ. According to Dr. Nanjundappa Committee Report, among the 175 most backward taluks, 175th taluk is Devadurga and coincidentally 174th is Chincholi and Jevargi in Kalaburagi district. ಈಗ ಮಾನ್ಯ ಸಭಾನಾಯಕರೂ ಸಹ ಬಿಸಿ ಊಟದ ಬಗ್ಗೆ ಉಲ್ಲೇಖ ಮಾಡಿದರು. Dropouts ಬಹಳ ದೊಡ್ಡ ಸಂಖ್ಯೆಯಲ್ಲಿ ಇತ್ತು. ಅಂದರೆ, ರಾಜ್ಯದಲ್ಲಿಯೇ ಬಹಳ ಜಾಸ್ತಿ dropouts ಇದ್ದಂತಹ ಒಂದು ತಾಲ್ಲೂಕು ಅದು. I may be wrong. 10 ಲಕ್ಷ ವಿದ್ಯಾರ್ಥಿಗಳು dropouts ಅನ್ನು ಕಂಡಿರುವುದು, it was the big news. ಇಷ್ಟು ದೊಡ್ಡ ಸಂಖ್ಯೆಯಲ್ಲಿ dropouts ಇದೆ ಎಂದು ಹೇಳಿ ಬಿಸಿ ಊಟದ ಯೋಜನೆಯನ್ನು ಪ್ರಾರಂಭ ಮಾಡಿ, ಆ ಕಾರ್ಯಕ್ರಮವನ್ನು ದೇವದುರ್ಗದಲ್ಲಿ ಇಟ್ಟುಕೊಂಡಿದ್ದಕ್ಕೆ ಅವರಿಗೆ ನಿಮ್ಮಿಂದ ಒಳ್ಳೆಯ ಕೆಲಸ ಆಗಿದೆ ಎಂದು ನಾನು ಸಹ ಆ ಒಂದು ಕಾರ್ಯಕ್ರಮದಲ್ಲಿ ಇದ್ದಂತಹ ಸಂದರ್ಭದಲ್ಲಿ ನಾನು ಅವರಿಗೆ ಹೇಳಿದೆ. ಆಗ, ಅವರು ಹೌದು ಇದು ಬಹಳ ಹಿಂದುಳಿದ ತಾಲ್ಲೂಕು ಇದೆ ಎಂದು ಹೇಳಿ, ಈ ಕಾರ್ಯಕ್ರಮವನ್ನು ಇಲ್ಲಿಯೇ ಇಟ್ಟುಕೊಂಡಿದ್ದೇನೆಂದು ಬಹಳ ಖುಷಿಯಿಂದ ಈ ಮಾತನ್ನು ಹೇಳಿದ್ದರು. ಅಂತಹ ಒಬ್ಬ ಎತ್ತರದ ವ್ಯಕ್ತಿ ಇವತ್ತು ಪ್ರಧಾನಿಯಾಗಲಿಲ್ಲ, ರಾಷ್ಟ್ರಪತಿಯಾಗಲಿಲ್ಲ. If I am not wrong, he was a Minister for Commerce and Industries and Parliamentary Affairs in 1972 and later, he was a Union Minister of State for Finance. ಎಲ್ಲಾ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಎಲ್ಲಾ ಮನೆಯ ಸದಸ್ಯರು ಕೂಡ ಆಗಿದ್ದರು. External

Affairs Minister ಮತ್ತು ಈ ಎಲ್ಲಾ ಹುದ್ದೆಗಳನ್ನು ಅಲಂಕರಿಸಿರುವುದನ್ನು ನೋಡಿದರೆ, how great a statesman he is and how we need to emulate him ಎನ್ನಿಸುತ್ತದೆ. ನಾವೆಲ್ಲರೂ ಆ ಒಂದು ದಾರಿಯಲ್ಲಿಯೇ ನಮ್ಮ ಮುಂದಿನ ರಾಜಕೀಯ ಜೀವನವನ್ನು ಅವರನ್ನು ನೋಡಿ ಅಳವಡಿಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಲಕ್ಕೆ ಬಯಸುತ್ತೇನೆ.

**Sri S.L. BHOJEGOWDA (TEACHERS' CONSTITUENCY):-** Hon'ble Chairman sir, he was also a well-dressed person.

**ಶ್ರೀ ಶಶಿಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಹೌದು ಸದಸ್ಯರು ಹೇಳುವುದು ಸರಿ ಇದೆ. ಡ್ರಸ್ ಬಗ್ಗೆ ನನಗೆ ಹೆಚ್ಚಿಗೆ ತಿಳುವಳಿಕೆ ಇದೆ. ಬಹುಶಃ ನಮ್ಮ ಭಾಗದವರಿಗೆ ಗೊತ್ತು. I run a very old garment shop in Kalaburagi district. ಹೀಗಾಗಿ, ಯಾರು ಏನೇನು ಮಾಡುತ್ತಾರೆ, ಅದನ್ನು ಸ್ವಲ್ಪ ಹತ್ತಿರದಿಂದ ತಿಳಿದುಕೊಂಡರೆ ಇವರೇನು ಡಿಸೈನರ್ ಹತ್ತಿರ ಹೋಗಿ ಮಾಡಿದ್ದಾರೋ ಅಥವಾ ಸುಮ್ಮನೆ ಯಾವುದನ್ನು ಹಾಕಿಕೊಂಡಿದ್ದಾರೋ ಅಥವಾ ಕಾಟಾಚಾರಕ್ಕೆ ಹಾಕಿಕೊಂಡಿದ್ದಾರೋ ಎಂದು ಸ್ವಲ್ಪ ತಿಳಿಯುತ್ತದೆ. ಆದರೆ, ಅ ಪ್ರಮಾಣದಲ್ಲಿ ಅತ್ಯಂತ ಇವರು very well-dressed. ಅದನ್ನು ಇನ್ನೊಬ್ಬ ವ್ಯಕ್ತಿಯನ್ನು ನಾವು ನೋಡಬೇಕಾದರೆ ಅದು ಶ್ರೀಮಾನ್ ನರೇಂದ್ರ ಮೋದಿಯವರು ಸಹ ಅಷ್ಟೇ well-dressed ಇದ್ದಾರೆ. ಇವರು ಕೂಡ ಅದೇ ರೀತಿಯಿಂದ very well-dressed ಆಗಿರುತ್ತಿದ್ದರು. ತಾವು ತಂದಿರುವಂತಹ ಈ ಸಂತಾಪ ಸೂಚನೆಗೆ ನಾನೂ ಸಹ ಧ್ವನಿಗೂಡಿಸುತ್ತಾ, ಅವರ ಅತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ಸಹಮತವನ್ನು ವ್ಯಕ್ತ ಮಾಡುತ್ತೇನೆ. ಈ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿರುವುದಕ್ಕೆ ಧನ್ಯವಾದಗಳನ್ನು ಹೇಳಿ, ಅವುಗಳಿಗೆ ಸಹಮತವನ್ನು ವ್ಯಕ್ತ ಮಾಡಿ, ಶ್ರೀಮಾನ್ ಎಸ್.ಎಂ. ಕೃಷ್ಣಾ ರವರ ಬಗ್ಗೆ

ಕೆಲವು ವಿಚಾರಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಾವೆಲ್ಲರೂ ಸಹ ವಿದ್ಯಾರ್ಥಿ ದೆಸೆಯಿಂದಲೂ ಶ್ರೀಮಾನ್ ಎಸ್.ಎಂ. ಕೃಷ್ಣ ರವರ ಜೊತೆ ಸಂಬಂಧ ಇಟ್ಟುಕೊಂಡಿದ್ದೆವು. ಅದರಲ್ಲೂ ಸಹ ಅವರು 1972 ರಿಂದ 1977 21ನೇ ಇಸವಿಯಲ್ಲಿ ಪಾರ್ಲಿಮೆಂಟ್ ಸದಸ್ಯರಾಗಿದ್ದಂತಹ ಸಂದರ್ಭದಲ್ಲಿ ಅದಕ್ಕೆ ರಾಜೀನಾಮೆಯನ್ನು ಕೊಟ್ಟು ವಿಧಾನ ಪರಿಷತ್ತಿನ ಸದಸ್ಯರಾಗಿ ಶ್ರೀಮಾನ್ ದೇವರಾಜ್ ಅರಸರ ಮಂತ್ರಿಮಂಡಲದಲ್ಲಿ ಕೈಗಾರಿಕಾ ಮಂತ್ರಿಗಳಾಗಿ ಬಂದರು. ಆ ಸಂದರ್ಭದಲ್ಲಿ ನಾವೆಲ್ಲರೂ ಸಹ ಇನ್ನೂ ವಿದ್ಯಾರ್ಥಿ ದಿಸೆಯಲ್ಲಿದ್ದೆವು ಮತ್ತು ಇದಕ್ಕೂ ಮೊದಲು ಶ್ರೀಯುತರು ನಮ್ಮ ರೇಣಕಾಚಾರ್ಯ ಕಾನೂನು ಕಾಲೇಜಿನಲ್ಲಿ ಉಪನ್ಯಾಸಕರಿದ್ದರು. ಆ ಸಂದರ್ಭದಲ್ಲಿ ನಾನೂ ಕೂಡ ಆ ಕಾಲೇಜಿನಲ್ಲಿ ಪ್ರೆಸಿಡೆಂಟ್ ಆಗಿ ಕೆಲಸ ನಿರ್ವಹಿಸುತ್ತಿದ್ದೆ. ಆಗ ಅವರು ನನ್ನನ್ನು ಕರೆದು "ಅಲ್ಲಪ್ಪಾ ನಮ್ಮ ಕಾಲದಲ್ಲಿ ವಿದ್ಯಾರ್ಥಿ ಸಂಘಟನೆಗಳು ಬೇರೆ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು ಎಂದು ಹೇಳುತ್ತಿದ್ದರು. ಶ್ರೀಮಾನ್ ದೇವರಾಜ ಅರಸುರವರು ಸಹ ಅದೇ ಪದವನ್ನು ಉಪಯೋಗಿಸುತ್ತಿದ್ದರು. ಈಗ ನೀವೆಲ್ಲರೂ ವಾನರ ಸೇನೆಯಾಗಿಬಿಟ್ಟಿದ್ದೀರಲ್ಲಾ, ಬರಿ ಕಪಿಗಳಾಗಿದ್ದೀರಿ. ಎಂದು ಬಹಳ ವ್ಯಂಗ್ಯವಾಗಿ ಹೇಳುತ್ತಿದ್ದರು. ಅದರೂ ಸಹ ಅವರು ಬಹಳ ಉತ್ತೇಜನ ಕೊಡುತ್ತಿದ್ದರು. ಆಗ. ನೀವೆಲ್ಲರೂ ಇಷ್ಟೊಂದು ಸಕ್ರೀಯವಾಗಿ ರಾಜಕಾರಣದಲ್ಲಿದ್ದೀರಲ್ಲಾ, ನಿಮಗೆಲ್ಲಾ ಹಣವನ್ನು ಯಾರು ಕೊಡುತ್ತಾರೆ ನಮ್ಮನ್ನೇ ಕೇಳುತ್ತಿದ್ದರು. ಹಣವನ್ನು ಯಾರೂ ಕೊಡವುದಿಲ್ಲವೆಂದಾಗ ಅವರು ಕೈಗಾರಿಕಾ ಸಚಿವರಿದ್ದಾಗ ನಮ್ಮ ಜೊತೆಯಲ್ಲಿದ್ದ ಕೆಲವು ಹುಡುಗರಿಗೆ ಸಣ್ಣ-ಸಣ್ಣ ಕೆಲಸಗಳು ಅಂದರೆ ತಿಂಗಳಿಗೆ 300-400 ರೂಪಾಯಿಗಳು ಬರುವಂತಹ ಕೆಲಸಗಳಿಗೆ ಹುಡುಗರನ್ನು ಕರೆಸಿ ಸೇರಿಸಿ ಎಂದು ಹೇಳಿ, ಇವರೆಲ್ಲರೂ parttime ಕೆಲಸ ಮಾಡಿಕೊಂಡರೆ, ಅವರಿಗೆ ಹಣ ಬರುತ್ತದೆ ಎಂದು ಹೇಳಿ, ಅಲ್ಲಿ ಮತ್ತು ರೇಸ್ ಕೋರ್ಸ್‌ನಲ್ಲಿ ಬಹಳಷ್ಟು ಜನರಿಗೆ ಕೆಲಸಕ್ಕೆ ಸೇರಿಸುತ್ತಿದ್ದರು. ಶನಿವಾರ ಮತ್ತು ಭಾನುವಾರ ಅಲ್ಲಿ ರೇಸ್ ಆದಾಗ ಅಲ್ಲಿ ಟಿಕೇಟ್ ಕೊಡಲಿಕ್ಕೆ ನೇಮಕ ಮಾಡಿಕೊಳ್ಳುತ್ತಿದ್ದರು. ಆ ರೀತಿಯಲ್ಲಿ ದೊಡ್ಡ ಮನಸ್ಸು ಇಟ್ಟುಕೊಂಡು ಅವರು ಸಹಾಯ ಮಾಡುತ್ತಿದ್ದರು. ಮತ್ತೆ ಮಾನ್ಯ ಶ್ರೀ ಶಶಿಲ್ ಜಿ. ನಮೋಶಿಯವರು ಹೇಳಿದ ಹಾಗೆ ಅವರು ಬಹಳ ಸಜ್ಜನ, ಸೌಮ್ಯ ಸ್ವಭಾವದವರು, ಮೃದುಭಾಷಿ. ಜಾಸ್ತಿ

ಮಾತನಾಡುತ್ತಿರಲಿಲ್ಲ. ಸ್ವಲ್ಪ ಕಡಿಮೆಯೇ ಮಾತನಾಡುತ್ತಿದ್ದರು ಹಾಗೂ ಅವರು well-disciplined man ಆಗಿದ್ದರು. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರ ಉಡುಗೆ-ತೊಡುಗೆಯನ್ನು ನೋಡಿದಾಗ ತಾವು ಏನು ಡಿಸೈನರ್ ಬಟ್ಟೆಗಳೆಂದು ಹೇಳಿದಿರಿ. ಯಾವ ಸಂದರ್ಭಕ್ಕೆ, ಯಾವ ಕಾರ್ಯಕ್ರಮಕ್ಕೆ ಯಾವ ಸೂಕ್ತವಾದ ಬಟ್ಟೆಯನ್ನು ಹಾಕಬೇಕೆಂದು ಯೋಚನೆ ಮಾಡಿ, ಅದಕ್ಕೆ ತಕ್ಕಂತೆ ಅವರು ಹೋಗುತ್ತಿದ್ದನ್ನು ನೋಡಿದಾಗ ಈಗ ಇರತಕ್ಕಂತಹ ಯುವಕರಿಗೆ ಮಾದರಿಯಾಗಿರುತ್ತಾರೆ. ಈಗ ಇರತಕ್ಕಂಥಹ ಯುವಕರು ತಮ್ಮ vulgar display of wealth, ಅಂದರೆ, ತಮ್ಮ ಹಣ ಏನಿದೆ ಎಂದು ಹೇಳಿ ಆ ಡಿಸೈನ್‌ರ್ ಬಟ್ಟೆಗಳನ್ನು ಏನು ಹಾಕುತ್ತಾರೆ, ಆ ರೀತಿಯಲ್ಲಿ ಹಾಕುತ್ತಿರಲಿಲ್ಲ. ಅವರು ಬಹಳ well-disciplined and well respected ಎಂದು ಹೇಳಿ, ಒಂದು ಒಳ್ಳೆಯ diplomat ಎಂದು ಹೇಳಿದರೆ ಯಾವ ರೀತಿ ಇರುತ್ತದೆ, ಆ ರೀತಿಯಲ್ಲಿ ಇರತಕ್ಕಂತಹವರು. ಏಕೆಂದರೆ, ಅವರು ರೆಡ್ಡಿ ಕಾಂಗ್ರೆಸ್‌ಗೆ ಹೋದರು, ಪುನಃ ನಮ್ಮ ಪಕ್ಷಕ್ಕೆ ವಾಪಸ್ಸು ಬಂದರು. ಆಗ ಅಂದರೆ 1980 ರಲ್ಲಿ ಲೋಕಸಭೆಗೆ ಪುನಃ ಹಾರಿಸಿ ಬಂದ ನಂತರ 1983ರಲ್ಲಿ ಹಣಕಾಸಿನ ಮತ್ತು ಸಣ್ಣ ಕೈಗಾರಿಕಾ ಸಚಿವರಾಗಿ 1984 ರವರೆಗೆ ಕೆಲಸ ನಿರ್ವಹಿಸಿದರು. 1984 ರಲ್ಲಿ ಶ್ರೀಯುತ ಶಂಕರಗೌಡರ ವಿರುದ್ಧ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತರು. ಇಡೀ ದೇಶದಲ್ಲಿ ಇಂದಿರಾ ಗಾಂಧೀಯವರು ಸತ್ತು ಹೋದ ಒಂದು ಅನುಕಂಪದ ಅಲೆ ಏನಿತ್ತು, ಕರ್ನಾಟಕದಲ್ಲಿ ಶ್ರೀಮಾನ್ ಎಸ್.ಎಂ. ಕೃಷ್ಣರವರು ಸೇರಿದಂತೆ 3-4 ಜನ ಸೋತು ಹೋದರು. ಆಗ ನಾನು ಶ್ರೀಯುತ ಶಂಕರಗೌಡರನ್ನು ದೆಹಲಿಯಲ್ಲಿ ಭೇಟಿಯಾದಾಗ "ನಾನು ದೊಡ್ಡ ತಪ್ಪು ಕೆಲಸ ಮಾಡಿದೆ. ನಾನು ಈ ವಯಸ್ಸಿನಲ್ಲಿ ಹೋಗಿ ಚುನಾವಣೆಗೆ ನಿಂತು, ಪಾಪ, ಅವನನ್ನು ಸೋಲಿಸಿಬಿಟ್ಟಿದ್ದೇನೆ. ಅವನು ಗೆದ್ದಿದ್ದರೆ ಮಂತ್ರಿಯಾಗುತ್ತಿದ್ದ ಎಂದು ಹೇಳಿ ಬಹಳ ವ್ಯಥೆ ಪಟ್ಟರು. ಅದೇ ವಿಷಯವನ್ನು ನಾನು ಸರ್, ಈ ರೀತಿಯಲ್ಲಿ ಶಂಕರಗೌಡರು ಹೇಳುತ್ತಿದ್ದಾರೆಂದು ಶ್ರೀಮಾನ್ ಎಸ್.ಎಂ. ಕೃಷ್ಣರವರಿಗೆ ಹೇಳಿದೆ. ಆಗ ಅವರು ಎಷ್ಟು ಸೂಕ್ಷ್ಮವಾಗಿದ್ದರು ಎಂದು ಹೇಳಿದರೆ... ಅವರು ಸೋತಮೇಲೆ ಜನತಾದಳದ ಹೆಸರಿನಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಆರ್ಭಟ ಜಾಸ್ತಿ ಇತ್ತು. ಅವರಿಗೆ ಸರಿಸಮವಾದವರು ಯಾರಾದರೂ ಬೇಕೆಂದು

ಹೇಳಿ ನಾವೆಲ್ಲರೂ ಸಹ ಶ್ರೀಮಾನ್ ಎಸ್.ಎಂ.ಕೃಷ್ಣರವರು English speaking leader ಮತ್ತು ಒಳ್ಳೆಯ vocabulary ಇಟ್ಟಿದ್ದಾರೆ, ವಾಕ್‌ಚಾತುರ್ಯ ಇದೆ, ಇವರನ್ನೇ ಮಾಡಬೇಕೆಂದು ಹೇಳಿ, ನಾವು ಸೇವಾದಳದಿಂದ ಲಾಲ್‌ಬಾಗ್‌ನಲ್ಲಿ ಒಂದು ಕಾರ್ಯಕ್ರಮವನ್ನು ಮಾಡಿದೆವು. ಆ ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸಲಿಕ್ಕೆ ಹೋದಾಗ ಇಲ್ಲಾ, ಇಲ್ಲಾ ನಾನು ಸೋತಿದ್ದೇನೆ. 5 ವರ್ಷಗಳ ಕಾಲ ನಾನು ಎಲ್ಲಿಯೂ ಬರುವುದಿಲ್ಲ ಹರಿಪ್ರಸಾದ್. ಬೇಡ ನನ್ನನ್ನು ಕರೆಯಬೇಡಿ, ನಾನು ಇನ್ನೊಂದು ಬಾರಿ ಬರುತ್ತೇನೆಂದು ಅವರು ಹೇಳಿದಾಗ ನಾವು ನೀವು ಬರಲೇಬೇಕು, ನೀವು ಹೊರಗಡೆ ಬನ್ನಿ ಎಂದು ಹೇಳಿ ಕರೆದುಕೊಂಡು ಬಂದಾಗ ಸ್ಟೇಜ್‌ವರೆಗೂ ಬಂದು ಸ್ಟೇಜ್ ಮೇಲೆ ಬರಲಿಲ್ಲ. ಆಗ ಅವರು ನೋಡಪ್ಪ ನೀನು ಕರೆದಿದ್ದಿಯಾ ಎಂದು ಬಂದಿದ್ದೇನೆ, ಮತ್ತೆ ನಾನು ವಾಪಸ್ಸು ಹೋಗುತ್ತೇನೆಂದು ಹೇಳಿ ಹೋದರು. ಅವರು ಬಹಳ ದೊಡ್ಡ ಮನುಷ್ಯರು. ಮತ್ತೆ ಶ್ರೀಮಾನ್ ವಿಶ್ವನಾಥ್ ರವರು ಮತ್ತು ಅವರ ಕ್ಯಾಬಿನೆಟ್‌ನಲ್ಲಿದ್ದವರು, ಅವರು "ಹಳ್ಳಿ ಹಕ್ಕಿ' ಎಂದು ಹೇಳಿ ಒಂದು ಪುಸ್ತಕವನ್ನು ಬರೆದಿದ್ದರು. ಅದರಲ್ಲಿ ಅವರು ಬಹಳ ಚೆನ್ನಾಗಿ ವಿವರಣೆ ಮಾಡಿದ್ದಾರೆ. ಅದರ ಜೊತೆಗೆ ಅವರು ಕೇಂದ್ರ ಸರ್ಕಾರದಲ್ಲಿಯೂ ಇದ್ದಾಗ ಅವರು ಬಂದ ಸಂದರ್ಭದಲ್ಲಿ ಆಗತಾನೆ ಭಾರತೀಯ ಜನತಾ ಪಕ್ಷ ಬಹಳ ಪ್ರಬಲವಾಗಿ ಬೆಳೆಯುತ್ತಿತ್ತು. Shouting brigade ಎಂದು ಸ್ವಲ್ಪ ಜನರು ಇದ್ದರು. ಆಗ ಅವರು "ಹರಿಪ್ರಸಾದ್ ನೀವೆಲ್ಲರೂ ಯೂತ್ ಕಾಂಗ್ರೆಸ್‌ನಿಂದ ಬಂದವರು ನಾನು ಎದ್ದು ನಿಂತ ತಕ್ಷಣ ಅವರು ಗಲಾಟೆ ಮಾಡುತ್ತಾರೆ, ಸ್ವಲ್ಪಮಟ್ಟಿಗೆ ನೀವೆಲ್ಲರೂ ಸಹಾಯಕ್ಕೆ ಬರಬೇಕು. ನಿಮ್ಮ ಗಂಟಲು ಜೋರಾಗಿದೆ" ಎಂದು ತಮಾಷೆ ಮಾಡಿಕೊಂಡು ಹೇಳುತ್ತಿದ್ದರು. ಅವರು ಬಹಳ ವಿಚಾರವಂತರು. ಮತ್ತೆ ಅವರು ಮಹಾರಾಷ್ಟ್ರದ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿರುತ್ತಾರೆ ಶ್ರೀಯುತ ನಮೋಶಿಯವರು ಹೇಳಿದ ಹಾಗೆ ಪ್ರಧಾನ ಮಂತ್ರಿ ಮತ್ತು ರಾಷ್ಟ್ರಪತಿ ಹುದ್ದೆ ಮಾತ್ರ ಅವರಿಗೆ ಸಿಗಲಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಮಾದೇಗೌಡರು ಅವರಿಗೆ ಒಂದು ಬಾರಿ ಬಹಳ ಚೆನ್ನಾಗಿ ಹೇಳಿದರು. ನೋಡಿ, ಕಾಂಗ್ರೆಸ್ ಪಕ್ಷದವರು ಶ್ರೀಮಾನ್ ಎಸ್.ಎಂ. ಕೃಷ್ಣರವರಿಗೆ ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಪ್ರಧಾನ ಮಂತ್ರಿ ಈ ಮೂರು ಹುದ್ದೆಗಳನ್ನು ಬಿಟ್ಟು ಬಾಕಿ ಎಲ್ಲವನ್ನು ಮಾಡಿದ್ದಾರೆಂದು ಹೇಳಿದರು.

(739) 10.12.2024 12.20 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):**

ಆ ರೀತಿಯಾಗಿ ಎಲ್ಲಾ ಸದನಗಳಲ್ಲಿಯೂ ಸದಸ್ಯರಾಗಿ ಒಬ್ಬ ಮಾದರಿ ರಾಜಕಾರಣಿಯಾಗಿ, ಒಬ್ಬ ಮಾದರಿ ನಾಯಕನಾಗಿ ಮುಂದಿನ ಪೀಳಿಗೆಗೆ ಮಾದರಿ ನಾಯಕತ್ವವನ್ನು ತೋರಿಸಿದಂತಹ ಮಹಾನ್ ಚೇತನ ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬದವರಿಗೆ ನಷ್ಟವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತಾ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ತಂದಿರುವ ಸಂತಾಪ ಸೂಚನೆಗೆ ದನಿಗೂಡಿಸುತ್ತಾ, "ಜನನ" ಎಂಬುದು ಮೂರು ಅಕ್ಷರದ ಪದವಾದರೂ ಅದು ನಮ್ಮ ಆಯ್ಕೆಯಾಗಿರುವುದಿಲ್ಲ. "ಮರಣ" ಎನ್ನುವುದು ಮೂರು ಅಕ್ಷರ. ಅದು ಹೇಳಿ ಕೇಳಿ ಬರುವುದಿಲ್ಲ. ಇವೆರಡರ ನಡುವಿನ "ಜೀವನ" ಎನ್ನುವುದು ಮೂರು ಅಕ್ಷರ. ಅದು ನಮ್ಮ ಕೈಯಲ್ಲಿರುತ್ತದೆ. ಹತ್ತು ಬಾರಿ ಚುನಾವಣೆಗೆ ನಿಂತು ಏಳು ಬಾರಿ ಗೆದ್ದು, ಮೂರು ಬಾರಿ ಸಂಸತ್ ಸದಸ್ಯರಾಗಿ, ನಾಲ್ಕು ಬಾರಿ ಶಾಸಕರಾಗಿ ನಾಲ್ಕೂ ಮನೆಗಳನ್ನು ಪ್ರವೇಶ ಮಾಡಿದಂತಹ ಕೆಲವೇ ಜನರಲ್ಲಿ ಮಾನ್ಯ ಎಸ್.ಎಂ.ಕೃಷ್ಣ ಅವರು ಕೂಡ ಒಬ್ಬರು.

ವಿದ್ಯೆ, ಬುದ್ಧಿ ಎರಡೂ ಒಬ್ಬರ ಕೈಯಲ್ಲಿಯೇ ಇರುತ್ತದೆ ಎಂದಿಲ್ಲ. ವಿದ್ಯಾವಂತರಾದವರೆಲ್ಲರೂ ಬುದ್ಧಿವಂತರಾಗಿರುತ್ತಾರೆ ಎಂದೂ ಇಲ್ಲ. ಆದರೆ ಮಾನ್ಯ ಎಸ್.ಎಂ.ಕೃಷ್ಣ ಅವರು ವಿದ್ಯಾವಂತರೂ ಹೌದು, ಬುದ್ಧಿವಂತರೂ ಹೌದು. ಅದರ ಜೊತೆಗೆ ಸುಸಂಸ್ಕೃತ ವ್ಯಕ್ತಿತ್ವವನ್ನು ಹೊಂದಿದ್ದವರು ಎಂಬುದನ್ನು ಈ ಸದನದಲ್ಲಿ ಎಲ್ಲರೂ ಅವರ ವ್ಯಕ್ತಿತ್ವದ ಗುಣಗಾನವನ್ನು ಮಾಡಿದ್ದೇವೆ. ಕೆಲವರು ಮಾತನಾಡಿದ ಮೇಲೆ ಯೋಚನೆ ಮಾಡುತ್ತಾರೆ. ಕೆಲವರು ಮಾತನಾಡಿ ಏನೂ ಯೋಚನೆ ಮಾಡುವುದಿಲ್ಲ. ಆದರೆ ಯೋಚನೆ ಮಾಡಿ ಒಂದೊಂದು ಪದಕ್ಕೂ ಅರ್ಥಗರ್ಭಿತವಾಗಿ, ಸಮಯೋಚಿತವಾಗಿ ಎಷ್ಟು ಬೇಕೋ ಅಷ್ಟನ್ನೇ ಮಾತನಾಡುತ್ತಿದ್ದವರು ಮಾನ್ಯ ಎಸ್.ಎಂ.ಕೃಷ್ಣ ಅವರು.

ಹಾಗೆಯೇ ನಿರ್ಣಯಗಳನ್ನು ತೆಗೆದುಕೊಳ್ಳುವುದರಲ್ಲಿಯೂ ಕೂಡ ಅವರೇನು ಕಡಿಮೆ ಬುದ್ಧಿವಂತರಾಗಿರಲಿಲ್ಲ. ಶ್ರೀ ಟಿ.ಜಾನ್ ಅವರ ರಾಜೀನಾಮೆ ಪ್ರಸಂಗದಲ್ಲಿ ಹೇಗೆ ಅವರು handle ಮಾಡಿದ್ದರೆಂಬುದನ್ನು ನಾವು ಕೇಳಿದ್ದೆವು. ಅವರು handle ಮಾಡಿದ ರೀತಿ ಯಾವ ರೀತಿ ಇತ್ತೆಂದರೆ ಸ್ವಯಂಪ್ರೇರಿತರಾಗಿ ಟಿ. ಜಾನ್ ಅವರೇ ನಾವು ಮಾತನಾಡಿದ್ದು ತಪ್ಪು ಎಂದು ರಾಜೀನಾಮೆ ಕೊಡುವ ರೀತಿಯಲ್ಲಿ ಒಂದು ಸನ್ನಿವೇಶವನ್ನು ಸೃಷ್ಟಿ ಮಾಡಿ, ಅವರಿಂದ ರಾಜೀನಾಮೆಯನ್ನು ತೆಗೆದುಕೊಂಡಿದ್ದರು.

ಇಡೀ ನಾಡೇ ಕುತೂಹಲದಿಂದ ನೋಡುತ್ತಿದ್ದಂತಹ ಸಂದರ್ಭದಲ್ಲಿ ಡಾ:ರಾಜ್‌ಕುಮಾರ್ ಅಪಹರಣದ ವಿಷಯವನ್ನು ಅವರು ನಿಭಾಯಿಸಿದ ರೀತಿ. ಅದು ಅಷ್ಟು ಸುಲಭ ಸಂಗತಿಯಾಗಿರಲಿಲ್ಲ. ದಂತಚೋರ ವೀರಪ್ಪನ್ ಕಪಿಮುಷ್ಠಿಯಿಂದ ಡಾ: ರಾಜ್‌ಕುಮಾರ್ ಅವರನ್ನು ಬಿಡಿಸಿಕೊಂಡು, ಅತ್ಯಂತ ಜಾಣ್ಮೆಯಿಂದ ನಿರ್ವಹಿಸಿ ದೊಡ್ಡ ಅನಾಹುತವನ್ನು ತಪ್ಪಿಸಿದ್ದರು ಎಂಬುದನ್ನು ನಾವು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕಾಗುತ್ತದೆ.

ಗಾರ್ಡನ್ ಸಿಟಿಯಾಗಿದ್ದ ಬೆಂಗಳೂರನ್ನು ಐಟಿ ಸಿಟಿಯನ್ನಾಗಿ ಪರಿವರ್ತಿಸುವಲ್ಲಿ ಅವರ ದೂರದೃಷ್ಟಿ ಕೆಲಸ ಮಾಡಿತು. ರಾಜಕಾರಣದಲ್ಲಿ ಯಾವಾಗ ಯಾರು ಏನೇ ನಿರ್ಧಾರ ತೆಗೆದುಕೊಂಡರೂ ಕೂಡ ಅದಕ್ಕೆ ಮೆಚ್ಚುಗೆ ವ್ಯಕ್ತಪಡಿಸುವವರ ಜೊತೆಗೆ ತಪ್ಪು ಹುಡುಕುವವರೂ ಇದ್ದೇ ಇರುತ್ತಾರೆ. ಅಂದಿನ ದಿನಮಾನದಲ್ಲಿ ಬೆಂಗಳೂರು ಸಿಂಗಪುರ ಮಾದರಿ ಎಂದಾಗ ಆಡಿಕೊಳ್ಳುತ್ತಿದ್ದವರನ್ನೂ ನಾನು ನೋಡಿದ್ದೇನೆ. ಆದರೆ ಅವರಿಗೆ ಒಂದು vision ಇತ್ತು. ಭವಿಷ್ಯದ ಬೆಂಗಳೂರು ಹೇಗಿರಬೇಕು ಎನ್ನುವ ಕನಸಿತ್ತು. ಆ ರೀತಿ ಒಂದು ಕನಸು ಹೊತ್ತು ಒಬ್ಬ ಸುಸಂಸ್ಕೃತ, ಸಭ್ಯ ರಾಜಕಾರಣಿಯಾಗಿ ಕೆಲಸ ಮಾಡಿದವರು ಮಾನ್ಯ ಎಸ್.ಎಂ.ಕೃಷ್ಣ ಅವರು. ಯೋಗ ಇದ್ದವರಿಗೆಲ್ಲಾ ಯೋಗ್ಯತೆ ಇರುವುದು ಎಂದಿಲ್ಲ. ಯೋಗ ಇದ್ದರೆ ಯಾರು ಬೇಕಾದರೂ ಯಾವ ಪಟ್ಟಕ್ಕೆ ಬೇಕಾದರೂ ಏರಿಬಿಡುತ್ತಾರೆ. ಯೋಗ್ಯತೆ ಮಾತ್ರ ಇತಿಹಾಸದಲ್ಲಿ ಅವರ ಸ್ಥಾನ ಏನು ಎಂಬುದನ್ನು ಗುರುತಿಸುತ್ತದೆ. ಯೋಗದ ಜೊತೆಗೆ ಯೋಗ್ಯತೆಯೂ ಇರುವಂತಹ ಒಬ್ಬ ಯೋಗ್ಯ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಹೇಳಬಯಸುತ್ತೇನೆ. ಅವರ ಪತ್ನಿ, ಇಬ್ಬರು

ಪುತ್ರಿಯರು, ನಾಲ್ಕು ಜನ ಮೊಮ್ಮಕ್ಕಳನ್ನು ಅವರು ಅಗಲಿದ್ದಾರೆ. ಅಲ್ಲದೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಅಳಿಯ ದಿವಂಗತ ಸಿದ್ಧಾರ್ಥ ಅವರು ನಮ್ಮ ಜಿಲ್ಲೆಯವರಾಗಿದ್ದು, ನಮಗೆ ಬಹಳ ಹತ್ತಿರದ ಒಡನಾಟವಿದ್ದಂಥವರು.

ಮಾನ್ಯ ಎಸ್.ಎಂ.ಕೃಷ್ಣ ಅವರು ಸಂತಾಪಸೂಚನೆಗೆ ಧ್ವನಿಗೂಡಿಸುತ್ತಾ, ಯಾರಿಗಾದರೂ appointment ಕೊಡಬೇಕೆಂದರೂ ಕೂಡ, ಅಲ್ಲಿಯೂ ಒಂದು ಶಿಸ್ತುಬದ್ಧವಾಗಿ perfect dress code ನಲ್ಲಿ ಇದ್ದಂಥವರು. ಈ ತರಹದವರೆಲ್ಲಾ ಅಪರೂಪದಲ್ಲಿ ಅಪರೂಪ ಎನ್ನುವ ವ್ಯಕ್ತಿತ್ವದವರು. ಇಂಥವರು ಬಹಳ rare ಎಂದು ಹೇಳಬಹುದು. ಅವರನ್ನು politician ಎನ್ನುವುದಕ್ಕಿಂತ statesman ಎಂದು ಹೇಳುವುದು ಸೂಕ್ತ. ತಾವು ತಂದಿರತಕ್ಕಂತಹ ಶ್ರದ್ಧಾಂಜಲಿಯನ್ನು ಸಲ್ಲಿಸಿ ನನ್ನ ನುಡಿನಮನಗಳನ್ನು ಅರ್ಪಿಸುತ್ತೇನೆ. ನಮಸ್ಕಾರ.

**ಶ್ರೀ ಹೆಚ್. ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಾಡು ಕಂಡ ಅಪರೂಪದ ನಾಯಕ ಮತ್ತು ರಾಜಕೀಯ ಮುತ್ಸದ್ದಿ ಮಾನ್ಯ ಎಸ್.ಎಂ.ಕೃಷ್ಣ ಅವರು ನಮ್ಮನ್ನು ಅಗಲಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೂ ಕೂಡ ನಾವು ಅವರನ್ನು ಮೆಚ್ಚಿದವರು. ನಾನು ಕಾನೂನು ವಿದ್ಯಾರ್ಥಿಯಾಗಿದ್ದಾಗಲೂ ಮದ್ದೂರಿಗೆ canvass ಗೆ ಹೋಗುತ್ತಿದ್ದೆನು. ಕಾಲಘಟ್ಟದಲ್ಲಿ ನಾನು ಕೂಡ ಶಾಸಕನಾಗಿದ್ದಂತಹ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿಯಾದರು. ಆಗ ಅವರ ಸಂಪುಟಕ್ಕೆ ನನ್ನನ್ನು ಸೇರಿಸಿಕೊಂಡು ನನಗೆ ಶಾಲಾ ಶಿಕ್ಷಣ ಖಾತೆಯನ್ನು ಕೊಟ್ಟರು. ಆಗ ಬೇರೆಯವರು "ಏನು ಸರ್, ವಿಶ್ವನಾಥನಿಗೆ ಯಾವುದೋ ಮೇಷ್ಟ್ರನ್ನು ಕಾಯುವ ಕೆಲಸ ಕೊಟ್ಟಿದ್ದೀರಲ್ಲ" ಎಂದರು. ಅದಕ್ಕೆ ಅವರು "ವಿಶ್ವನಾಥ್, ನೀನು ಯಾರ ಮಾತೂ ಕೇಳಬೇಡ. ನನ್ನ ಸರ್ಕಾರದ ಆದ್ಯತೆ ಏನೆಂದರೆ ಅಕ್ಷರ ಮತ್ತು ಆರೋಗ್ಯ. ಹಾಗಾಗಿ ಅಕ್ಷರದ ಜವಾಬ್ದಾರಿ ನಿನ್ನ ಕೈಯಲ್ಲಿ ಕೊಟ್ಟಿದ್ದೇನೆ. ಮುಂದೆ ಆರೋಗ್ಯದ ಜವಾಬ್ದಾರಿಯೂ ನೀನು ತೆಗೆದುಕೊಳ್ಳಬೇಕಾಗುತ್ತದೆ" ಎಂದು ಹೇಳಿ ನನಗೆ ಆ ಜವಾಬ್ದಾರಿಯನ್ನು ಕೊಟ್ಟರು. ಅವತ್ತು ಪೋಷಕರು, ಶಿಕ್ಷಕರು, ಸಮಾಜ ಎಲ್ಲಾ ಸೇರಿ ಇಡೀ ದೇಶದಲ್ಲಿಯೇ ಕರ್ನಾಟಕ ಸರ್ಕಾರವು ಒಂದು ದೊಡ್ಡ ಅಕ್ಷರ ಕ್ರಾಂತಿಗೆ ನಾಂದಿಯನ್ನು ಹಾಡಿತು. ಇವತ್ತು 84 ಲಕ್ಷ ಮಕ್ಕಳು ಮಧ್ಯಾಹ್ನದ ಊಟ ಮಾಡುತ್ತಾರೆ. ಅದನ್ನು ಜಾರಿಗೆ ತರುವುದಕ್ಕೆ ಬಹಳ ಶ್ರಮ ಪಟ್ಟಂಥವರು.

ಯೂನಿಸೆಫ್‌ನಿಂದ ಹಣವನ್ನು ತೆಗೆದುಕೊಂಡು ಬಂದರು. 36,000 ಶಾಲೆಗಳಿಗೆ ಏಕಕಾಲದಲ್ಲಿ ಕಾಂಪೌಂಡ್, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮಾಡಿದರು. ನಮ್ಮ ಪ್ರೌಢಶಾಲಾ ವಿದ್ಯಾರ್ಥಿನಿಯರು ಬೆಳಗ್ಗೆ ಬಂದರೆ ಸಂಜೆಯ ತನಕ ಅವರಿಗೆ ಶೌಚಾಲಯ ಇರಲಿಲ್ಲ. ಇವೆಲ್ಲವನ್ನೂ ಅರ್ಥ ಮಾಡಿಕೊಂಡು ಅವರು ಮಾಡಿದರು. ಶಾಲೆಗಳನ್ನು ದೇವಾಲಯಗಳನ್ನಾಗಿ ಮಾಡಿದರು. ನಮ್ಮ ಸರ್ಕಾರಿ ಶಾಲೆಗಳೇ ದೇವಾಲಯಗಳು, ನಮ್ಮ ಮಕ್ಕಳೇ ದೇವರು, ಮಧ್ಯಾಹ್ನದ ಬಿಸಿಯೂಟ ಅವರಿಗೆ ಕೊಡುವ ನೈವೇದ್ಯ ಎಂಬ ಮಾತನ್ನು ಮಾನ್ಯ ಎಸ್.ಎಂ.ಕೃಷ್ಣ ಅವರು ಹೇಳಿದ್ದರು. ಹಾಗಾಗಿ ಶಿಕ್ಷಣದಲ್ಲಿ ಒಂದು ದೊಡ್ಡ ಕ್ರಾಂತಿಯಾಯಿತು.

ನಂತರ ನನ್ನನ್ನು ಸಹಕಾರ ಸಚಿವನಾಗಿ ಮಾಡಿದರು. ಆಗ ಯಶಸ್ವಿನಿ ಆರೋಗ್ಯ ವಿಮೆ ಯೋಜನೆಯನ್ನು ತೆಗೆದುಕೊಂಡು ಬಂದರು. ಕೇವಲ ರೂ.5ಗಳಲ್ಲಿ ರೂ.3 ಲಕ್ಷಗಳ ವೆಚ್ಚದ ಹೃದಯ ಶಸ್ತ್ರಚಿಕಿತ್ಸೆ, ಮೂತ್ರಪಿಂಡ ಶಸ್ತ್ರಚಿಕಿತ್ಸೆ ಲಭಿಸುವಂತೆ ಮಾಡಿದರು. ಇದು ಹುಡುಗಾಟವಲ್ಲ. ನಮ್ಮ ಹಳ್ಳಿಗಳ ಜನತಾ ಮನೆಗಳಲ್ಲಿರುವವರು, Killa ನಲ್ಲಿರುವವರಿಗೆ ರೂ.5 ಕ್ಕೆ heart operation ಎಂದರೆ ನಿಜಕ್ಕೂ ಕೂಡ ಭಾರತದಲ್ಲಿಯೇ ಅದು ಒಂದು ದೊಡ್ಡ ಕಾರ್ಯಕ್ರಮ. ಅದು ಬಹಳ ಯಶಸ್ವಿಯಾಯಿತು. ಆದರೆ ಏನು ಮಾಡುವುದು? ದುರದೃಷ್ಟ. 2013ನೇ ಇಸವಿಯಲ್ಲಿ ಮುಖ್ಯಮಂತ್ರಿಯಾದ ಮಾನ್ಯ ಸಿದ್ದರಾಮಯ್ಯನವರು ಅದನ್ನು withdraw ಮಾಡಿಬಿಟ್ಟರು. ಮತ್ತೆ ಈಗ ಜಾರಿಯಲ್ಲಿದೆ.

ಅದರ ಜೊತೆಗೆ women empowerment ಎಂಬುದು ಬಹಳ ದೊಡ್ಡ ಯೋಜನೆ. ಇಂದು ಹಳ್ಳಿ ಹಳ್ಳಿಗಳಲ್ಲಿಯ ನಮ್ಮ ಹೆಣ್ಣುಮಕ್ಕಳು ಉಳಿತಾಯ ಮಾಡಿರುವ ರೂ.2000 ಕೋಟಿ ಹಣ ಸ್ತ್ರೀ ಶಕ್ತಿ ಉಳಿತಾಯ ಖಾತೆಯಲ್ಲಿದೆ. ಹೀಗೆ ಹಲವಾರು ಯೋಜನೆಗಳನ್ನು ಅವರು ತಂದಿದ್ದರು. ಅಕ್ಷರ ಮತ್ತು ಆರೋಗ್ಯಕ್ಕೆ ಬಹಳ ಒತ್ತನ್ನು ಕೊಟ್ಟರು. ಕೆಲವರು "ಏನು ಸ್ವಾಮಿ, ನಿಮ್ಮ ಅಧಿಕಾರದಲ್ಲಿ..." ಎಂದು ಹೇಳಿದರೆ, ಅವರು "ಅಯ್ಯೋ, ಹಾಗೆ ಹೇಳಬಾರದು. ಜನ ನಮಗೆ ಅಧಿಕಾರ ಕೊಟ್ಟಿಲ್ಲ. ಜನ ಜವಾಬ್ದಾರಿ ಕೊಟ್ಟಿದ್ದಾರೆ. ಆ ಜವಾಬ್ದಾರಿಯನ್ನು ಜನರ ಸಹಕಾರದಿಂದ ನಾವು ನಿಭಾಯಿಸಬೇಕೆ

ಹೊರತು ನಮಗೆ ಅಧಿಕಾರವಿದೆ ಎಂದು ಹೇಳಬಾರದು" ಎನ್ನುವಂತಹ ಬಹಳ ಸೂಕ್ಷ್ಮವಾದ ಮಾತುಗಳನ್ನು ಹೇಳುತ್ತಿದ್ದರು.

ಮಾನ್ಯ ಸಿ.ಟಿ.ರವಿಯವರು ಹೇಳಿದಂತೆ ವೀರಪ್ಪನ್ ಪ್ರಕರಣ ಬಹಳ ಸುಲಭದ್ದಾಗಿರಲಿಲ್ಲ. ಬಹಳ ಸೂಕ್ಷ್ಮವಾದ ಪ್ರಕರಣವಾಗಿತ್ತು. ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ಇಡೀ ರಾಜ್ಯ ಹೊತ್ತಿ ಉರಿಯುತ್ತಿತ್ತು. ಆದರೆ ಬಹಳ ಸಮಚಿತ್ತದಿಂದ ಕಾಡಿನ ಆದಿವಾಸಿ ಜನರ ಸಹಕಾರವನ್ನೂ ತೆಗೆದುಕೊಂಡು ಬಹಳ ಸೂಕ್ಷ್ಮವಾದ ವಿಚಾರವನ್ನು ಅವರು ಪರಿಹರಿಸಿ ಡಾ:ರಾಜ್‌ಕುಮಾರ್ ಅವರನ್ನು ಬಿಡುಗಡೆ ಮಾಡಿಸಿದರು. ಇದು ಬಹಳ ದೊಡ್ಡ ವಿಚಾರ. ರಾಜ್ಯದ ಒಬ್ಬ ನಾಯಕ ಹೇಗೆ ಬಹಳ ದೊಡ್ಡ ಸಮಸ್ಯೆಯನ್ನು ನಿಭಾಯಿಸುತ್ತಾನೆ ಎನ್ನುವುದಕ್ಕೆ ಡಾ:ರಾಜ್‌ಕುಮಾರ್ ಬಿಡುಗಡೆ ಒಂದು ದೊಡ್ಡ ಉದಾಹರಣೆ. ಅಂಥದ್ದೆಲ್ಲಾ ಮಾಡಿರತಕ್ಕಂಥ ಮಾನ್ಯ ಎಸ್.ಎಂ.ಕೃಷ್ಣ ಅವರದ್ದು ಮಾದರಿ ನಾಯಕತ್ವ. ಅವರ ಕಾಲದಲ್ಲಿ ಬಂದಂತಹ ಐಟಿ/ಬಿಟಿ. ಆ ಕಂಪನಿಗಳಿರುವ ಕಡೆ ಹೋದರೆ "ನಾವು ಯಾವ ದೇಶದಲ್ಲಿದ್ದೇವೆ" ಎಂದೆನಿಸುತ್ತದೆ.

(740) 10-12-2024 (12.30) ಕೆಜಿ:ಎಂಡಿ (ವಿ.ಕೆ) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ವಿಶ್ವನಾಥ್ (ಮುಂದು):**

ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಸಿಂಗಾಪುರ ಮಾಡುತ್ತೇವೆಂದು ಹೇಳಿದರು. ಹೌದು. ಸಿಂಗಾಪುರಕ್ಕಿಂತ ಜೋರಾಗಿ ಮಾಡಿದ್ದಾರೆ. ನಮ್ಮ ಮಕ್ಕಳು ಇವತ್ತಿನ ದಿವಸ ಸುಮಾರು 3 ರಿಂದ 4 ಲಕ್ಷ ರೂಪಾಯಿಗಳ ವೇತನ ತೆಗೆದುಕೊಳ್ಳುವುದಕ್ಕೆ ಯಾರು ಕಾರಣ? ನಮ್ಮ ಮಕ್ಕಳ ಬದುಕು ಚೆನ್ನಾಗಿ ಆಯಿತು. ನಮ್ಮ ಭೂಮಿಗೆ value ಬಂತು. ಅದರ ಜೊತೆಗೆ ಇಡೀ ಭಾರತ ಸರ್ಕಾರದ ಆರ್ಥಿಕತೆಯ 60% ಭಾಗವನ್ನು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ತುಂಬುತ್ತಿವೆ. ಇದಕ್ಕೆ ಮಾನ್ಯ ಎಸ್.ಎಂ.ಕೃಷ್ಣರವರು ಕಾರಣ. ಹಾಗಾಗಿ, ನಮ್ಮ ದೇಶದ ಆರ್ಥಿಕ ಭದ್ರತೆಗೂ ಕೂಡ ಮಾನ್ಯ ಎಸ್.ಎಂ.ಕೃಷ್ಣರವರು ತಂದಂತಹ ಕಾರ್ಯಕ್ರಮಗಳು ಇವತ್ತಿಗೂ ಸಹಕಾರಿಯಾಗಿವೆ ಎನ್ನುವಂತಹದ್ದನ್ನು ನಾನು ಈ ಸಂದರ್ಭದಲ್ಲಿ ಸ್ಮರಣೆ ಮಾಡುತ್ತೇನೆ. ಏಕೆಂದರೆ, ನನ್ನ ಮತ್ತು ಮಾನ್ಯ

ಎಸ್.ಎಂ.ಕೃಷ್ಣರವರ ಸ್ನೇಹ ಸಂಬಂಧ ಬಹಳ ಚೆನ್ನಾಗಿ ಇತ್ತು. ನಾನು **"ಹಳ್ಳಿ ಹಕ್ಕಿ ಹಾಡು"** ಎಂದು ಒಂದು ಪುಸ್ತಕವನ್ನು ಬರೆದಿದ್ದೆ. ಇದರಲ್ಲಿ ನನ್ನ ಆತ್ಮ ಕಥೆಯನ್ನು ಬರೆಯುವಂತಹ ಸಂದರ್ಭದಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರಿಗೂ ಮತ್ತು ಚತುರ್ಭಾಷಾ ನಟಿ ಶ್ರೀಮತಿ ಬಿ.ಸರೋಜಾದೇವಿರವರಿಗೂ ಒಂದು ತರಹ ಪ್ರಣಯ ಪ್ರಸಂಗ ಇತ್ತು. ನಾನು ಅದನ್ನು ಬರೆದಿದ್ದೆ. ಆಗ ದೊಡ್ಡ ಅಲ್ಲೋಲ-ಕಲ್ಲೋಲ ಆಯಿತು. ದೊಡ್ಡ ಗಲಾಟೆಗಳು ಆಗಿ ಹೋದವು. ನಾನು ಆಮೇಲೆ ಮಾನ್ಯ ಎಸ್.ಎಂ.ಕೃಷ್ಣರವರಿಗೆ ಪುಸ್ತಕವನ್ನು ಕಳುಹಿಸಿಕೊಟ್ಟು, at that time he was the Governor of Maharashtra Government. ಟೆಲಿಫೋನ್‌ನಲ್ಲಿ ಸರ್, ತಮ್ಮ ಮನಸ್ಸಿಗೆ ಏನಾದರೂ ಬೇಜಾರು ಆಯಿತೇ ಎಂದು ಕೇಳಿದೆ. ಅದಕ್ಕೆ ಅವರು "hey what is there Vishwanath" ತಾವು ಇರುವ ವಿಚಾರವನ್ನು ಬರೆದಿದ್ದೀರಿ, ತಾವು ಇಲ್ಲದಿರುವುದನ್ನು ಬರೆದಿಲ್ಲ, ಇನ್ನೂ ಚೆನ್ನಾಗಿ ಬರೆಯಬೇಕಾಗಿತ್ತು ಎಂದು ಹೇಳಿದರು. ಆ ರೀತಿ ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳುತ್ತಿದ್ದಂತಹ ಒಬ್ಬ ಜನನಾಯಕರಾಗಿದ್ದರು. ಹಾಗಾಗಿ, ನಾವು ಇವತ್ತು ಅವರನ್ನು ಕಳೆದುಕೊಂಡಿದ್ದೇವೆ. ಇವತ್ತು ನನಗೆ ಬೆಳಗ್ಗೆ 5 ಗಂಟೆಗೆ ಟೆಲಿಫೋನ್ ಮಾಡಿ ಶ್ರೀ ಎಸ್.ಎಂ.ಕೃಷ್ಣರವರು ನಿಧನ ಹೊಂದಿದ್ದಾರೆಂದು ತಿಳಿಸಿದರು. ನನಗೆ ಆ ಸಮಯದಿಂದಲೂ ಸಹ, ಏನು ಯಾರನ್ನು ಕಳೆದುಕೊಂಡ ರೀತಿ ನೋವು ಆಗುತ್ತಿದೆ. ಏಕೆಂದರೆ, ನನ್ನ ಮತ್ತು ಅವರ ಒಡನಾಟ ಆಗಿತ್ತು. ಮೂರು ತಿಂಗಳ ಹಿಂದೆ ನಾನು ಅವರ ಮನೆಗೆ ಹೋಗಿದ್ದೆ. ಅವರಿಗೆ ಏನೇ ಕಾಯಿಲೆ ಇದ್ದರೂ ಸಹ, ಅವರು ಆಚೆಗೆ ಬಂದು ಮಾತನಾಡಿಸಬೇಕಾದರೆ, ಅವರ dress code ಆ ತರಹ ಇರುತ್ತಿತ್ತು. ಅವರು ಬಂದು ಮಾತನಾಡಬೇಕಾದರೆ, hey, Vishwanath how are you ಎಂದು ಮಾತನಾಡಿಸುತ್ತಿದ್ದರು. ಆ ಆತ್ಮೀಯತೆ, ಸಂಸ್ಕೃತಿ, ಸಂಸ್ಕಾರ ಮತ್ತು ನಡವಳಿಕೆ same ಶ್ರೀ ಡಿ.ದೇವರಾಜು ಅರಸ್‌ರವರು ಯಾವ ರೀತಿ ಇದ್ದರೋ ಆ ರೀತಿ ಇದ್ದರು. ಮಾನ್ಯ ಡಿ.ದೇವರಾಜು ಅರಸ್‌ರವರು ಕೂಡ ಯಾರನ್ನೂ ಏಕ ವಚನದಲ್ಲಿ ಮಾತನಾಡಿಸುತ್ತಿರಲಿಲ್ಲ. ಶ್ರೀ ಎಸ್.ಎಂ.ಕೃಷ್ಣರವರು ಸಹ ಯಾರನ್ನು ಏಕ ವಚನದಲ್ಲಿ ಮಾತನಾಡಿಸುತ್ತಿರಲಿಲ್ಲ. ಒಂದು ಬಾರಿ ಕ್ಯಾಬಿನೆಟ್‌ನಲ್ಲಿ ಶ್ರೀ ಡಿ.ಕೆ.ಶಿವಕುಮಾರ್‌ರವರಿಗೂ ನನಗೆ ಗಲಾಟೆ ಆಗಿತ್ತು. ಆ ಸಂದರ್ಭದಲ್ಲಿ ಶ್ರೀ ಎಸ್.ಎಂ.ಕೃಷ್ಣರವರು ಆ ರೀತಿಯ ಪದ ಪ್ರಯೋಗ ಇಲ್ಲಿ ಖಂಡಿತ ಸಾಧ್ಯವಿಲ್ಲವೆಂದು ಹೇಳಿದ್ದರು. ಹಾಗಾಗಿ, ಬಹಳ ಸುಸಂಸ್ಕೃತ ವ್ಯಕ್ತಿತ್ವದ ವ್ಯಕ್ತಿಯಾಗಿದ್ದರು. ಅವರನ್ನು ರಾಜಕೀಯದ ವ್ಯಕ್ತಿ

ಎನ್ನುವುದಕ್ಕಿಂತ ಶ್ರೀ ಎಸ್.ಎಂ.ಕೃಷ್ಣರವರು ಈ ನಾಡಿನ ಒಬ್ಬ ಸಾಂಸ್ಕೃತಿಕ ನಾಯಕರಾಗಿದ್ದರು. ನಾನು ಅವರ ಆತ್ಮಕ್ಕೆ ತಾಯಿ ಶ್ರೀ ರಾಜರಾಜೇಶ್ವರಿ ದೇವಿ ಹಾಗೂ ಶ್ರೀ ಭುವನೇಶ್ವರಿ ದೇವಿ ಶಾಂತಿಯನ್ನು ಕೊಡಲಿ ಎಂದು ಇಷ್ಟನ್ನು ಹೇಳಿ ನಾವು ಪ್ರಾರ್ಥನೆ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಶ್ರೀ ಎಸ್.ಎಂ,ಕೃಷ್ಣರವರ ನಿಧನದ ಕುರಿತು ಸಂತಾಪ ಸೂಚನೆಯಲ್ಲಿ ಭಾಗವಹಿಸಿ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಪತಿಗಳಾದ ತಮಗೆ ಧನ್ಯವಾದಗಳು. ಸನ್ಮಾನ್ಯ ಶ್ರೀ ಎಸ್.ಎಂ,ಕೃಷ್ಣರವರ ಬಗ್ಗೆ ಈ ಸದನದಲ್ಲಿ ಹಲವಾರು ನಾಯಕರುಗಳು ಹಲವಾರು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಇದೇ ಸಂದರ್ಭದಲ್ಲಿ 92 ವರ್ಷಗಳ ಸಾರ್ಥಕ ಜೀವನವನ್ನು ನಡೆಸಿರುವಂತಹ ಮನುಷ್ಯತ್ವವನ್ನು ಪ್ರತಿಪಾದನೆ ಮಾಡಿದಂತಹ ಎಲ್ಲರನ್ನು ಒಳಗೊಂಡಂತಹ ಒಂದು ಸಮಾಜವಾದಿ ಚಿಂತನೆಯಲ್ಲಿ ನಂಬಿಕೆಯನ್ನಿಟ್ಟು ಕೆಲಸ ಮಾಡಿರುವಂತಹ ಒಬ್ಬ ಆದರ್ಶ 'Charismatic Leader' ರವರನ್ನು ಯಾರಾದರೂ ದೇಶದಲ್ಲಿ ಕಂಡಿದ್ದರೆ, ಅವರು ಶ್ರೀ ಎಸ್.ಎಂ.ಕೃಷ್ಣರವರು ಮಾತ್ರ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀ ಎಸ್.ಎಂ.ಕೃಷ್ಣರವರು ಹಲವಾರು ಸದನಗಳಲ್ಲಿದ್ದರು. ವಿಧಾನ ಪರಿಷತ್ತಿನಲ್ಲಿದ್ದರು. ವಿಧಾನಸಭೆಯಲ್ಲಿದ್ದರು. ಲೋಕಸಭೆಯಲ್ಲಿದ್ದರು. ರಾಜ್ಯ ಸಭೆಯಲ್ಲಿದ್ದರು. ಕೇಂದ್ರ ಸಚಿವರಾಗಿ ಕೆಲಸ ಮಾಡಿದ್ದಾರೆ. ನಮ್ಮ ರಾಜ್ಯದ ಸಚಿವರಾಗಿ ಕೆಲಸ ಮಾಡಿದ್ದಾರೆ. ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ರಾಜ್ಯದ ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. Speaker ಆಗಿ ಕೆಲಸ ಮಾಡಿದ್ದಾರೆ. ಅಲ್ಲದೇ, ರಾಜ್ಯಪಾಲರಾಗಿ ಕೆಲಸ ಮಾಡಿದ್ದಾರೆ. ಅವರು ಕೆಲಸ ಮಾಡಿದ ಎಲ್ಲಾ ಜಾಗಗಳಲ್ಲಿ ಅವರು ಅವರ ಛಾಪನ್ನು ಮೂಡಿಸಿ ಹೋಗಿರುವಂತಹ ಒಬ್ಬ ಧೀಮಂತ ನಾಯಕ ಕರ್ನಾಟಕದಲ್ಲಿ ಹೆಮ್ಮೆಯ ಕನ್ನಡಿಗ ಎಂದರೆ, ಅದು ಶ್ರೀ ಎಸ್.ಎಂ.ಕೃಷ್ಣರವರು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀಮತಿ ಪ್ರೇಮಕ್ಕನವರು ಇರಬಹುದು, ಶ್ರೀ ಎಸ್.ಎಂ.ಕೃಷ್ಣರವರು ಇರಬಹುದು, ಅವರು ಬಹಳ ಹತ್ತಿರದಿಂದ ಅವರ ಮಗನ ರೀತಿಯಲ್ಲಿ

ನನ್ನನ್ನು ನೋಡುತ್ತಿದ್ದರು. ನಾನು ಅವರ ಮನೆಯಲ್ಲಿ ಚಿಕ್ಕವಯಸ್ಸಿನಿಂದ ಒಡನಾಟವನ್ನು ಹತ್ತಿರದಿಂದ ಇಟ್ಟುಕೊಂಡು ಬೆಳೆದಿದ್ದೇನೆ. ನಾನು ನಿಜವಾಗಲೂ ಸಹ ಬೆಳಗಾವಿಯ ಅಳಿಯನಾಗಬೇಕೆಂದರೆ, ಅವರ ಕುಟುಂಬದ ಶ್ರೀಮತಿ ಪ್ರೇಮಕ್ಕನವರ ಸಹಾಯ ಸಹಕಾರ ಕೂಡ ಇದೆ. ಮೂಲತಃವಾಗಿ ಅವರು ಮತ್ತು Former Minister Nafees Fazal, ವೈದ್ಯಕೀಯ ಶಿಕ್ಷಣ ಇಲಾಖೆಯ ಸಚಿವರಾಗಿದ್ದರು. ಇವರೆಲ್ಲರೂ ಸೇರಿ ನನ್ನ ಮದುವೆಯ engagement ಮಾಡುವುದಕ್ಕೆ ಪ್ರಯತ್ನ ಮಾಡಿದ್ದು, ನನ್ನ ಜೀವನವನ್ನು ಕಟ್ಟಿಕೊಟ್ಟಿದ್ದು ಶ್ರೀ ಎಸ್.ಎಂ.ಕೃಷ್ಣರವರ ಕುಟುಂಬ ಎಂದು ಹೇಳುವುದಕ್ಕೆ ನಾನು ಹೆಮ್ಮೆ ಪಡುತ್ತಿದ್ದೇನೆ. ಅಂತಹ ಒಬ್ಬ ಧೀಮಂತ ನಾಯಕರಾಗಿದ್ದರು. ನಾನು ಕರ್ನಾಟಕ ವಿಧಾನ ಪರಿಷತ್ತಿಗೆ ನಾಮೀನೇಷನ್ ಮಾಡಿ ಅವರ ಮನೆಗೆ ಒಂದು appointment ತೆಗೆದುಕೊಳ್ಳೋಣವೆಂದು ಹಾಗೂ ಮರುದಿವಸ ಬಂದು ಅವರ ಆರ್ಶೀವಾದ ಪಡೆದುಕೊಳ್ಳೋಣವೆಂದು ಹೇಳುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರ ಪಿ.ಎ.ರವರು ಇನ್ನೂ ಐದು ನಿಮಿಷಗಳಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ಕೆಳಗೆ ಬರುತ್ತಿದ್ದು, ತಾವು ಭೇಟಿಯಾಗಿ ಹೋಗಿ ಎಂದು ಹೇಳಿದ್ದರು. ಆಗ ಪಿ.ಎ.ರವರು ಮಾನ್ಯ ಎಸ್.ಎಂ.ಕೃಷ್ಣರವರಿಗೆ ಶ್ರೀ ಎಂ.ನಾಗರಾಜುರವರು ತಮ್ಮ ಬಳಿ appointment ತೆಗೆದುಕೊಳ್ಳುವುದಕ್ಕೆ ಬಂದಿದ್ದಾರೆಂದು ಮೆಸೇಜ್ ಕೊಟ್ಟಿರುತ್ತಾರೆ ಎಂದು ಹೇಳಿದಾಗ ಮಾನ್ಯ ಎಸ್.ಎಂ.ಕೃಷ್ಣರವರು ಮೇಲಿನಿಂದ ಕೆಳಗೆ ಬರಬೇಕಾದರೆ ಆ ಸಂದರ್ಭದಲ್ಲಿ ಒಂದು ಶಾಲು ಮತ್ತು garland ಅನ್ನು ಹಿಡಿದುಕೊಂಡು ಬಂದು ನನಗೆ ಸನ್ಮಾನ ಮಾಡಿದ್ದರು. ಅವರು ನೇರವಾಗಿ "I was very happy to see you, your name has been announced as an MLC candidate from the Congress Party" ಎಂದು ಹೇಳಿದರು. ಅವರು ಯಾವ ರೀತಿ ಒಬ್ಬ ಸಣ್ಣ ಕಾರ್ಯಕರ್ತನನ್ನು ಗುರುತಿಸಿ, ಸನ್ಮಾನ ಮಾಡಿ ಅವರ ಮನದಾಳದ ಮಾತನ್ನು ಹೇಳುವಂತಹ ವಿಚಾರವನ್ನು ಬೆಳೆಸಿಕೊಂಡಿರುವಂತಹ ಒಬ್ಬ ಧೀಮಂತ ನಾಯಕ ಎನ್ನುವಂತಹ ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ನಾವು ಇವತ್ತು ಬೆಂಗಳೂರನ್ನು 'Silicon Valley' ಎಂದೇನು ಕರೆಯುತ್ತೇವೆಯೋ, 'Brand Bangalore' ಎಂದು ಕರೆಯುತ್ತೇವೆಯೋ ಅದಕ್ಕೆ ಭದ್ರ ಬುನಾದಿ ಯಾರಾದರೂ ಹಾಕಿದ್ದರೆ ಅದು ಮಾನ್ಯ ಎಸ್.ಎಂ.ಕೃಷ್ಣರವರು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ನಾವು ಇವತ್ತು ಬೆಂಗಳೂರಿನಲ್ಲಿ ನಿರ್ಮಾಣವಾಗುತ್ತಿರುವಂತಹ ಹಲವಾರು flyover ಗಳನ್ನು ನೋಡಿದರೆ, ಅದಕ್ಕೆ ಭದ್ರ ಬುನಾದಿ ಹಾಕಿರುವಂತಹವರು ಮಾನ್ಯ ಎಸ್.ಎಂ.ಕೃಷ್ಣರವರು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಕೇವಲ ಐಟಿ, ಬಿಟಿ ಎಂದು ಉದ್ಯಮ ಕ್ಷೇತ್ರದಲ್ಲಿ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಮೇಲಟ್ಟಕ್ಕೆ ತೆಗೆದುಕೊಂಡು ಹೋಗಿರುವುದು ಮಾತ್ರವಲ್ಲ, ಈ ದೇಶದಲ್ಲಿರುವಂತಹ ಬಹು ದೊಡ್ಡ ಸಮಸ್ಯೆಯಾಗಿರುವಂತಹ ನಿರುದ್ಯೋಗಕ್ಕೆ ಪರಿಹಾರವನ್ನು ಕಂಡುಕೊಟ್ಟಂತಹ ದೊಡ್ಡ ಕೆಲಸ, ಉದ್ಯೋಗಗಳನ್ನು ಸೃಷ್ಟಿ ಮಾಡಿದಂತಹ ದೊಡ್ಡ ಕೆಲಸ, ಯುವಕರಿಗೆ ಆಶಾಭಾವನೆಯಾಗಿದ್ದಂತಹ ಯಾರಾದರೂ ವ್ಯಕ್ತಿ ಇದ್ದರೆ, ಅದು ನಿಜವಾಗಲೂ ಶ್ರೀ ಎಸ್.ಎಂ.ಕೃಷ್ಣರವರು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. "He is one of the finest Charismatic leaders we have seen." ಅವರಿಗೆ ಯಾರ ಮೇಲೆಯೂ ಸಹ ಕೋಪ ಇರಲಿಲ್ಲ. ಅವರು ಯಾರನ್ನೂ ಸಹ ಏಕವಚನದಲ್ಲಿ ಮಾತನಾಡುವಂತಹ ವಿಚಾರವಾಗಲಿ. ಇನ್ನೊಬ್ಬರನ್ನು ಹೀಯಾಳಿಸಿ ಮಾತನಾಡುವಂತಹ ವಿಚಾರನ್ನಾಗಲಿ ನಾವು ಎಂದೂ ಕಾಣಲಿಲ್ಲ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರ ಮನೆಗೆ ಬಂದವರನ್ನು ಎಲ್ಲರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಪತ್ರಿಕೆಯವರು ಏನಾದರೂ ಪ್ರಶ್ನೆಗಳನ್ನು ಕೇಳಿದಾಗ ಅದು controversial ವಿಚಾರ ಆಗಿದ್ದರೆ, ಅವರ ಮೇಲೆ ಕೋಪ ಮಾಡಿಕೊಳ್ಳದೇ, ಅವರನ್ನು avoid ಮಾಡಿ ಮುಂದಕ್ಕೆ ಹೋಗಿ ಬೇರೆ ವಿಚಾರಗಳನ್ನು ಮಾತನಾಡಿಕೊಂಡು ಹೋಗುತ್ತಿದ್ದ ವಿಚಾರಗಳನ್ನು ನೋಡಿದ್ದೇವೆ.

ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಇನ್ನು ಒಂದು ನಿಮಿಷ ಸಮಯ ಬೇಕಾಗಿದೆ. ಏಕೆಂದರೆ, ನಾನು ಅವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನನ್ನನ್ನು ಕೆಎಸ್‌ಆರ್‌ಟಿಸಿಯ ನಿರ್ದೇಶಕನನ್ನಾಗಿ ಮಾಡಿದ್ದರು. ಅವರು ನನ್ನನ್ನು ಛೇರ್ಮನ್ ಮಾಡುವುದಕ್ಕೂ ಸಹ ಶಿಫಾರಸ್ಸು ಮಾಡಿದ್ದರು. ಆ ಸಂದರ್ಭದಲ್ಲಿ ಯಾವುದೋ ಒಂದು ರಾಜಕೀಯ ಕಾರಣಕ್ಕಾಗಿ ನನ್ನ ಹೆಸರನ್ನು ತೆಗೆದು ಹಾಕಿದರು. ನಾನು ವಿಧಾನ ಪರಿಷತ್ತಿನ ಸದಸ್ಯನಾದಾಗ ಅವರು ಆ ಕಾರಣಗಳನ್ನು ನನಗೆ

ಹೇಳಿದರು. ನಮ್ಮವರೆ ನನ್ನ ಹೆಸರನ್ನು ತೆಗೆದು ಹಾಕುವುದಕ್ಕೆ ಕಾರಣ ಎಂದು ಹೇಳಿದರು. ಆಗ ಅವರು "I was very happy to see you as an MLC, because I knew the leadership qualities of yours" ಎಂದು ಹೇಳಿದರು. ಅಂದರೆ, ಬೆಳೆಯುವಂತಹ ಯುವಕರ ಗುಣಲಕ್ಷಣಗಳನ್ನು ಗುರುತಿಸುವಂತಹ ಮೇಧಾವಿ ಯಾರಾದರೂ ಇದ್ದರೆ, ಅದು ಕರ್ನಾಟಕದಲ್ಲಿ ಶ್ರೀ ಡಿ.ದೇವರಾಜು ಅರಸ್‌ರವರ ನಂತರ, ಮಾನ್ಯ ಎಸ್.ಎಂ.ಕೃಷ್ಣರವರು ಅಗಿದ್ದರು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಐಟಿ,ಬಿಟಿಯ ಜೊತೆಗೆ ಸರ್ಕಾರಿ ಶಾಲೆಗಳನ್ನು ಉನ್ನತೀಕರಣಗೊಳಸುವಂತಹದ್ದು, ಮಕ್ಕಳಿಗೆ ಬಿಸಿಯೂಟದ ಕಾರ್ಯಕ್ರಮವನ್ನು ಕೊಡುವಂತಹದ್ದು ಮತ್ತು ಮಹಿಳಾ ಸಂಘಟನೆಗೆ ಸ್ತ್ರೀ ಶಕ್ತಿ ಗುಂಪುಗಳನ್ನು ಕಟ್ಟುವಂತಹ ವಿಚಾರ ಇರಬಹುದು, ಈ ಸ್ತ್ರೀ ಶಕ್ತಿ ಸಂಘಗಳಿಗೆ ಆರ್ಥಿಕ ಸಹಾಯ ಮಾಡುವಂತಹದ್ದು ಇರಬಹುದು, ಮಹಿಳೆಯರಿಗೆ ಸರಿಸಮಾನವಾದ ಅವಕಾಶವನ್ನು ಕೊಡುವಂತಹದ್ದು ಇರಬಹುದು, ಅವರ ಕ್ಯಾಬಿನೇಟ್‌ನಲ್ಲಿ 5 ಜನ ಮಹಿಳೆಯರಿಗೆ, ಬೇರೆಯವರಿಗೆ ಅವಕಾಶ ಕೊಡುವಂತಹ ಕೆಲಸ ಮಾಡಿರುವಂತಹದ್ದನ್ನು ನಾವೆಲ್ಲರೂ ನೋಡಿದ್ದೇವೆ. ಅತಿಹೆಚ್ಚು ಮಹಿಳೆಯರಿಗೆ ಮತ್ತು ಅಲ್ಪಸಂಖ್ಯಾತರಿಗೆ ಅವಕಾಶ ಕೊಟ್ಟಿರುವಂತಹ ಕೆಲಸ ಮಾಡಿದ್ದಾರೆ. ಮಾನ್ಯ ಸಭಾಪತಿಗಳಾದ ತಮ್ಮ ಜೊತೆಗೂ ಸಹ ಅವರು ಅತ್ಯಂತ ಬಾಂಧವ್ಯನ್ನು ಬೆಳೆಸಿಕೊಂಡು ಬಂದಿರುವುದನ್ನು ನಾವು ನೋಡಿದ್ದೇವೆ. Because, we have seen the legend leaders like ಶ್ರೀ ಎಸ್.ಎಂ.ಕೃಷ್ಣರವರು ಇರಬಹುದು, ಶ್ರೀ ದೇವರಾಜು ಅರಸ್ ರವರು ಇರಬಹುದು, ಇನ್ನಿತರ ಲೀಡರ್‌ಗಳನ್ನು ನೋಡಿದಾಗ ನಮಗೆ ನಿಜವಾಗಲೂ ಸಹ ಆದರ್ಶವಾಗಿರುವಂತಹ ಒಬ್ಬ ನಾಯಕರಾಗಿ ಬೆಳೆದಿದ್ದಾರೆ. ನಾನು ಈ ಸಂದರ್ಭದಲ್ಲಿ ವಿಶೇಷವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಅವರು ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದಾಗ ಇರಬಹುದು. ಕೇಂದ್ರದಲ್ಲಿ ಸಚಿವರಾಗಿದ್ದಾಗ ಇರಬಹುದು, ಅವರು ಎಲ್ಲಾ ಸಂದರ್ಭಗಳಲ್ಲಿಯೂ ಸಹ ಕರ್ನಾಟಕದ ವಿಚಾರ ಬಂದಾಗ ಅವರು ಕರ್ನಾಟಕದ ಪರವಾಗಿ ನಿಂತ

ಒಬ್ಬ ಧೀಮಂತ ಹೆಮ್ಮೆ ಕನ್ನಡಿಗರಾಗಿದ್ದಾರೆ. ಎಲ್ಲರಿಗೂ ಆದರ್ಶ ಆಗಿರುವಂತಹ ಸಾರ್ಥಕ ಜೀವನ ನಡೆಸಿರುವಂತಹ one of the Charismatic Leadera ಎಂದು ಹೇಳಬಹುದು.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ಮಾತನ್ನು ಹೇಳುವುದಾದರೆ, ಅವರಿಗೆ tennis ಬಗ್ಗೆ ಬಹಳ ಪ್ರೀತಿ ಇದ್ದಂತಹ ವ್ಯಕ್ತಿಯಾಗಿದ್ದರು. ವಾರದಲ್ಲಿ 2/3 ದಿವಸ tennis court ಗೆ ಹೋಗಿ tennis ಆಡುವಂತಹ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರು. ಅವರ dressing code ಅನ್ನು ನೋಡಿದಾಗ really, we are all inspired. ನಾನು ಸಹ ಸುಮಾರು 25 ವರ್ಷಗಳಿಂದ waistcoats ಹಾಕುತ್ತೇನೆಂದರೆ, ನಾನು ಸಹ ಶ್ರೀ ಎಸ್.ಎಂ.ಕೃಷ್ಣರವರನ್ನು ನೋಡಿ ಕಲಿತ್ತಿದ್ದು ಎನ್ನವಂತಹ ಮಾತನ್ನು ಹೇಳುತ್ತೇನೆ. He used to be so well-dressed politician ಎಂದು ನಾನು ಮತ್ತೆ ಹೇಳುತ್ತೇನೆ. He was a good statesman. ಅವರು ಒಬ್ಬ parliamentarian ಆಗಿ, ಒಬ್ಬ statesman ಆಗಿ ಇಡೀ ರಾಜ್ಯಕ್ಕೆ ಮತ್ತು ಇಡೀ ದೇಶಕ್ಕೆ ಆದರ್ಶವಾಗಿ ಹೆಮ್ಮರವಾಗಿ ಬೆಳೆದಂತಹ ಭಾರತಾಂಬೆಯ ಸುಪುತ್ರ ಯಾರಾದರೂ ಇದ್ದರೆ, ಅದು ಶ್ರೀ ಎಸ್.ಎಂ.ಕೃಷ್ಣರವರು ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಅವರು ಈ ಸದನದ ಸದಸ್ಯರಾಗಿದ್ದರು. ಹಾಗಾಗಿ, ಮುಂದಿನ ಪೀಳಿಗೆಗೆ ಆದರ್ಶವಾಗಿ ಯಾರ ಬಗ್ಗೆಯಾದರೂ ಹೇಳಬೇಕೆಂದರೆ, whether it is a matter of character, whether it is a matter of statesmanship, whether it is a matter of dressing, whether it is a matter of behaviour, whether it is a matter of inclusiveness, it is S.M.Krishna ಎನ್ನುವ ಮಾತನ್ನು ಹೇಳುತ್ತೇನೆ. ಈ ಎಲ್ಲಾ ಕಾರಣಗಳಿಗೋಸ್ಕರ ನಮ್ಮೆಲ್ಲರ ಆದರ್ಶವಾಗಿರುವಂತಹ ಒಬ್ಬ ಮಹಾನ್ ಚೇತನವನ್ನು ಕಳೆದುಕೊಂಡಿರುವಂತಹ ಸಂದರ್ಭದಲ್ಲಿ ಖಂಡಿತವಾಗಿಯೂ ಸಹ ಬಹಳ ದುಃಖವಾಗುತ್ತದೆ. ಅವರ ಕುಟುಂಬಕ್ಕೆ ದೇವರು ಆ ದುಃಖವನ್ನು ನಿಗಿಸುವಂತಹ ಶಕ್ತಿಯನ್ನು ನೀಡಲಿ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಂ.ಕೃಷ್ಣರವರು ಅವರ ಅಳಿಯನನ್ನು ಕಳೆದುಕೊಂಡ ಸಂದರ್ಭದಲ್ಲಿ ಅವರು ಬಹಳ ನೊಂದು ಹೋಗಿದ್ದರು. ಏಕೆಂದರೆ, ಅಂತಹ ಒಂದು

ಸನ್ನಿವೇಶವನ್ನು ಅವರ ಕಣ್ಣಲ್ಲಿ ನೋಡುವುದಕ್ಕೆ ಸಾಧ್ಯವೇ ಆಗದಂತಹ ಪರಿಸ್ಥಿತಿ ಆಗಿತ್ತು. ಆ ದಿವಸ ಬೆಳಗ್ಗೆ ನಾನು ಅವರ ಮನೆಗೆ ಹೋಗಿದ್ದೆ. ಅವರ ಕಣ್ಣಲ್ಲಿ ನೀರು ತುಂಬಿತ್ತು. ಅವರು ಒಂದು ಕುಟುಂಬದ ಎಂತಹ ಕಷ್ಟಗಳನ್ನು ನೋಡಿರುತ್ತಾರೆ. ಹಾಗಾಗಿ, ಎಲ್ಲಾ ಕಾರಣಗಳಗೋಸ್ಕರ ಅವರ ನೇತೃತ್ವದ ಸರ್ಕಾರದ ಅವಧಿ ಇನ್ನು ಆರು ತಿಂಗಳು ಇದ್ದಾಗ 6 ತಿಂಗಳು prepone ಮಾಡಿ ಚುನಾವಣೆಗೆ ಹೋದರು. ಗೆಲ್ಲುತ್ತೇವೆ ಎನ್ನುವ ಅಷ್ಟೊಂದು confidence ಅವರಿಗೆ ಇತ್ತು. ಆದರೆ, ಅಧಿಕಾರ ಬರಲಿಲ್ಲ. ಆ ನೋವು ಸಹ ಅವರಿಗೆ ಇತ್ತು. ಈ ಎಲ್ಲಾ ವಿಚಾರಗಳನ್ನು ಒಟ್ಟಾಗಿ ಹೇಳಬೇಕೆಂದರೆ, ನಮ್ಮ ಕರ್ನಾಟಕ ಕಂಡಂತಹ ಕನ್ನಡಿಗನಾಗಿರತಕ್ಕ, ಭಾರತಾಂಭೆಯ ಸುಪುತ್ರನಾದ ಶ್ರೀ ಎಸ್.ಎಂ.ಕೃಷ್ಣರವರನ್ನು ಕಳೆದುಕೊಂಡು ನಮ್ಮ ಸದನವು ಬಡವಾಗಿದೆ ಹಾಗೂ ಕರ್ನಾಟಕದ ರಾಜಕಾರಣ ಸಹ ಬಡವಾಗಿದೆ. ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡಿರುವುದರಿಂದ ನಾವೆಲ್ಲರೂ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊರೋಣ. ಎಂಬ ಮಾತನ್ನು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಪತಿಗಳಾದ ತಮಗೆ ಅತ್ಯಂತ ಧನ್ಯವಾದಗಳನು ಹೇಳುತ್ತಾ, ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

(ಮುಂದು)

(741) 10.12.2024 12.40 ಎಂವಿ-ಎಂಡಿ (ವಿಕೆ) (ಸಭಾಪತಿಯವರ ಉಪಸ್ಥಿತಿ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಮಾಜ ಸುಧಾರಕರಾಗಿ ಮತ್ತು ಹಿಂದುಳಿದ ವರ್ಗಗಳ ಅಗ್ರಗಣ್ಯ ನಾಯಕರಾಗಿ, ಈ ರಾಜ್ಯ ಮತ್ತು ರಾಷ್ಟ್ರದಲ್ಲಿ ತಮ್ಮದೇ ಆದಂತಹ ಕೊಡುಗೆಯನ್ನು ಕೊಟ್ಟಂತಹ ಮಾನ್ಯ ಎಸ್.ಎಂ.ಕೃಷ್ಣರವರ ಅಗಲಿಕೆಯಿಂದ ರಾಜ್ಯ ಮತ್ತು ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅವರು ಶ್ರೀ ಜಗಜ್ಯೋತಿ ಬಸವಣ್ಣನವರ ಮತ್ತು ಗೌತಮ ಬುದ್ಧರ ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು ಹಾಗೂ ಬಾಬಾ ಸಾಹೇಬ್ ಡಾ:ಬಿ.ಆರ್.ಅಂಬೇಡ್ಕರ್ ರವರು ರಚನೆ ಮಾಡಿದಂತಹ ಸಂವಿಧಾನದ ವಿಚಾರಗಳನ್ನು ಸಹ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಾರತ ದೇಶಕ್ಕೆ ಮತ್ತು ಕರ್ನಾಟಕ ರಾಜ್ಯಕ್ಕೆ ತಮ್ಮದೇ ಆದಂತಹ

ಕೊಡುಗೆಗಳನ್ನು ಸಲ್ಲಿಸಿದ್ದರು. ಅವರು ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ ಡಾ:ಮಲ್ಲಿಕಾರ್ಜುನ ಖರ್ಗೆಯವರ ಶಿಫಾರಸ್ಸಿನ ಮೇರೆಗೆ ನನಗೆ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ನೇಮಕ ಮಾಡಿದ್ದರು. ಆ ಸಂದರ್ಭದಲ್ಲಿ ನಾನು ಅವರಿಗೆ ಸನ್ಮಾನ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರು ನನ್ನನ್ನು ಕೂರಿಸಿ, ನನಗೇ ಸನ್ಮಾನ ಮಾಡಿ, ನೀವು ಬೆಳೆಯಬೇಕು ಮತ್ತೆ ಹಿಂದುಳಿದ ವರ್ಗಕ್ಕೆ ಉತ್ತಮವಾದಂತಹ ಕೆಲಸಗಳನ್ನು ಮಾಡತಕ್ಕಂತಹ ಕೆಲಸಗಳನ್ನು ಆಯೋಗದ ಮೂಲಕ ಮಾಡಬೇಕು. ಮತ್ತೆ ಹಿಂದುಳಿದ ವರ್ಗದವರು ಗಟ್ಟಿಯಾಗಿ ರಾಜಕೀಯವಾಗಿ ಬರತಕ್ಕಂತಹ ಕೆಲಸವನ್ನು ಮಾಡಬೇಕೆಂದು ನನ್ನ ಬೆನ್ನನ್ನು ತಟ್ಟಿ ನನಗೆ ಆಶೀರ್ವಾದ ಮಾಡಿದ್ದರು. ಅಂತಹ ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡು ನಾವೆಲ್ಲರೂ ಸಹ ದುಃಖದಲ್ಲಿ ಮುಳುಗಿದ್ದೇವೆ. ಈಗ ವಿಧಾನಸೌಧದ ಪಕ್ಕದಲ್ಲಿ ಇರತಕ್ಕಂತಹ ವಿಕಾಸ ಸೌಧವನ್ನು ಕೂಡ ನಿರ್ಮಾಣ ಮಾಡುವಂತಹ ಕೆಲಸ ಅವರ ನೇತೃತ್ವದಲ್ಲಿ ಆಗಿತ್ತು. ಮತ್ತೆ ವಿಮಾನ ನಿಲ್ದಾಣಕ್ಕೂ ಕೂಡ ಅವರೇ ಚಾಲನೆಯನ್ನು ಕೊಟ್ಟು, ಅದನ್ನು ಲೋಕಾರ್ಪಣೆ ಮಾಡುವಂತಹ ಕೆಲಸವನ್ನು ಮಾಡಿದ್ದರು. ಅವರು ಒಬ್ಬ ಹಿಂದುಳಿದ, ಅಲ್ಪಸಂಖ್ಯಾತರ ಮತ್ತು ಎಲ್ಲಾ ಜಾತಿ ಜನಾಂಗದವರ ಕಣ್ಣೀರು ಒರೆಸುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದರು. ನಮ್ಮ ಭಾಗದಲ್ಲಿಯೂ ಕೂಡ, ಡಾ:ಮಲ್ಲಿಕಾರ್ಜುನ ಖರ್ಗೆ ಮತ್ತು ಮಾನ್ಯ ಧರ್ಮಸಿಂಗ್ ಸಾಹೇಬ್‌ರನ್ನು ಕೂಡ ರಾಜಕೀಯದಲ್ಲಿ ಎತ್ತಿ ಹಿಡಿದು, ಅವರನ್ನು ಎತ್ತರಕ್ಕೆ ಬೆಳೆಸುವಂತಹ ಶಕ್ತಿಯನ್ನು ಕೊಟ್ಟಿದ್ದರು. ಅದಕ್ಕಾಗಿ ಅವರಿಗೆ ಸಂತಾಪವನ್ನು ಸೂಚಿಸುತ್ತಾ, ಅವರ ಕುಟುಂಬದವರಿಗೆ ಅವರ ಈ ಅಗಲಿಕೆಯನ್ನು ಭರಿಸುವಂತಹ ತಾಳ್ಮೆ ಮತ್ತು ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ತಾವು ತಂದಿರತಕ್ಕಂತಹ ಈ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಕರ್ನಾಟಕದ ವರಪುತ್ರ ಸನ್ಮಾನ್ಯ ಎಸ್.ಎಂ.ಕೃಷ್ಣರವರು ಧೀಮಂತ ಕನಸುಗಾರ ಮತ್ತು ಸೊಗಸುಗಾರ. ತಮ್ಮ ದೂರದೃಷ್ಟಿಯ ಮೂಲಕ ಹೊಸ ಕರ್ನಾಟಕವನ್ನೇ ಕಟ್ಟಿದ ದಿಟ್ಟ ಆಡಳಿತಗಾರ. ಅವರು ಶ್ರೀಮಂತಿಕೆಯ ಹಿನ್ನೆಲೆಯಿಂದ ಬಂದ ಶ್ರೀ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ರವರು ತಮ್ಮ ಬದುಕಿನ ಹಾದಿಯನ್ನು

ಬೇರೆಯೇ ರೀತಿಯಲ್ಲಿ ಕಂಡುಕೊಳ್ಳಬಹುದಾಗಿತ್ತು. ಆದರೆ, ಅವರು ತಮ್ಮ ಚಿಕ್ಕ ಪ್ರಾಯದಲ್ಲಿಯೇ ದೇಶ, ವಿದೇಶ, ರಾಜ್ಯವೆಂದು ಬಹಳಷ್ಟು ಶಿಕ್ಷಣ ಮತ್ತು ಕರ್ನಾಟಕದ ಸೇವೆಯಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡು, ಅವರು ಮಾಡಿರತಕ್ಕಂತಹ ಕೆಲಸ ಕಾರ್ಯಗಳನ್ನು ನಾವು ಯಾವೊತ್ತಿಗೂ ಮರೆಯುವುದಕ್ಕೆ ಸಾಧ್ಯವೇ ಇಲ್ಲ. ಅವರು ತಮ್ಮ ದೂರದೃಷ್ಟಿಯ ಮೂಲಕ ಈ ನಾಡನ್ನು ಕಟ್ಟಿರತಕ್ಕಂಥದ್ದು. ಮತ್ತೆ ಅವರು ಪರಿಣಾಮಕಾರಿಯಾಗಿ ಮಾಡಿರತಕ್ಕಂತಹ ಕೆಲಸ ಕಾರ್ಯಗಳಲ್ಲಿ ಅದರಲ್ಲೂ ವಿಶೇಷವಾಗಿ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಕರ್ನಾಟಕ ರಾಜ್ಯವನ್ನು ಸಿಂಗಾಪುರ ಮಾಡಬೇಕೆಂದು ಅಂತರರಾಷ್ಟ್ರಿಯ ಮಟ್ಟದಲ್ಲಿ ಐ.ಟಿ., ಬಿ.ಟಿ.ಯನ್ನು ಕರ್ನಾಟಕ ರಾಜ್ಯಕ್ಕೆ ತರಬೇಕೆಂದು ಇದ್ದಾಗ, ಹಲವಾರು ನೆರೆ ರಾಜ್ಯಗಳು ತಮ್ಮ ರಾಜ್ಯಕ್ಕೆ ಐ.ಟಿ., ಬಿ.ಟಿ. ಬರಬೇಕೆಂದು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತಿದ್ದರು. ಅಂತಹ ಸಂದರ್ಭದಲ್ಲಿ ಸನ್ಮಾನ್ಯ ಎಸ್.ಎಂ.ಕೃಷ್ಣ ರವರು ಅದನ್ನು ನಮ್ಮ ರಾಜ್ಯಕ್ಕೆ ತಂದು, ಇಡೀ ವಿದೇಶಕ್ಕೆ ಕರ್ನಾಟಕವನ್ನು ತೋರಿಸುವಂತಹ ಕೆಲಸವನ್ನು ಅವರು ಮಾಡಿದ್ದಾರೆ. ಆದುದರಿಂದ, ಈ ರಾಜ್ಯಕ್ಕೆ ಅವರ ಕೊಡುಗೆ ಏನಿದೆ, ಅದು ಅಪಾರವಾದುದು. ಅವರು ಒಬ್ಬ ವ್ಯಕ್ತಿಯಾಗಿ ಅಲ್ಲ. ಅವರು ಒಬ್ಬ ಶಕ್ತಿಯಾಗಿ ಇವತ್ತು ನಮ್ಮ ರಾಜ್ಯ ಮತ್ತು ರಾಷ್ಟ್ರವನ್ನು ನಿರ್ಮಾಣ ಮಾಡಿದ್ದಾರೆ. ಬಹುಶಃ ಅವರು ಕೇಂದ್ರದ ವಿದೇಶಾಂಗ ಸಚಿವರಾಗಿದ್ದಾಗ, ಬಹಳಷ್ಟು Foreign Affairs ನಲ್ಲಿ ನಮ್ಮ ರಾಜ್ಯಕ್ಕೋಸ್ಕರ ಕೆಲಸ ಮಾಡಿದ್ದಾರೆ. ಅವರ ಧರ್ಮಪತ್ನಿಯಾದಂತಹ ಶ್ರೀಮತಿ ಪ್ರೇಮಕ್ಕನವರು ಕೂಡ ನಮ್ಮ ಒಡನಾಟದಲ್ಲಿದ್ದರು. ಬಹುಶಃ ಅವರು ಆಸ್ಪತ್ರಗೆ ದಾಖಲಾದ ಎಲ್ಲಾ ಸಮಯದಲ್ಲೂ ಅವರ ಬಗ್ಗೆ ವಿಚಾರಣೆ ಮಾಡುತ್ತಿದ್ದೆ. ನಮ್ಮ ಅವಧೂತರಾದ ಶ್ರೀ ವಿನಯ್ ಗುರೂಜಿ ಎಂದು ಇದ್ದಾರೆ. ಅವರಲ್ಲಿ ಬಹಳಷ್ಟು ಈ ಒಂದು ಧಾರ್ಮಿಕ ಹಿನ್ನೆಲೆಯಲ್ಲಿ spiritual activities ನಲ್ಲಿ ಶ್ರೀ ಎಸ್.ಎಂ.ಕೃಷ್ಣ ಸಾಹೇಬರು ತುಂಬಾನೆ ಅದನ್ನು ಪಾಲನೆ ಮಾಡಿಕೊಂಡು ಬರುತ್ತಿದ್ದರು. ಹಲವಾರು ಮಾನ್ಯ ಸದಸ್ಯರು ಮಾತನಾಡಿದ ಹಾಗೆ ಅವರ dress code and discipline ಮತ್ತು ಅವರು ಯಾವುದೇ ಕೆಲಸವನ್ನು ಸಮಯಕ್ಕೆ ತಕ್ಕಂತೆ ಹೇಗೆ ಮಾಡಬೇಕು, ಯಾವ ಸಮಯದಲ್ಲಿ ಮಾಡಬೇಕು ಎಂಬುದರಲ್ಲಿ ಬಹಳಷ್ಟು ನಿಸ್ಸೀಮರಾಗಿ, ಬುದ್ಧಿವಂತರಾಗಿ ನಮ್ಮಂತಹ ಯುವಕರಿಗೆ ಒಂದು ಮಾದರಿಯಾಗಿ, ಅವರು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಬಹುಶಃ ಇಂತಹ ಒಬ್ಬ ಮುತ್ಸದಿ ರಾಜಕಾರಣಿ ಮತ್ತು ನಮ್ಮ ರಾಷ್ಟ್ರದ ಮತ್ತು ರಾಜ್ಯದ

ಒಂದು ಶಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಬಹುಶಃ ಅವರಿಗೆ ಮತ್ತು ಅವರ ಅಭಿಮಾನಿಗಳಿಗೆ, ಪಕ್ಷದ ಕಾರ್ಯಕರ್ತರಿಗೆ ಮತ್ತೆ ಅವರ ಕುಟುಂಬದ ಸದಸ್ಯರುಗಳಿಗೆ ಮತ್ತು ಎಲ್ಲರಿಗೂ ಕೂಡ ಈ ನೋವನ್ನು ಭರಿಸುವಂತಹ ಶಕ್ತಿಯನ್ನು ಆ ಭಗವಂತ ಕೊಡಲಿ ಎಂದು ಹೇಳುತ್ತಾ, ತಮ್ಮ ಮೂಲಕ ಪ್ರಾರ್ಥನೆಯನ್ನು ಮಾಡುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ತಾವು ತಂದಿರುವಂತಹ ಸಂತಾಪ ಸೂಚನೆ ನಿಲುವಳಿಗೆ ನಾನು ಕೂಡ ಸಹಮತವನ್ನು ವ್ಯಕ್ತಪಡಿಸುತ್ತಾ, ತಮಗೆಲ್ಲಾ ತಿಳಿದಂತೆ, ನನ್ನದೂ ಕೂಡ ಹೋರಾಟಗಳಿಂದ ಬಂದಂತಹ ರಾಜಕೀಯ ಜೀವನ. ವಿಶೇಷವಾಗಿ 2000ನೇ ಇಸವಿಯ ಸುಮಾರಿಗೆ ಆಲಮಟ್ಟಿ ಜಲಾಶಯದಲ್ಲಿ ನೀರು ನಿಲ್ಲಿಸುವಂತಹ ಸಂದರ್ಭದಲ್ಲಿ ಜಮೀನುಗಳಿಗೆ ಪರಿಹಾರ ಕೊಡುವುದರ ಜೊತೆಗೆ ಬಾಗಲಕೋಟೆ ಜಿಲ್ಲೆಯ ಎರಡು-ಮೂರರಷ್ಟು ಜಾಗ ಮುಳುಗಡೆಗೆ ಬಂದಂತಹ ಸಂದರ್ಭದಲ್ಲಿ ಅದಕ್ಕೆ ಪುನರ್ವಸತಿ ಮಾಡುವಂಥದ್ದು. ಬಡ ಜನರಿಗೆ ವಸತಿ ನೀಡುವಂತಹ ಸಂದರ್ಭ. ಇದು ಹತ್ತು ಹಲವಾರು ಸಮಸ್ಯೆಗಳ ಆಗರವಾಗಿ ಆಲಮಟ್ಟಿ ಜಲಾಶಯದ ವ್ಯವಸ್ಥೆ ನಡೆಯುತ್ತಿತ್ತು. 1999 ರಿಂದ 2004ರವರೆಗೆ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿಯೇ ನಾನೂ ಕೂಡ ಆ ಭಾಗದ ಬಿ.ಜೆ.ಪಿ.ಯ ಶಾಸಕನಾಗಿ ಬಾಗಲಕೋಟೆ ಜಿಲ್ಲೆಯಿಂದ ಆಯ್ಕೆಯಾಗಿದ್ದೆ. ಪ್ರತಿ ಸಭೆಯಲ್ಲೂ ಕೂಡ ಆ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವಂತಹ ಕೆಲಸ ಮಾಡುತ್ತಿದ್ದೆ. ಅವರು ಬಹಳಷ್ಟು ಬಾರಿ ನನ್ನ ಬಗ್ಗೆ ಬೇಸರಪಟ್ಟಿಕೊಂಡಿದ್ದನ್ನು ನಾನು ನೋಡುತ್ತಿದ್ದೆ. ಆಗ ನಾನು ಎರಡನೆ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದೆ. ಆಗ ಅವರು ಸ್ಪಂಧನೆ ಮಾಡುವಂತಹ ರೀತಿ, ನಿಯತ್ತು, ಆಲಿಸುವಂತಹ ಒಂದು ಹೃದಯ ವೈಶಾಲ್ಯತೆ ಮತ್ತು ಸಮಸ್ಯೆಗಳ ಆಳಕ್ಕೆ ಹೋಗಿ ತಿಳಿದುಕೊಳ್ಳುವ ಸ್ವಭಾವ ಏನಿದೆ, ಅದನ್ನು ಅಪರೂಪವಾಗಿ ಕೆಲವೊಂದು ರಾಜಕಾರಣಿಗಳಲ್ಲಿ ಕಂಡಿದ್ದೇನೆಯೇ ಹೊರತು, ಅಂತಹ ವ್ಯಕ್ತಿಗಳು ಸಿಗುವುದು ದುರ್ಲಭವೆಂದು ಹೇಳಲೇಬೇಕಾಗುತ್ತದೆ. ಅಂತಹ ನಾಯಕರು ಮುಖ್ಯಮಂತ್ರಿಗಯಾಗಿ, ಬಾಗಲಕೋಟೆ ಜಿಲ್ಲೆಯಲ್ಲಿ ನೀರು ನಿಲ್ಲಿಸುವಂತಹ ಸಂದರ್ಭದಲ್ಲಿ ಸುಮಾರು 638 ಕೋಟಿ ರೂಪಾಯಿಗಳ ಪ್ಯಾಕೇಜ್ ಕೊಟ್ಟು, ಅದು ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಸಂತ್ರಸ್ಥರ ವ್ಯವಸ್ಥೆ

ಮತ್ತು ಯು.ಕೆ.ಪಿ. ಮುಳುಗಡೆಯ ಪುನರ್ವಸತಿಗಾಗಿ ಮಾಡಿದಂತಹ ವ್ಯವಸ್ಥೆಯನ್ನು ಇವತ್ತಿಗೂ ಕೂಡ ನಾವು ಯಾರು ಮರೆಯಲಾರದಂತಹ ಸ್ಥಿತಿಯಲ್ಲಿ ಇದ್ದೇವೆ. ಅಂತಹ ಸೌಜನ್ಯಶೀಲ ವ್ಯಕ್ತಿ, ಸಮಸ್ಯೆಯ ಆಳಕ್ಕೆ ಹೋಗಿ, ಪ್ರತಿಯೊಬ್ಬರನ್ನು ಸಹ ಸಮಾನತೆಯ ದೃಷ್ಟಿಯಿಂದ ಆ ಸಮಸ್ಯೆಗೆ ಮುಖ ಮಾಡಿಕೊಟ್ಟು, ಆಳವಾಗಿ ಅಭ್ಯಾಸ ಮಾಡಿದಂತಹ ವ್ಯವಸ್ಥೆಗೆ ಪರಿಹಾರ ಹುಡುಕುವಂತಹ ಒಂದು ಹೃದಯ ವೈಶಾಲ್ಯತೆ ಬಹಳಷ್ಟು ಜನರಲ್ಲಿ ಸಿಗುವುದಿಲ್ಲ. ಇವತ್ತಿಗೂ ಕೂಡ, ಅನೇಕ ವರ್ಷವಾದರೂ ಕೂಡ ಆ ಸಮಸ್ಯೆಯ ಪರಿಹಾರವಾಗಿಲ್ಲ. ಸಂತ್ರಸ್ಥರು ಧರಣಿ ಕೂರುವುದು ಸುಮಾರು 25 ವರ್ಷದಿಂದ ನಡೆಯುತ್ತಲೇ ಇದೆ. ಆ ಸಮಸ್ಯೆಗಳಿಗೆ ಪರಿಹಾರ ನೀಡುವಂತಹ ಪ್ರಾಮಾಣಿಕವಾದಂತಹ ಮನಸ್ಥಿತಿ ಕಿಂಚಿತಾದರೂ ಸಿಗುತ್ತಿಲ್ಲವೆಂಬ ನೋವು ನನಗಾಗಿದೆ. ಅಂತಹ ಅಪರೂಪದ ರಾಜಕಾರಣಿ, ಪದ್ಮಭೂಷಣ ಪ್ರಶಸ್ತಿ ವಿಜೇತರು ನಮ್ಮನಗಲಿದ್ದು, ಈ ನಾಡಿಗೆ ತುಂಬಲಾರದ ನಷ್ಟವೆಂದು ಹೇಳುತ್ತಿದ್ದೇನೆ. ಅಂತಹವರು ಮತ್ತೊಮ್ಮೆ, ಮಗದೊಮ್ಮೆ ರಾಜಕಾರಣದ ವ್ಯವಸ್ಥೆಯಲ್ಲಿ ಇರಬೇಕು. ಹೃದಯ ವೈಶಾಲ್ಯತೆ ಮೆರೆಯಬೇಕು. ನಾವು ಇರುವುದು ಜನರಿಗೆ ಜನಪರವಾದಂತಹ ಕೆಲಸಗಳನ್ನು ಮಾಡುವುದಕ್ಕೆ ಹೊರತಾಗಿ ಬೇರೆ ಯಾವುದಕ್ಕೂ ಅಲ್ಲ. ಸಮಸ್ಯೆಗಳು ಬಂದಾಗ ಬೆನ್ನು ತೋರಿಸಿ ಹೋಗುವುದಕ್ಕೆ ಅಲ್ಲ. ಅದನ್ನು ನಾವೆಲ್ಲರೂ ಅರ್ಥ ಮಾಡಿಕೊಂಡು, ಅವರ ಮಾರ್ಗದಲ್ಲಿ ನಡೆದಾಗ, ಅವರಿಗೆ ಒಂದು ಒಳ್ಳೆಯ ಶ್ರದ್ಧಾಂಜಲಿ ಮತ್ತು ಒಳ್ಳೆಯ ನಾಯಕತ್ವಕ್ಕೆ ಬೆಲೆ ಕೊಟ್ಟಂತೆ ಆಗುತ್ತದೆ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿ, ನಾನೂ ಕೂಡ ಸಹಮತ ವ್ಯಕ್ತ ಮಾಡುತ್ತಾ, ಅವರಿಗೆ ಶ್ರದ್ಧಾಂಜಲಿ ಕೋರುತ್ತಿದ್ದೇನೆ.

(ಮುಂದು)

(742) 10.12.2024 12.50 LL-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸನ್ಮಾನ್ಯ ಎಸ್.ಎಂ. ಕೃಷ್ಣರವರು ಇವೊತ್ತಿನ ದಿವಸ ಬೆಳಗಿನ ಜಾವ ದೈವಾದೀನರಾದ ಸುದ್ಧಿ ಇಡೀ ನಾಡಿಗೆ ಹಾಗೂ ದೇಶಕ್ಕೆ ಒಂದು ದುಃಖವನ್ನು ತಂದಿದೆ. ಬಹಳ ಮುತ್ಸದ್ಧಿ ರಾಜಕಾರಣಿ. ಸಮಚಿತ್ತವನ್ನು ಹೊಂದಿರತಕ್ಕಂತಹ, ಸಮದೃಷ್ಟಿಯನ್ನು ಹೊಂದಿರತಕ್ಕಂತಹ ಒಬ್ಬ ಮರೆಯಲಾಗದ

ರಾಜಕಾರಣಿ ಶ್ರೀ ಎಸ್.ಎಂ. ಕೃಷ್ಣರವರನ್ನು ನಾನು ಎಬಿವಿಪಿ ನಲ್ಲಿ ಇದ್ದಂತಹ ಸಂದರ್ಭದಲ್ಲಿ ಶೈಕ್ಷಣಿಕ ಹೋರಾಟಗಳನ್ನು ಮಾಡಿದಂತಹ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡುವಂತಹ ಒಂದು ಸಂದರ್ಭ ಬಂದಿತ್ತು. ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಮಲ್ಲೇಶ್ವರಂ ಗ್ರೌಂಡ್‌ನಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿ ನಾವು ಹೋರಾಟ ಮಾಡುತ್ತಿದ್ದೆವು. ಆಗ ಸಿಇಟಿ ಸಮಸ್ಯೆ ಬಹಳ ಪೀಕ್‌ನಲ್ಲಿತ್ತು. ನಾವು ಹೋರಾಟವನ್ನು ಮಾಡುತ್ತಿದ್ದರಿಂದ, ಪೋಲೀಸರು ನಮ್ಮನ್ನು ಅರೆಸ್ಟ್ ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳ ಬಳಿ ಕರೆದುಕೊಂಡು ಹೋದರು. ಆಗ ಶ್ರೀ ರಘುನಂದನ್ ಹಾಗೂ ನಾನು ಅಲ್ಲಿಗೆ ಹೋಗಿದ್ದೆವು. ಆಗ ಡಾ: ಜಿ. ಪರಮೇಶ್ವರ್‌ರವರು ಉನ್ನತ ಶಿಕ್ಷಣ ಮಂತ್ರಿಗಳಾಗಿದ್ದರು. ನಾವು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಶ್ರೀ ಎಸ್.ಎಂ. ಕೃಷ್ಣರವರು, "ಏನಪ್ಪಾ, ಬಹಳ ದೊಡ್ಡ ಹೋರಾಟ ಮಾಡಿದ್ದೀರಿ" ಎಂದು ನಮ್ಮ ಹೆಗಲ ಮೇಲೆ ಕೈ ಹಾಕಿ, ಮಾತುಕತೆಯನ್ನು ಮುಕ್ತಾಯಗೊಳಿಸಿದ ನಂತರ, ತಾವು ಮುಖ್ಯಮಂತ್ರಿಗಳಾಗಿದ್ದರೂ ಸಹ, ಅವರ ಕೊಠಡಿಯ ಬಾಗಿಲ ಬಳಿಯವರೆಗೂ ಬಂದು ನಮ್ಮನ್ನು ಬೀಳ್ಕೊಟ್ಟಿರುತ್ತಾರೆ. ನಾವು ಇನ್ನೂ ವಿದ್ಯಾರ್ಥಿ ಹೋರಾಟಗಳನ್ನು ಮಾಡುವಂಥವರಾಗಿದ್ದೆವು. ಅಂದರೆ, ಇವರೇನು ವಿದ್ಯಾರ್ಥಿಗಳು ಇಂತಹ ಹೋರಾಟಗಳನ್ನು ಮಾಡುತ್ತಾರೆ ಎಂದು ನಮ್ಮನ್ನು ನಿರ್ಲಕ್ಷ್ಯ ಮಾಡಲಿಲ್ಲ. ಆದರೆ, ಶೈಕ್ಷಣಿಕ ಸಮಸ್ಯೆಗಳು ಏನೇನು; ಫೀ ಸ್ಟ್ರಕ್ಚರ್ ಏನು; ಈ ಹಿಂದೆ ಎಷ್ಟು ಶುಲ್ಕ ಇತ್ತು, ಈಗ ಎಷ್ಟು ಹೆಚ್ಚು ಮಾಡಿದ್ದಾರೆ ಇದೆಲ್ಲವನ್ನೂ ಕೂಡ ಕೇಳತಕ್ಕಂತಹ ಒಂದು ತಾಯಿ ಮನಸ್ಸಿನ ವ್ಯಕ್ತಿಯಾಗಿದ್ದರು ಅವರು. ಹಾಗಾಗಿ, ಮಾನ್ಯ ಎ.ಹೆಚ್. ವಿಶ್ವನಾಥ್‌ರವರು ಹೇಳಿದ ಹಾಗೆ, ಕರ್ನಾಟಕ ರಾಜ್ಯದಲ್ಲಿ ಬಿಸಿಯೂಟ ಯೋಜನೆ ಏನಿದೆ, ಅಕಸ್ಮಾತ್ ಆ ಯೋಜನೆಯನ್ನು ಜಾರಿಗೆ ತರದೇ ಇದ್ದಿದ್ದರೆ, ಅವೊತ್ತಿನ ದಿವಸ ಕೂಲಿ ಕಾರ್ಮಿಕರ ಮಕ್ಕಳು ಮಧ್ಯಾಹ್ನದ ಊಟದ ಕಾರಣದಿಂದಾಗಿ ಶಾಲೆಯಿಂದ ಹೊರಗೆ ಉಳಿಯಬೇಕಾದಂತಹ ಪರಿಸ್ಥಿತಿ ಇತ್ತು. ಇದನ್ನು ಹೋಗಲಾಡಿಸಿದಂತಹವರು ಯಾರು ಎಂದರೆ, ಶ್ರೀ ಎಸ್.ಎಂ. ಕೃಷ್ಣರವರು. ಆ ಬಿಸಿಯೂಟದ ಯೋಜನೆ ಈಗಲೂ ಕೂಡ ಮುಂದುವರೆಯುತ್ತಿದೆ. ಅಂದರೆ, ಆ ಯೋಜನೆಯ ಅವಶ್ಯಕತೆ ಇದೆ. ಅದನ್ನು ಯಾರಿಂದಲೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ಸಹ ಮನವರಿಕೆಯಾಗುತ್ತಿತ್ತು. ಅಂದರೆ, ಅವರ ಯಾವುದೇ ನಿರ್ಧಾರಗಳು ಭಾವನಾತ್ಮಕವಾಗಿ ತೆಗೆದುಕೊಳ್ಳತಕ್ಕಂತಹ ನಿರ್ಧಾರಗಳು ಆಗಿರಲಿಲ್ಲ. ಸಮಚಿತ್ತದಿಂದ

ಕೂಡಿರತಕ್ಕಂತಹ ಬಹಳ ವಿಚಾರಶೀಲರಾಗಿ ಪ್ರತಿಯೊಂದು ವಿಷಯದ ಆಳ, ಅಗಲ; ಹೊರಗೆ, ಒಳಗೆ ಇದೆಲ್ಲವನ್ನೂ ಯೋಚನೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತಿದ್ದಂತಹ ಒಬ್ಬ ಮುತ್ಸದ್ಧಿ ರಾಜಕಾರಣಿ ಅವರು ಆಗಿದ್ದರು.

ಇನ್ನೊಂದು ವಿಚಾರವೇನೆಂದರೆ, ಡಾ: ರಾಜ್‌ಕುಮಾರ್‌ರವರು ಅಪಹರಣ ಆದಂತಹ ಸಂದರ್ಭದಲ್ಲಿ ದಿನಪತ್ರಿಕೆಯಲ್ಲಿ ಬಹಳಷ್ಟು ವರದಿಯಾಗುತ್ತಿತ್ತು. ಆಗ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಆ ಗುದ್ದಾಟ. ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಗುದ್ದಾಟ; ಡಾ: ರಾಜಕುಮಾರ್‌ರವರ ಅಪಹರಣ; ಕಾವೇರಿ ಹೋರಾಟ ಈ ಎಲ್ಲಾ ಸಮಸ್ಯೆಗಳು ಬಹಳ ಪೀಕ್‌ನಲ್ಲಿರುತ್ತಿತ್ತು. ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದ ಬರಗಾಲ ಇತ್ತು. ಆಗ ಶ್ರೀಯುತರು ಕೊಡುತ್ತಿದ್ದಂತಹ ಹೇಳಿಕೆಗಳು ಯಾವತ್ತೂ ಕೂಡ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿಗೆ ಜಗಳ ಹಚ್ಚುತ್ತಿದ್ದಂತಹ ಹೇಳಿಕೆಗಳು ಆಗಿರಲಿಲ್ಲ. ಆಗ ಅವರ ಹೇಳಿಕೆಗಳು ಬಹಳ balanced ಆಗಿರುತ್ತಿತ್ತು ಮತ್ತು ಸಮಚಿತ್ತದಿಂದ ಕೂಡಿರುತ್ತಿತ್ತು ಮತ್ತು ಮುಂದಿನ ದೂರದೃಷ್ಟಿಯಿಂದ ಯೋಚನೆ ಮಾಡಿರತಕ್ಕಂತಹ ಹೇಳಿಕೆಗಳಾಗಿರುತ್ತಿತ್ತು. ಆಗಿನ ಕಾಲದ ಅವರ ಹೇಳಿಕೆಗಳಲ್ಲಿ ಅಕಸ್ಮಾತ್ ಏನಾದರೂ ಲೋಪಗಳಾಗಿದ್ದರೆ ದೊಡ್ಡ ಗಲಾಟೆಗಳಾಗಿಬಿಡುತ್ತಿತ್ತು. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಅವರು ತಮ್ಮ ಹೇಳಿಕೆಗಳನ್ನು ನೀಡುತ್ತಿದ್ದರು.

ಇನ್ನು ಬರಗಾಲದ ಸಂದರ್ಭದಲ್ಲಿ ಬಹುಶಃ ನನಗನ್ನಿಸುವುದೇನೆಂದರೆ, ಅತೀ ಹೆಚ್ಚು ಕುಡಿಯುವ ನೀರಿನ ಸಮಸ್ಯೆ ನಿರ್ಮಾಣ ಆಗಿದ್ದು ಆ ಕಾಲದಲ್ಲಿಯೇ. ಆ ಸಮಸ್ಯೆಯನ್ನು ಬಹಳ ಚೆನ್ನಾಗಿ ನಿರ್ವಹಣೆ ಮಾಡಿದವರು ಯಾರು ಎಂದರೆ, ಶ್ರೀ ಎಸ್.ಎಂ. ಕೃಷ್ಣರವರು. ಶ್ರೀಯುತರು ಓದಿ ಬಂದಂತಹ ಶಾಲೆ ಮೈಸೂರಿನ ರಾಮಕೃಷ್ಣ ಆಶ್ರಮದ ಶಾಲೆಯಿಂದ ವಿದ್ಯಾವಂತರಾಗಿ ಏನು ಬಂದಿದ್ದರು, ಈ ರೀತಿ ಕರ್ನಾಟಕ ರಾಜ್ಯದಲ್ಲಿ ಶಾಲೆಗಳ ಗುಣಮಟ್ಟ ಕೂಡ ಅವರ ಕಾಲದಲ್ಲಿ ಸ್ವಲ್ಪ ಹೆಚ್ಚಾಯಿತು. ಅದೇ ರೀತಿಯಾಗಿ ಬೆಂಗಳೂರನ್ನು ಕ್ಲೀನ್ ಸಿಟಿ, ಗ್ರೀನ್ ಸಿಟಿ, ಐಟಿ-ಬಿಟಿ ಸಿಟಿಯನ್ನಾಗಿ ನಿರ್ಮಾಣ ಮಾಡಲು ಇದಕ್ಕೊಂದು ಪಾಲಿಸಿಯನ್ನು ಬಹಳ ಚೆನ್ನಾಗಿ ಮಾಡಿದವರು ಯಾರು ಎಂದರೆ,

ಶ್ರೀ ಎಸ್.ಎಂ. ಕೃಷ್ಣರವರು. ಹೀಗೆ ಅವರದ್ದು ಸಮಗ್ರ ವ್ಯಕ್ತಿತ್ವದಿಂದ ಕೂಡಿರತಕ್ಕಂತಹ, ಸಮಾಜವನ್ನು ಚೆನ್ನಾಗಿ ಅರ್ಥಮಾಡಿಕೊಂಡಿರತಕ್ಕಂತಹ ಅರ್ಥಪೂರ್ಣವಾಗಿರತಕ್ಕಂತಹ ವ್ಯಕ್ತಿತ್ವ; a great personality. ನಮ್ಮ ಶ್ರೀ ಎಸ್.ಎಂ. ಕೃಷ್ಣ ಇವೊತ್ತಿನ ದಿವಸ ನಮ್ಮ ಮಧ್ಯದಲ್ಲಿಲ್ಲ. ಆ ಒಂದು ಇಲ್ಲದ ಪರಿಸ್ಥಿತಿಯಲ್ಲಿ ಅವರ ಕುಟುಂಬಕ್ಕೆ ಆಗಿರುವಂತಹ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಆ ಭಗವಂತನು ಕರುಣಿಸಲಿ ಎಂದು ಹೇಳುತ್ತಾ, ತಾವು ಮಂಡಿಸಿರುವಂತಹ ಈ ಒಂದು ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಧನ್ಯವಾದಗಳು.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಶ್ರೀ ಎಸ್.ಎಂ. ಕೃಷ್ಣರವರನ್ನು ನಾನು ಬಹಳ ಹತ್ತಿರದಿಂದ ನೋಡಿರುತ್ತೇನೆ. ಏಕೆಂದರೆ, ಸದಾಶಿವನಗರದಲ್ಲಿರುವ ನನ್ನ ಮನೆ ಮತ್ತು ಶ್ರೀ ಎಸ್.ಎಂ. ಕೃಷ್ಣರವರ ಹಿಂದಿನ ಮನೆ; ಅಂದರೆ, ಈಗ ಅದು ಅವರ ಮಗಳ ಮನೆ ಒಂದೇ ಅಕ್ಕಪಕ್ಕದ ಕಾಂಪೌಂಡ್‌ನಲ್ಲಿದೆ. ಹಾಗಾಗಿ, ಅವರ ಕುಟುಂಬದ ಜೊತೆ, ನಮ್ಮ ಕುಟುಂಬದ ಜೊತೆ ವೈಯಕ್ತಿಕವಾದ ಸಂಬಂಧವಾಗಿದೆ. ಅವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ನಾನು ಸಹ ವಿಧಾನಸಭೆಗೆ ಸ್ಪರ್ಧೆ ಮಾಡಬೇಕೆಂದು ಒಬ್ಬ ಆಕಾಂಕ್ಷಿಯಾಗಿದ್ದೆನು. ನಂತರದ ದಿನಗಳಲ್ಲಿ ಅವರು ಮುಖ್ಯಮಂತ್ರಿಯಾದಾಗ ಅವರನ್ನು ಭೇಟಿ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ, ನನ್ನ ಒಬ್ಬ ಸ್ನೇಹಿತರಾದ ಶ್ರೀ ಎನ್. ರಮೇಶ್‌ರವರನ್ನು ಶಿವಮೊಗ್ಗ ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಅವರಲ್ಲಿ ಮನವಿ ಮಾಡಿಕೊಂಡೆನು. ಆಗ ಅವರು ನನ್ನನ್ನು ಒಮ್ಮೆ ಮೇಲಿಂದ ಕೆಳಗಡೆ ತನಕ ನೋಡಿ, "ಮಂಜುನಾಥ್, ನಾನು ತಮ್ಮನ್ನು ಯಾವುದಾದಾರೂ ಒಂದು ಬೋರ್ಡ್‌ಗೆ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಇದ್ದೇನೆ. ಆದರೆ, ತಾವು ನೋಡಿದರೆ ಬೇರೆಯವರ ಹೆಸರು ಕೊಡುತ್ತಿರುವೆ" ಎಂದು ಹೇಳಿದರು. ಅದಕ್ಕೆ ನಾನು, "ಇಲ್ಲ ಸರ್, ಈತ ವಿದ್ಯಾರ್ಥಿ ನಾಯಕನಾಗಿ, ಯುವ ನಾಯಕನಾಗಿ ಬಂದಂತಹವನು. ಹಾಗಾಗಿ, ಇವನನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಕೇಳಿಕೊಂಡೆನು. ಅದಕ್ಕೆ ಅವರು ಆಯಿತು ಎಂದು ಒಪ್ಪಿಗೆಯನ್ನು ನೀಡಿದರು. ಆದರೆ, ಅಂದಿನ ನಗರಾಭಿವೃದ್ಧಿ ಸಚಿವರಾದಂತಹ

ಶ್ರೀ ಡಿ.ಕೆ. ಶಿವಕುಮಾರ್‌ರವರು ಹಾಗೂ ನಮ್ಮ ಜಿಲ್ಲಾ ನಾಯಕರುಗಳು ಬೇರೆ ಬೇರೆ ಹೆಸರನ್ನು ಕೊಟ್ಟು, ನಾನು ಒಬ್ಬ ಕಾಂಗ್ರೆಸ್ ಪಕ್ಷದ ನಾಯಕ ಎನ್ನುವುದನ್ನು ಪರಿಗಣಿಸಿ ನಾನು ಕೊಟ್ಟಂತಹ ಹೆಸರನ್ನು ಅವರು ಅಂತಿಮಗೊಳಿಸುತ್ತಾರೆ. ತದನಂತರ, ಅವರು ಬಜೆಟ್ ಅನ್ನು ಮಂಡನೆ ಮಾಡುವುದಕ್ಕೆ ಮೊದಲು ನಾನು ಅವರಿಗೆ ಎರಡು ಸಲಹೆಗಳನ್ನು ನೀಡಿರುತ್ತೇನೆ. ಮೊದಲನೆಯದಾಗಿ, ಸುಮಾರು 10 ಲಕ್ಷ ಜನ ಯಾರು ಬಡತನ ರೇಖೆಗಿಂತ ಕೆಳಗೆ ಇದ್ದಾರೆ, ಅವರಿಗೆ ಉಚಿತ ಅಡುಗೆ ಅನಿಲ ಸಂಪರ್ಕ ನೀಡಬೇಕೆಂದು ಹಾಗೂ ಯಾರು ನಿರ್ಗತಿಕರು ಮರಣ ಹೊಂದುತ್ತಾರೆ, ಅವರ ಶವಸಂಸ್ಕಾರಕ್ಕೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 5,000 ರೂಪಾಯಿಗಳನ್ನು ಕೊಡಬೇಕೆಂದು ಸಲಹೆ ನೀಡಿರುತ್ತೇನೆ. ಅವರು ನನ್ನ ಎರಡು ಸಲಹೆಗಳನ್ನು ಅಂಗೀಕರಿಸಿ, ಕ್ಯಾಬಿನೆಟ್ ಮೀಟಿಂಗ್‌ನಿಂದ ಹೊರಗಡೆ ಬಂದ ತಕ್ಷಣವೇ ಫೋನ್ ಮಾಡಿ, "ಮಂಜುನಾಥ್‌ರವರೇ, ತಾವು ಕೊಟ್ಟಂತಹ ಎರಡೂ ಸಲಹೆಗಳನ್ನು ಅಂಗೀಕರಿಸಿದ್ದು, ಅದನ್ನು ಕಾನೂನು ರೂಪವಾಗಿ ತರುತ್ತೇವೆಂದು" ಹೇಳುತ್ತಾರೆ.

ಇನ್ನೊಂದು ವಿಚಾರವೇನೆಂದರೆ, ನನ್ನ ಮಗಳಾದ ಕು: ದೀಕ್ಷಾ ಒಮ್ಮೆ ಚೈನಾ ದೇಶದ ಒಂದು ಎಕ್ಸ್‌ಚೇಂಜ್ ಪ್ರೋಗ್ರಾಮ್‌ಗೆ ಹೋಗಿದ್ದಂತಹ ಸಂದರ್ಭದಲ್ಲಿ, ಅವಳು ಹೆಚ್1ಎನ್1 ಸೋಂಕಿಗೆ ಒಳಗಾಗುತ್ತಾಳೆ. ಆ ಸಂದರ್ಭದಲ್ಲಿ ಶ್ರೀ ಎಸ್.ಎಂ. ಕೃಷ್ಣರವರು ವಿದೇಶಾಂಗ ಸಚಿವರಾಗಿದ್ದರು. ಈ ವಿಷಯ ಅವರಿಗೆ ತಿಳಿದ ಕೂಡಲೇ, ಚೈನಾದ consulate ಗೆ ಒಂದು ಮೆಸೇಜ್ ಹೋಗುತ್ತದೆ. ಅದೇನೆಂದರೆ, "External Affairs Minister ರವರ ಮೊಮ್ಮಗಳಿಗೆ ಹುಷಾರಿಲ್ಲ" ಎಂದು ಒಂದು ಮೆಸೇಜ್ ಹೋಗುತ್ತದೆ. ಆಗ ಚೈನಾ ಸರ್ಕಾರ ನಮ್ಮ ಮಗಳ ಆರೋಗ್ಯದ ಬಗ್ಗೆ ಸಾಕಷ್ಟು ಕಾಳಜಿ ವಹಿಸಿರುತ್ತದೆ. ಜೊತೆಗೆ, ನಮ್ಮ ಕೇಂದ್ರ ಸರ್ಕಾರ ನಮ್ಮ ಮಗಳ ಸಂಪೂರ್ಣ ಚಿಕಿತ್ಸಾ ವೆಚ್ಚ ಮತ್ತು ಸರ್ಕಾರದಿಂದ ಸಿಗಬಹುದಾದಂತಹ ಎಲ್ಲಾ ಸವಲತ್ತುಗಳು ನಮಗೆ ಸಿಗುವಂತೆ ಶ್ರೀ ಎಸ್.ಎಂ. ಕೃಷ್ಣರವರು ನಮಗೆ ಮಾಡಿಸಿರುತ್ತಾರೆ. ಅದೇ ರೀತಿ, ನಮ್ಮ ಮಗಳಿಗೆ London School of Economics (L.S.E.) ನಲ್ಲಿ ಸೀಟ್ ಸಿಕ್ಕ ಸಂದರ್ಭದಲ್ಲಿ ಅವರೇ ಸ್ವತಃ ನನಗೆ ಫೋನ್ ಮಾಡಿ, "Manjunath, I am congratulating. I heard your daughter is studying at

L.S.E.; she got the seat. So, I want to bless her. Let her come to my house" ಎನ್ನುವಂತಹ ಮಾತನ್ನು ಶ್ರೀ ಎಸ್.ಎಂ. ಕೃಷ್ಣರವರು ಅಂದು ಹೇಳಿರುತ್ತಾರೆ.

ಅದೇ ರೀತಿ, ಶ್ರೀ ಎಸ್.ಎಂ. ಕೃಷ್ಣರವರು ಗವರ್ನರ್ ಆದಂತಹ ಸಂದರ್ಭದಲ್ಲಿ ನಮ್ಮನ್ನು ಮುಂಬೈಗೆ ಕರೆಯಿಸುತ್ತಾರೆ. ಆಗ ನಾನು ಅವರಿಗೆ, "ಸರ್, ತಾವು ನಮ್ಮ ಮಂಗಳೂರು ಜಿಲ್ಲೆಗೆ ಭೇಟಿ ನೀಡಬೇಕು. ನಾನು ನಮ್ಮ ಕಾಲೇಜಿನಲ್ಲಿ HIV Aids Conference ಏರ್ಪಡಿಸಿದ್ದೇನೆಂದು ಕೇಳಿಕೊಳ್ಳುತ್ತೇನೆ. ಆಗ ಅವರು ಗವರ್ನರ್ ಆಗಿ ನಮ್ಮ ಮಂಗಳೂರು ಜಿಲ್ಲೆಯ ನಮ್ಮ ಕಾಲೇಜಿಗೆ ಬಂದು ಆ ಕಾನ್ಫರೆನ್ಸ್‌ನಲ್ಲಿ ಭಾಗಿಯಾಗಿರುತ್ತಾರೆ. 2014ರ ಪಾರ್ಲಿಮೆಂಟ್ ಚುನಾವಣೆಗೆ ನಿಂತಂತಹ ಸಂದರ್ಭದಲ್ಲಿ ಅವರ ಅಳಿಯ ಸಿದ್ದಾರ್ಥ ಮುಖಾಂತರ, "ನಾನು ಬಂದು ಅವರನ್ನು ಭೇಟಿ ಮಾಡಬೇಕೆಂದು" ನನಗೆ ಹೇಳಿ ಕಳುಹಿಸುತ್ತಾರೆ. ಅದರಂತೆ, ನಾನು ಅವರ ಬಳಿ ಹೋದಾಗ, "Manju, why you have selected Shivamogga seat? I heard you are contesting against B.S. Yediyurappa and Geeta Shivarajkumar. I don't know why you have selected" ಎಂದು ಹೇಳುತ್ತಾರೆ. ಆಗ ನಾನು, "This is the word from High Command. So, I am contesting" ಎಂದು ಹೇಳುತ್ತೇನೆ. ಆಗ ಅವರು, "Anyway, I wish you all the best" ಎಂದು ಹೇಳುತ್ತಾರೆ.

(ಮುಂದು)

(743) 10.12.2024 1.00 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಂಜುನಾಥ ಭಂಡಾರಿ (ಮುಂದು):**

ನಾನು ಅವರನ್ನು ಕರೆಯದೇ ಇದ್ದರೂ ಚುನಾವಣಾ ಸಮಯದಲ್ಲಿ ತೀರ್ಥಹಳ್ಳಿಗೆ ಬಂದು ಚುನಾವನಾ ಭಾಷಣ ಮಾಡುವ ಸಂದರ್ಭದಲ್ಲಿ "ನಾನು ಕಂಡಿರುವ ಅತ್ಯಂತ ಯುವ ನಾಯಕರಲ್ಲಿ ಮಂಜುನಾಥ ಭಂಡಾರಿ ಸಹ ಆಗಿದ್ದು, ಅವರಿಗೆ ಸಂಪೂರ್ಣ ಸಹಕಾರ ಕೊಡಬೇಕು" ಎನ್ನುವಂಥ ಮಾತನ್ನು ಹೇಳುತ್ತಾರೆ. ಅವರ ಬಗ್ಗೆ ಇಂತಹ ಹಲವಾರು ವಿಷಯಗಳನ್ನು ನಾನು ಹೇಳಬಲ್ಲೆ. ಏಕೆಂದರೆ, ಅವರು

ಮಂಗಳೂರು, ಶಿವಮೊಗ್ಗಕ್ಕೆ ಮುಖ್ಯಮಂತ್ರಿಯಾಗಿ ಬಂದಾಗ ಇರಬಹುದು ಅಥವಾ ಯಾವಾಗಲೇ ಬಂದರೂ ಅವರ ನನ್ನ ಕಾರಿನಲ್ಲಿಯೇ ಬರುತ್ತಿದ್ದು, ನಾನು ಕಾರನ್ನು ಓಡಿಸುತ್ತಿದ್ದೆನು. ಹಾಗಾಗಿ, ಅವರನ್ನು ಒಬ್ಬ ರಾಜಕಾರಣಿ ಎಂದು ಹೇಳಬೇಕೇ ಅಥವಾ parliamentary ಎಂದು ಹೇಳಬೇಕೇ ಅಥವಾ ಈಗಾಗಲೇ ಮಾನ್ಯ ಹೆಚ್.ಎಂ.ವಿಶ್ವನಾಥ್‌ರವರು ಹೇಳಿದ ಹಾಗೆ ಒಬ್ಬ ಸಾಂಸ್ಕೃತಿಕ ನಾಯಕ ಎಂದು ಹೇಳಬೇಕೇ, ಯಾವುದೇ ಹೇಳಿದರೂ ತಪ್ಪಾಗಲಾರದು. ಅತ್ಯಂತ ಮಾನ್ಯತೆಯುಳ್ಳವರಾಗಿದ್ದರು. ಇದೆಲ್ಲವೂ ನನ್ನ ಅನುಭವದ ಮಾತಾಗಿದೆ. ಏಕೆಂದರೆ, ಕೆಲವು ಸದಸ್ಯರು ಬೇರೆ ಬೇರೆ ವಿಚಾರಗಳನ್ನು ಹಂಚಿಕೊಂಡಿದ್ದು, ನಾನು ನನ್ನ ವೈಯಕ್ತಿಕ ಅನುಭವವನ್ನು ಹಂಚಿಕೊಳ್ಳುತ್ತಾ, ಅವರಿಗೆ ನುಡಿ-ನಮನಗಳನ್ನು ಸಲ್ಲಿಸುವುದರೊಂದಿಗೆ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹಾರೈಸುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸಬಯಸುತ್ತೇನೆ.

**ಶ್ರೀಮತಿ ಉಮಾಶ್ರೀ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ತಾವು ತಂದಿರುವಂಥ ಪದ್ಮವಿಭೂಷಣ ಪುರಸ್ಕೃತ ರಾಜ್ಯದ ಮಾಜಿ ಮುಖ್ಯಮಂತ್ರಿಯಾಗಿರುವ ದಿವಂಗತ ಮಾನ್ಯ ಎಸ್.ಎಂ.ಕೃಷ್ಣರವರ ಸಂತಾಪ ಸೂಚನೆಗೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ದಿವಂಗತ ಮಾನ್ಯ ಎಸ್.ಎಂ.ಕೃಷ್ಣರವರು ಬಹಳ ದೊಡ್ಡ ರೀತಿಯಲ್ಲಿ ರಾಜಕಾರಣ ಮಾಡಿದ್ದಾರೆ. ಇವರು ಮದ್ದೂರು ಎಂಬ ಒಂದು ಸಣ್ಣ ಊರಿನಲ್ಲಿ ಹುಟ್ಟಿದ್ದು, ವಿದ್ಯೆಯಲ್ಲಿ ಬಹಳ ದೊಡ್ಡದಾಗಿ ಬೆಳೆದಂಥವರಾಗಿದ್ದಾರೆ. ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರವಾಗಿ ನಿಂತು, ತದನಂತರ ಎಂ.ಎಲ್.ಎ., ಎಂ.ಎಲ್.ಸಿ., ಎಂ.ಪಿ., ರಾಜ್ಯಸಭಾ ಸದಸ್ಯರಾಗಿ, ಮಹಾರಾಷ್ಟ್ರದ ರಾಜ್ಯಪಾಲರಾಗಿ, ಮೊದಲ ಉಪ ಮುಖ್ಯಮಂತ್ರಿಯಾಗಿ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಈ ರಾಜ್ಯಕ್ಕೆ ಹಾಗೂ ದೇಶಕ್ಕೆ ತಮ್ಮದೇ ಆದ ಕೊಡುಗೆಗಳನ್ನು ಕೊಟ್ಟಿದ್ದಾರೆ. ಇವೆಲ್ಲದರ ಮಧ್ಯೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗುತ್ತಾರೆ. ಆ ಸಂದರ್ಭದಲ್ಲಿ ಬಹಳ ಹತ್ತಿರದಿಂದ ಅವರೊಡನೆ ಒಡನಾಟವನ್ನಿಟ್ಟುಕೊಂಡಿದ್ದೆನು. ಏಕೆಂದರೆ, ನಾನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತೆಯಾಗಿ ಆ ಕಾಲದಲ್ಲಿಯೇ ನಾನು ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆನು. ನಾನು ಒಬ್ಬಳು ಸಿನಿಮಾ ನಟಿ ಎಂದು ನೋಡದೇ ಒಬ್ಬ ಕಾರ್ಯಕರ್ತಳಾಗಿ ಗುರುತಿಸಿ, ನನ್ನಲ್ಲಿ ಸಹ ಒಂದು ಸಂಘಟನಾ ಶಕ್ತಿ ಇದೆ ಎಂಬುದನ್ನು ಮನಗಂಡು

ಬಹಳಷ್ಟು ಕೆಲಸಗಳಲ್ಲಿ ಸೇರ್ಪಡೆಗೊಳಿಸುತ್ತಿದ್ದರು. ದಿವಂಗತ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ರಾಜ್ಯಕ್ಕೆ ಕೊಟ್ಟಿರುವಂಥ ಕೊಡುಗೆಗಳ ಬಗ್ಗೆ ಬಹಳಷ್ಟು ಸದಸ್ಯರು ಉಲ್ಲೇಖ ಮಾಡಿದ್ದಾರೆ. "ಸ್ತ್ರೀ ಶಕ್ತಿ ಸಂಘ ನಿರ್ಮಾಣ" ಮಾಡುವುದರ ಮೂಲಕ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬುವಂಥ ವಿಚಾರ ಇರಬಹುದು ಮತ್ತು ಪಕ್ಷದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮಹಿಳೆಯರಿಗೆ ಶೇಕಡ 30 ರಷ್ಟು ವಿನಾಯಿತಿ ಕೊಡುವುದರ ಮೂಲಕ ಮಹಿಳೆಯರು ಮುಂದುವರೆಯಲು ಅವಕಾಶ ಕಲ್ಪಿಸುವುವಂಥದ್ದಾಗಿರಬಹುದು. ಈ ರೀತಿ ಮಹಿಳೆಯರ ಪ್ರತಿಭೆಗಳಗೆ ಅವಕಾಶ ನೀಡುವಂಥ ಕೆಲಸ ಮಾಡಿದ್ದಾರೆ. "ಮರಳಿ ಬಾ ಶಾಲೆಗೆ" ಎನ್ನುವಂಥ ಘೋಷ ವ್ಯಾಕ್ಯದೊಂದಿಗೆ ಶಿಕ್ಷಣದ ಬಗ್ಗೆ ಬಹಳ ಒಲವು ಹೊಂದಿದ್ದರು. ಹೇಳಿ, ಕೇಳಿ ಮೊದಲೇ ಅವರು ಉಪನ್ಯಾಸಕರಾಗಿ, ಕಾನೂನು ಪಂಡಿತರಾಗಿ ಕೆಲಸ ಮಾಡಿದ್ದು, ಬಹುಶಃ ಅವರ ಕೈಯಲ್ಲಿ ಪಾಠ ಕಲಿತ ಮಕ್ಕಳು ಬಹಳ ಪುಣ್ಯವಂಥರು ಎಂದು ಭಾವಿಸುತ್ತೇನೆ.

ಹಾಗೆಯೇ ಅವರ ಕೈ ಕೆಳಗೆ ಕೆಲಸ ಮಾಡಿದಂಥ ನಾವು ಸಹ ಪುಣ್ಯವಂಥರು ಎಂದು ಹೇಳಬಯಸುತ್ತೇನೆ. ಏಕೆಂದರೆ, ನಮ್ಮಲ್ಲಿರುವ ಪ್ರತಿಭೆಗಳನ್ನು ಗುರುತಿಸಿ ಅವಕಾಶ ಕಲ್ಪಿಸುವುದರಲ್ಲಿ ಸಿದ್ಧಹಸ್ತರು. ಅವರ ಅವಧಿಯಲ್ಲಿಯೇ ನಾನು ಸಹ ಎಂ.ಎಲ್.ಸಿ. ಆಗಿ ನಾಮಿನೇಟ್ ಆಗಿದ್ದು. ಈ ಸದನದಲ್ಲಿ ಮೊದಲ ಬಾರಿಗೆ ಎಂ.ಎಲ್.ಸಿ. ಆದ ಸಂದರ್ಭದಲ್ಲಿ ನನ್ನನ್ನು ನಾಮಿನೇಟ್ ಮಾಡಿದ್ದರು. ಯಾವುದೇ ಜಾತಿಯನ್ನು ನೋಡದೇ ಜಾತಿ ರಹಿತ, ಧರ್ಮ ರಹಿತ ರಾಜಕಾರಣಿಯಾಗಿ ರಾಜಕರಣ ಮಾಡಿದ್ದರು. ಬಹಳ ವಿಶಾಲವಾದ ಮನೋಭಾವವುಳ್ಳವರಾಗಿದ್ದರು. ಏಕೆಂದರೆ, ನನ್ನನ್ನು ಎಂ.ಎಲ್.ಸಿ. ಮಾಡುವ ಸಂದರ್ಭದಲ್ಲಿ ಸ್ವಂತ ಸಮಾಜದ ಒಬ್ಬ ನಟನನ್ನು ನಾಮಿನೇಟ್ ಮಾಡಬೇಕೆಂದು ಒತ್ತಾಯ ಬಂದಾಗ ಅದನ್ನು ಪಕ್ಕಕ್ಕೆ ಸರಿಸಿ ಸಣ್ಣ ಸಮುದಾಯಕ್ಕೆ ಅವಕಾಶ ಮಾಡಿಕೊಟ್ಟಂತಹ ವಿಶಾಲ ಮನೋಭಾವ ಅವರಲ್ಲಿ ಇತ್ತು ಹಾಗೂ ಬದ್ಧತೆಯಿಂದ ನಡೆದುಕೊಳ್ಳುತ್ತಿದ್ದರು. ಬೆಂಗಳೂರಿನಲ್ಲಿರುವಂಥ ಐಟಿ, ಬಿಟಿ ಕಂಪನಿಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಟ್ಟಿದ್ದಾರೆ. ವಿಶ್ವ ಭೂಪಟದಲ್ಲಿ ಬೆಂಗಳೂರು ಎಂಬುದನ್ನು ವಿಶ್ವಮಟ್ಟಕ್ಕೆ ತೋರಿಸಿಕೊಟ್ಟವರಾಗಿದ್ದಾರೆ. ಬೇರೆ ರಾಷ್ಟ್ರಗಳಲ್ಲಿ ಬೆಂಗಳೂರು ಎಂದಾಕ್ಷಣ ಒಂದು ವಿಶೇಷವಾದ ಮಾನ್ಯತೆ, ಆದ್ಯತೆ, ಘನತೆ ಎಲ್ಲವನ್ನೂ ತಂದುಕೊಟ್ಟಿದ್ದಾರೆ. 2001ನೇ

ಸಾಲಿನಿಂದ 2004ನೇ ಸಾಲಿನವರೆಗೂ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಬೆಂಗಳೂರನ್ನು ಸಿಂಗಾಪುರ ಮಾಡುತ್ತಾರಂತೆ ಎಂದು ಆಡಿಕೊಳ್ಳುತ್ತಿದ್ದ ಜನ ಇವತ್ತು ಏನೆಂದು ಹೇಳಬಹುದೆಂದು ನೋಡಿ. ಇವತ್ತು ಸರ್ಜಾಪುರದಿಂದ ಕೃಷ್ಣರಾಜಪುರಕ್ಕೆ ಹೋಗುವ ರಸ್ತೆ ನೋಡಿದರೆ ಸಿಂಗಾಪುರ ರೀತಿಯೇ ಕಾಣುತ್ತದೆ. ಹಾಗೆಯೇ ಮೇಕ್ರಿ ಸರ್ಕಲ್‌ನಿಂದ ಏರ್‌ಪೋರ್ಟ್‌ಗೆ ಹೋಗುವ ರಸ್ತೆಯನ್ನು ನೋಡಿದಾಗ ಸಾಕಷ್ಟು ಮಲ್ಟಿನ್ಯಾಷನಲ್ ಕಂಪನಿಗಳು ಇದೆ. ನಮ್ಮ ರಾಜ್ಯಕ್ಕೆ ಮಲ್ಟಿನ್ಯಾಷನಲ್ ಕಂಪನಿಗಳು ಬಂದಿದ್ದು, ಆರ್ಥಿಕವಾಗಿ ಸದೃಢವಾಗುವುದರೊಂದಿಗೆ ಕಾಂಪ್ಲೆಕ್ಸ್‌ಗಳಿದ್ದು ಅದು ಸಹ ಬಹಳ ವಿಶೇಷವಾದ ಕೊಡುಗೆಯಾಗಿದೆ. ಹಾಗೆಯೇ ಜೀವನ ಶೈಲಿ, quality of life ಬಗ್ಗೆ ಹೇಳುವುದಾದರೆ, ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಇಲ್ಲಿ ಭಾಷಣ ಮಾಡಿದ್ದರು. ಅದೇನೆಂದರೆ, ಬಹಳ ಗುಣಾತ್ಮಕವಾದ ಜೀವನ ಬಡವರಿಗೆ ಸಿಗಬೇಕೆನ್ನುವಂಥ ವಿಚಾರದಲ್ಲಿ ಬಹಳ ಬದ್ಧರಾಗಿ ಕೆಲಸ ಮಾಡಿದ್ದರು ಮತ್ತು ಕಲಾವಿಧರನ್ನು ಗೌರವಿಸುವುದು cultural mind. ಮೂಲಭೂತವಾಗಿ ಮ್ಯೂಸಿಕ್, ನಾಟಕ ಇತ್ಯಾದಿಯಲ್ಲಿ ಬಹಳ ಆಸಕ್ತಿಯುಳ್ಳ ವ್ಯಕ್ತಿಯಾಗಿದ್ದರು. ಹಾಗಾಗಿ, ಅಂತಹ ಪ್ರಗತಿಪರ ಚಿಂತಕರಾಗಿ ಅದೆಲ್ಲವೂ ಇದ್ದರೂ ಸಹ ಯಾವುದೇ ಒತ್ತಡಕ್ಕೆ ಒಳಗಾಗದೇ ರಾಜಕೀಯ ಕ್ಷೇತ್ರದಲ್ಲಿ ರಾಜಕಾರಣ ಮಾಡಿದ್ದರು. ಯಾವುದೇ ಸಂಘರ್ಷಕ್ಕೆ ಒಳಗಾಗುತ್ತಿರಲಿಲ್ಲ.

ಬಹುಶಃ ಈ ರಾಜಕಾರಣದಲ್ಲಿ ಯಾವುದಾದರೂ ಅವಕಾಶ ಬೇಕಾದರೆ ಸಂಘರ್ಷವನ್ನು ಮಾಡುತ್ತೇವೆ. ಯಾವುದೋ ಒಂದು ಸಂದರ್ಭದಲ್ಲಾದರೂ ಮನಸ್ಸಿಗೆ ನೋವು ಮಾಡಿಕೊಳ್ಳುತ್ತೇವೆ. ಆದರೆ, ದಿವಂಗತ ಶ್ರೀ ಎಸ್.ಎಂ.ಕೃಷ್ಣರವರು ಆ ರೀತಿ ಮನಸ್ಸಿಗೆ ಎಂದಿಗೂ ಸಹ ನೋವು ಮಾಡಿಕೊಳ್ಳದೇ ಬಹಳ ಪ್ರಬುದ್ಧರಾಗಿ ರಾಜಕಾರಣ ಮಾಡಿದ್ದರು. ಈ ದೇಶದ ಪ್ರಧಾನ ಮಂತ್ರಿ, ರಾಷ್ಟ್ರಪತಿಯಾಗುವುದಕ್ಕೂ ಕೂಡಾ ಅರ್ಹರಾಗಿದಂಥವರು 'ನಮ್ಮ ಕನ್ನಡಿಗ, ಕನ್ನಡದ ಮಗ' ಎನ್ನುವಂಥ ಮಾತನ್ನು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಹಾಗೆಯೇ ಈ ಸಂತಾಪ ಸೂಚನೆ ಮಂಡನೆಯಲ್ಲಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು ಎಂಬುದು ನಮೂದಾಗಿಲ್ಲ. ಅವರು ಏನೇಲ್ಲಾ ಪದವಿ ಹೊಂದಿದ್ದಾರೆ, ಅದು ಕಾಂಗ್ರೆಸ್ ಪಕ್ಷದಿಂದಲೇ ಆಗಿರುವಂಥದು. ಇತ್ತೀಚಿನ

ವರ್ಷಗಳಲ್ಲಿ ರಾಜಕಾರಣದ ಸ್ಥಿತ್ಯಾಂತರದಲ್ಲಿ ಬೇರೆ ಆಗಿರಬಹುದು. ಆದರೆ, ಬಹು ದೊಡ್ಡ ಅವಧಿಯನ್ನು ಕಾಂಗ್ರೆಸ್ ಪಕ್ಷದ ಜೊತೆ ಕಳೆದಿದ್ದಾರೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡಿರುವಂಥ ಹೆಮ್ಮೆ ನಮಗೆ ಇರುವುದರಿಂದ ಈ ಸಂತಾಪ ಸೂಚನೆ ಮಂಡನೆಯ ಸಾಲಿನಲ್ಲಿ ಸೇರಿಸಬೇಕೆನ್ನುವಂಥ ಮಾತನ್ನು ತಮ್ಮ ಮೂಲಕ ಬೇಡಿಕೊಳ್ಳುವುದರ ಮೂಲಕ ಅವರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಭಗವಂತನು ಅವರ ಕುಟುಂಬದವರಿಗೆ ಅವರ ಅಗಲಿಕೆಯ ನೋವನ್ನು ಭರಿಸುವಂಥ ಶಕ್ತಿ ಕಲ್ಪಿಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಇಂದು ಮುಂಜಾನೆ ನಮ್ಮ ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ ಮತ್ತು ರಾಷ್ಟ್ರ ರಾಜಕಾರಣದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವಂಥ ಅತ್ಯಂತ ಹಿರಿಯ ರಾಜಕೀಯ ಮುತ್ಸದ್ಧಿ ಹಾಗೂ ರಾಜಕಾರಣಿಯಾಗಿರುವ ದಿವಂಗತ ಎಸ್.ಎಂ.ಕೃಷ್ಣರವರ ಅಗಲಿಕೆಯ ನೋವಿನಿಂದ ನಮ್ಮ ಮೇಲ್ಮನೆ ಸದಸ್ಯರು ಸಂತಾಪ ಸೂಚನೆ ಅಡಿ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಮೊಟ್ಟಮೊದಲ ಬಾರಿ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಆರೇಳು ವರ್ಷ ಇರಬಹುದು. ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಚಿತ್ರದುರ್ಗದಲ್ಲಿ 1977, 1978ನೇ ಸಾಲಿನಲ್ಲಿ floodlight tennis match ಆಯೋಜನಾ ಉದ್ಘಾಟನಾ ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿಯಾದ ದಿವಂಗತ ಶ್ರೀ ಎಸ್.ಎಂ.ಕೃಷ್ಣರವರು ಆಗಮಿಸಿ, ಮುಖ್ಯ ಅತಿಥಿಯಾಗಿ ಅದರ ಉದ್ಘಾಟನೆಯನ್ನು ಮಾಡಿದರು. ನಮ್ಮ ಅಜ್ಜನವರಿಗೆ ಬಹಳ ಹತ್ತಿರದವರಾಗಿದ್ದ ಕಾರಣ ನಮ್ಮ ಮನೆಗೆ ಬಂದು ಆ ಉದ್ಘಾಟನಾ ಕಾರ್ಯಕ್ರಮಕ್ಕೆ ಹೋಗಿದ್ದರು. ಅಂದಿನ ದಿವಸ ನಾನು ಬಹಳ ಚಿಕ್ಕವನಾಗಿದ್ದು, ಅವರನ್ನು ಬಹಳ ಹತ್ತಿರದಿಂದ ನೋಡಿದ್ದೆನು. ಒಬ್ಬ ರಾಜಕಾರಣಿ ತಮ್ಮ ವಸ್ತ್ರವೇಶಧಾರಣೆಯಿಂದ ಹಿಡಿದು ತಮ್ಮ ಮಾತು, ನಡವಳಿಕೆ ಯಾವ ರೀತಿ ಇದೆ ಎಂಬುದಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟವರು ದಿವಂಗತ ಶ್ರೀ ಎಸ್.ಎಂ.ಕೃಷ್ಣರವರಾಗಿದ್ದಾರೆ. ಬಹುಶಃ ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ 'a gentleman in Karnataka politics' ಎಂದು ಕರೆದರೂ ಸಹ ತಪ್ಪಾಗಲಾರದು. ಆ ರೀತಿಯಾಗಿ ದೀರ್ಘಕಾಲದ ರಾಜಕಾರಣವನ್ನು ಮಾಡಿದ್ದಾರೆ.

(744) 10.12.2024 (1.10) ಎಸ್‌ಕೆ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್ ನವೀನ್ (ಮುಂದು):**

ಅವರು ಮೂವತ್ತನೇ ವಯಸ್ಸಿನಲ್ಲಿಯೇ ಸ್ವತಂತ್ರ ಅಭ್ಯರ್ಥಿಯಾಗಿ ಶಾಸಕರಾಗಿ ಆಯ್ಕೆಯಾಗಿ ದೀರ್ಘಕಾಲದ ರಾಜಕಾರಣವನ್ನು ಮಾಡುತ್ತಾ ಬಂದಂತಹವರು. ಅವರು ವಿದೇಶಕ್ಕೆ ಹೋಗಿದ್ದಂತಹ ಸಂದರ್ಭದಲ್ಲಿ ಅವರಿಗೆ ಹಲವಾರು ಅವಕಾಶಗಳು ಸಿಕ್ಕಿದ್ದರೂ ಕೂಡ ಅದನ್ನು ತೊರೆದು ನಮ್ಮ ತಾಯ್ನಾಡಿಗೆ ವಾಪಸ್ಸು ಬಂದರು. 1962ನೇ ಇಸವಿಯಲ್ಲಿ ರಾಜಕಾರಣಕ್ಕೆ ಪ್ರವೇಶ ಮಾಡಿ, ಅವರು ಶಾಸಕರಾಗಿ ತದನಂತರ ಅನೇಕ ಸ್ಥಾನಗಳನ್ನು ಅಲಂಕರಿಸಿದರು. ಅವರು ನಮ್ಮ ರಾಜ್ಯಕ್ಕೆ ಸೇವೆಯನ್ನು ಮಾಡುವುದರ ಮೂಲಕ ಒಂದು ಅಳಿಸಲಾಗದಂತಹ ನೆನಪನ್ನು ನಮ್ಮ ದೇಶ ಮತ್ತು ರಾಜ್ಯಕ್ಕೆ ಕೊಟ್ಟು ಹೋಗಿದ್ದಾರೆ. ನಾನು ಎರಡು ವಿಷಯಗಳನ್ನು ಉಲ್ಲೇಖ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. 1990 ರಿಂದ 2004 ರ ಅವಧಿಯಲ್ಲಿ ಮಾನ್ಯ ಎಸ್. ಎಂ. ಕೃಷ್ಣರವರು ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ ಇಡೀ ವಿಶ್ವದಲ್ಲಿಯೇ Information Technology Revolution ನಡೆಯುತ್ತಿತ್ತು. ಜಾಗತಿಕ ಮಟ್ಟದಲ್ಲಿ ಗ್ಲೋಬಲ್ ಮ್ಯಾಪ್‌ನಲ್ಲಿ ಬೆಂಗಳೂರನ್ನು ಹೆಚ್ಚು ಪ್ರಚಾರ ಮಾಡುವಂತಹ ಕೆಲಸ ಹಾಗೂ ಹೆಚ್ಚು ಮಾನ್ಯತೆ ಸಿಗುವಂತಹ ಕೆಲಸವನ್ನು ಮಾನ್ಯ ಎಸ್. ಎಂ. ಕೃಷ್ಣರವರು ಮಾಡಿದ್ದಾರೆ. ಇವತ್ತು ವೈಟ್‌ಫೀಲ್ಡ್‌ನಲ್ಲಿ STPL, Singapore Technology Park ಎನ್ನುವಂತಹದ್ದು ಇದೆ. ಅದು ಅವರ ಪ್ರಯತ್ನದಿಂದ ಅವೊತ್ತಿನ ದಿನ Singapore Government ಜೊತೆಗೆ joint venture ಮಾಡಿರುವಂತಹ ಕಾರಣಕ್ಕೋಸ್ಕರ ನೂರಾರು ಐ.ಟಿ. ಕಂಪನಿಗಳು ಬೆಂಗಳೂರಿಗೆ ಬಂದವು. ಆ ಕಂಪನಿಗಳು ಬಂದಂತಹ ಸಂದರ್ಭದಲ್ಲಿ ಈ ರಾಜ್ಯವನ್ನು ಮುನ್ನಡೆಸುವಂತಹ ವ್ಯಕ್ತಿಯ nature ಹೇಗಿದೆ ಎಂಬುದನ್ನು ಅವೊತ್ತಿನ ದಿನ ತಂತ್ರಜ್ಞಾನದ ಅಧಿಕಾರಿಗಳು ನೋಡುತ್ತಿದ್ದರು. ಮಾನ್ಯ ಎಸ್. ಎಂ. ಕೃಷ್ಣರವರನ್ನು ಭೇಟಿಯಾದ ನಂತರ ಅವರಿಗೆ "ಈ ತರಹದ ಒಬ್ಬ ಮುಖ್ಯಮಂತ್ರಿಯವರು ಜೊತೆಯಿದ್ದಾಗ, ಇಲ್ಲಿ ನಾವು ಬಂಡವಾಳವನ್ನು ಹೂಡಿ ನಮ್ಮ ಸಂಸ್ಥೆಗಳನ್ನು ಪ್ರಾರಂಭ ಮಾಡಬಹುದು" ಎಂದು ಅನಿಸುತ್ತಿತ್ತು. ಈ ರಾಜ್ಯದಲ್ಲಿ ಬಂಡವಾಳ ಹೂಡುವ ಕೆಲಸಕ್ಕೆ ಅವರಿಗೆ ಸ್ಫೂರ್ತಿಯನ್ನು ಕೊಟ್ಟರು. ಮಾನ್ಯ ಎಸ್. ಎಂ. ಕೃಷ್ಣರವರು ಇಡೀ ಪ್ರಪಂಚದಲ್ಲಿಯೇ

ಬೆಂಗಳೂರು ಮಹಾನಗರಕ್ಕೆ ಅತಿ ಹೆಚ್ಚಾಗಿ ಪ್ರೋತ್ಸಾಹದಾಯಕವಾಗಿ ಮಾಡಿರುವಂತಹದ್ದು. ಇನ್ನು ಎರಡನೆಯದಾಗಿ, ಅವರು ಅಧಿಕಾರದಲ್ಲಿದ್ದಾಗ, ಬಹಳಷ್ಟು ಬರಗಾಲ ಮತ್ತು ಸಮಸ್ಯೆಗಳು ಬಂದಿರುವಂತಹ ಸಂದರ್ಭದಲ್ಲಿ KEB ಎಂದು ಇದ್ದಂತಹ ಒಂದೇ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ESCOM ಗಳನ್ನಾಗಿ ಮಾಡಿ, decentralization ಮಾಡುವ ಮೂಲಕ ವಿದ್ಯುತ್ ಸಮಸ್ಯೆಯನ್ನು ಸರಿಪಡಿಸುವಂತಹ ಕೆಲಸವನ್ನು ಮಾಡಿದರು. ಅವರ ರಾಜಕೀಯ ಬದುಕಿನ ಸಂಧ್ಯಾ ಕಾಲದಲ್ಲಿ ಕಾಂಗ್ರೆಸ್ ಪಕ್ಷ ತೊರೆದು, ಬಿ.ಜೆ.ಪಿ., ಪಕ್ಷದಲ್ಲಿ ಮೂರು-ನಾಲ್ಕು ವರ್ಷಗಳ ಕಾಲ ಇದ್ದರು. ತದನಂತರ ಅವರು ಅನಾರೋಗ್ಯಕ್ಕೆ ತುತ್ತಾಗಿ, ಇವತ್ತಿನ ದಿವಸ ಮೃತರಾಗಿದ್ದಾರೆ. ನಾನು ಇವತ್ತಿನ ಸಂತಾಪ ಸೂಚನೆಗೆ ಅನುಮೋದನೆ ಮಾಡುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ. ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ನಾನು ಪ್ರಾರ್ಥನೆ ಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ತಾವು ಮಂಡಿಸಿರುವ ಈ ಸಂತಾಪ ಸೂಚನೆಯ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಎಸ್. ಎಂ. ಕೃಷ್ಣರವರು 1962ರಲ್ಲಿ ರಾಜಕೀಯ ಪ್ರವೇಶ ಮಾಡಿದರು. ಅವರು ನಮ್ಮ ತಂದೆಯವರ ಜೊತೆ ಒಡನಾಟವನ್ನು ಇಟ್ಟುಕೊಂಡಿದ್ದರು. ಅವರು ಮತ್ತು ನಮ್ಮ ತಂದೆಯವರು ಒಟ್ಟಿಗೆ ವಿಧಾನಸಭೆಗೆ 1962ರಲ್ಲಿ ಪ್ರವೇಶ ಮಾಡಿದ್ದಾರೆ. ಮಂಡ್ಯ ರಾಜಕಾರಣದಲ್ಲಿ ನಮ್ಮ ತಂದೆಯವರಾದ ಮಾದೇಗೌಡರು ಮತ್ತು ಮಾನ್ಯ ಎಸ್.ಎಂ. ಕೃಷ್ಣರವರು ಕಾಂಗ್ರೆಸ್ ಪಕ್ಷದಲ್ಲಿಯೇ ಎರಡು ವಿರುದ್ಧ ಗುಂಪುಗಳಾಗಿ ಇದ್ದಂತಹವರು. ಆದರೆ 1992-1994ರ ಅವಧಿಯಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲೇಬೇಕೆಂದು ಮಂಡ್ಯ ಜಿಲ್ಲೆಯ ಪರವಾಗಿ ನಮ್ಮ ತಂದೆಯವರು ಅವಿರತವಾದ ಹೋರಾಟವನ್ನು ಮಾಡಿದಂತಹವರು. ಆ ಸಂದರ್ಭದಲ್ಲಿ ರಾಜಕಾರಣದ ವ್ಯತ್ಯಾಸವಾಗಿ ಅವರು ಉಪ ಮುಖ್ಯಮಂತ್ರಿಯಾಗುತ್ತಾರೆ. ನಂತರ ರಾಜಕಾರಣದಲ್ಲಿ ಅವರು 1999 ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ. ಆ ಸಂದರ್ಭದಲ್ಲಿ ನಾನು ರಾಜಕಾರಣದಲ್ಲಿ ಇಲ್ಲದೇ ಇದ್ದರೂ ಕೂಡ ಅವರನ್ನು ನಾನು ಹತ್ತಿರದಿಂದ ನೋಡಿದಂತಹವನು. ನಮ್ಮ ತಂದೆಯವರು

ರಾಜಕಾರಣಿಯಾಗಿದ್ದರೂ ಕೂಡ ನನ್ನನ್ನು ರಾಜಕಾರಣದಿಂದ ಹೊರಗೆ ಇಟ್ಟಂತಹವರು. ನಾನು ರಾಜಕಾರಣಕ್ಕೆ ಬರಬಾರದು ಎಂದು ತೀರ್ಮಾನವಿದ್ದಂತಹ ಸಂದರ್ಭದಲ್ಲಿ 1999ರಲ್ಲಿ ಮಾನ್ಯ ಎಸ್. ಎಂ. ಕೃಷ್ಣರವರು ನಮ್ಮ ತಂದೆಯವರ ಮನವೊಲಿಸಿ, 2004ರಲ್ಲಿ ನನಗೆ ಕಾಂಗ್ರೆಸ್ ಪಕ್ಷದಿಂದ ಟೀಕೆಟ್ ಕೊಟ್ಟರು. ಆದ್ದರಿಂದ ನಾನು ರಾಜಕಾರಣವನ್ನು ಪ್ರವೇಶ ಮಾಡಿದ್ದರೆ, ಅದು ಮಾನ್ಯ ಎಸ್. ಎಂ. ಕೃಷ್ಣರವರಿಂದ ಎಂದು ಹೇಳುತ್ತೇನೆ. ಮಾನ್ಯ ಎಸ್. ಎಂ. ಕೃಷ್ಣರವರು 1999 ರಿಂದ 2004ರ ವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಿದರು. ಬರಗಾಲದ ಸಮಸ್ಯೆ, ಡಾ|| ರಾಜಕುಮಾರ್‌ವರ ಅಪಹರಣದ ಸಮಸ್ಯೆ ಹಾಗೂ ಕಾವೇರಿ ಚಳುವಳಿ ಸಮಸ್ಯೆ ಇತ್ತು. 1999 ರಿಂದ 2004ರವರೆಗೆ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ಚಳುವಳಿ ಬಹಳ ದೊಡ್ಡ ಚಳುವಳಿಯಾಗಿ ರೂಪಗೊಂಡಿತ್ತು. ನಮ್ಮ ತಂದೆಯವರು ಅವೊತ್ತಿನ ಚಳುವಳಿಯ ನೇತೃತ್ವವನ್ನು ವಹಿಸಿದ್ದಂತಹವರು. ಆಗ ಬರಗಾಲ ಇದ್ದುದರಿಂದ, ರೈತರಿಗೆ ಬಹಳ ತೊಂದರೆಯಾಗಿತ್ತು. ಬರಗಾಲ ಪರಿಸ್ಥಿತಿಯಿದ್ದಾಗ, ಮಂಡ್ಯ ಜಿಲ್ಲೆಯ ರೈತರಿಗೆ ಬರ ಪರಿಹಾರವನ್ನು ಕೊಡಬೇಕೆಂದು ಹೇಳಿ, ನಮ್ಮ ತಂದೆಯವರು ಬಹಳಷ್ಟು ಒತ್ತಾಯವನ್ನು ಮಾಡಿದರು. ಆಗ ಮಾನ್ಯ ಎಸ್. ಎಂ. ಕೃಷ್ಣರವರು ರಾಜ್ಯದಲ್ಲಿ ಬರಗಾಲದ ಸಂದರ್ಭದಲ್ಲಿ "ನಾವು ಯಾವತ್ತು ರೈತರಿಗೆ ಪರಿಹಾರ ಕೊಟ್ಟಿಲ್ಲ. ರೈತರಿಗೆ ಪರಿಹಾರವನ್ನು ಕೊಟ್ಟರೆ, ಮುಂದಿನ ದಿನಗಳಲ್ಲಿ ತೊಂದರೆಯಾಗುತ್ತದೆ" ಎಂದು ಹೇಳಿದರೂ ಕೂಡ, ನಮ್ಮ ತಂದೆಯವರ ಒತ್ತಾಯಕ್ಕೆ ಮಣಿದು ಮಂಡ್ಯ ಜಿಲ್ಲೆಯ ರೈತರಿಗೆ ಪರಿಹಾರವನ್ನು ಕೊಟ್ಟರು. ಅವರ ಸರ್ಕಾರದಲ್ಲಿ ಬಹಳಷ್ಟು ಯೋಜನೆಗಳನ್ನು ಜಾರಿಗೆ ತಂದಂತಹವರು. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇಲ್ಲಿ ನಾನು ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ಮಾನ್ಯ ಎಸ್.ಎಂ. ಕೃಷ್ಣರವರು ನಮ್ಮ ರಾಜ್ಯದಲ್ಲಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ಕೊಡಬೇಕೆಂದು ಹೇಳಿ, ಮಾಹಿತಿ ಸಿಂಧೂ ಕಾರ್ಯಕ್ರಮವನ್ನು 1999ರಲ್ಲಿ ಜಾರಿಗೆ ತಂದರು. ರಾಜ್ಯ ಕಂಡಂತಹ ಈ ಒಂದು ಮಹಾನ್ ವ್ಯಕ್ತಿ ಇವತ್ತು ನಮ್ಮನ್ನೆಲ್ಲಾ ಅಗಲಿರುವುದರಿಂದ ಮಂಡ್ಯ ಜಿಲ್ಲೆಯ ಜನತೆಗೆ ತುಂಬಲಾರದ ನಷ್ಟವಾಗಿದೆ ಮತ್ತು ರಾಜ್ಯಕ್ಕೂ ಕೂಡ ನಷ್ಟವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಹಾರೈಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರಗಳು.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಸಂತಾಪ ಸೂಚನೆಯಲ್ಲಿ ಭಾಗವಹಿಸಿದ್ದಾರೆ. ಅವೊತ್ತಿನ ಮಾನ್ಯ ವೀರಣ್ಣ ಗೌಡರವರು ಲೋಕೋಪಯೋಗಿ ಸಚಿವರಾಗಿದ್ದಂತಹವರನ್ನು ಮಾನ್ಯ ಎಸ್.ಎಂ. ಕೃಷ್ಣರವರು ಸೋಲಿಸಿ 1962ನೇ ಇಸವಿಯಲ್ಲಿ ವಿಧಾನಸಭೆಗೆ ಪ್ರವೇಶ ಮಾಡಿದಂತಹ ಕೀರ್ತಿ ಅವರಿಗೆ ಸಲ್ಲುತ್ತದೆ. ಆ ಕಾಲದಲ್ಲಿ ಅವರು Praja Socialist Party ಸೇರಿಕೊಂಡು, ಅವರ ಜೊತೆಯಲ್ಲಿ ಮಾನ್ಯ ಶಿವಪ್ಪನವರು ಮತ್ತು ಮಾನ್ಯ ಕೆ.ಹೆಚ್. ರಂಗನಾಥ್‌ರವರು, ಮಾನ್ಯ ಭಾಸ್ಕರ್ ಶೆಟ್ಟಿಯವರು ಹಾಗೂ Sri. Wilfred Fernandes ಅವರೆಲ್ಲರೂ ಅಂದಿನ ಸಮಕಾಲೀನ ರಾಜಕಾರಣದಲ್ಲಿ ಇರುವಂತಹ ನಾಯಕರು. ಇವತ್ತು ಅವರು ಯಾರು ಇಲ್ಲ. ಮಾನ್ಯ ಎಸ್. ಎಂ. ಕೃಷ್ಣರವರು ಕೊನೆಯವರಾಗಿ ಇದ್ದಂತಹವರು. ಅವರು ಸಹ ಇವತ್ತು ಬೆಳಗ್ಗೆ ನಿಧನರಾಗಿದ್ದಾರೆ. ನಾವು ಒಂದು ಜ್ಞಾಪಕ ಮಾಡಿಕೊಳ್ಳುವುದೇನೆಂದರೆ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ 1998-99ನೇ ಸಾಲಿನಲ್ಲಿ ಪಾಂಚಜನ್ಯ ಎಂಬ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು, ರಾಜ್ಯದಲ್ಲಿರುವಂತಹ 224 ಕ್ಷೇತ್ರಗಳಿಗೂ ಭೇಟಿಯನ್ನು ಕೊಟ್ಟು, ಒಂದು ಬದಲಾವಣೆಯನ್ನು ತಂದಿದ್ದು ಮತ್ತು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿರುವಂತಹ ಕೀರ್ತಿ ಆ ಸಂದರ್ಭದಲ್ಲಿದ್ದ ಮಾನ್ಯ ಎಸ್.ಎಂ. ಕೃಷ್ಣರವರಿಗೆ ಸಲ್ಲುತ್ತದೆ.

ಅದೇ ರೀತಿ ನಮಗೂ ಒಂದು ಅವಕಾಶ ಸಿಗುತ್ತದೆ. 1989ರಲ್ಲಿ ನಾನು ವಿಧಾನಸಭೆಗೆ ಪ್ರವೇಶ ಮಾಡಿದಾಗ, ಯಾವುದೋ ಒಂದು ಸನ್ನಿವೇಶದಲ್ಲಿ ನನಗೂ ಮತ್ತು ಮಾನ್ಯ ವಾಟಾಳ್ ನಾಗರಾಜರವರಿಗೂ ವಾದ-ವಿವಾದಗಳಾಗಿ ಸ್ವಲ್ಪ ಕಾಲ ಸದನ adjourn ಆಗುತ್ತದೆ. ಆಗ ವಾಟಾಳ್ ನಾಗರಾಜ್‌ರವರು ನನ್ನನ್ನು ಅಮಾನತ್ತು ಮಾಡಬೇಕೆಂದು ಹೇಳಿ, ಬಹಳ ಗಟ್ಟಿಯಾಗಿ ವಾದ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ನನ್ನನ್ನು ಮತ್ತು ಅವರನ್ನು ಕೂರಿಸಿ ಸಮಾಧಾನ ಮಾಡುವಂತಹ ಒಂದು ವ್ಯಕ್ತಿತ್ವ ಅವರಲ್ಲಿ ಇತ್ತು. ಅವರ ಕಾಲದಲ್ಲಿ ನಾವು ಸಣ್ಣ ವಯಸ್ಸಿನವರು. ನಾನು ಮತ್ತು ಮಾನ್ಯ ಶಿವಕುಮಾರ್‌ರವರು ಕೂಡ ಇದ್ದರು. ಆಗ ನಮ್ಮನ್ನೆಲ್ಲಾ ಕೂರಿಸಿ ಬುದ್ಧಿವಾದ ಹೇಳುತ್ತಿದ್ದರು. ಸದನಕ್ಕೆ ಯಾವ ರೀತಿ ಬರಬೇಕು ಮತ್ತು ಸದನದಲ್ಲಿ ಯಾವ ರೀತಿ ಭಾಗವಹಿಸಬೇಕು.

ಸದನದಲ್ಲಿ ಪ್ರಸ್ತಾಪವಾಗುವ Calling Attention Notice ಇರಬಹುದು, ಮತ್ತೊಂದು ಇರಬಹುದು. ಅದರಲ್ಲಿ ಭಾಗವಹಿಸಿ ಮಾತನಾಡಬೇಕು. ನೀವು ಲೈಬ್ರರಿಯಲ್ಲಿ ಹೆಚ್ಚು ಹೊತ್ತು ಕುಳಿತುಕೊಂಡು, ಸದನದ ಕಲಾಪದ ಬಗ್ಗೆ ಹೆಚ್ಚಾಗಿ ಅಧ್ಯಯನವನ್ನು ಮಾಡಬೇಕೆಂದು ಹೇಳಿ, ನಮಗೆಲ್ಲರಿಗೂ ಸಲಹೆ ಕೊಡುತ್ತಿದ್ದುದು ನನಗೆ ಇವತ್ತಿಗೂ ಸಹ ಜ್ಞಾಪಕ ಬರುತ್ತಿದೆ.

(ಮುಂದು)

(745) 10.12.2024, 1.20 TCH-RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ನಸೀರ್ ಅಹ್ಮದ್ (ಮುಂದು):**

ಅದೇ ರೀತಿ ಇವತ್ತಿನ ದಿವಸ first time in Karnataka ಯಾವುದಾದರೂ ಒಂದು Foreign Investment ಬಂತೆಂದರೆ ಅದು ITPL in Whitefield. ಅದು ಅಲ್ಲಿಂದ ಪ್ರಾರಂಭವಾಯಿತು. ಅದೂ ಕೂಡ ಅವರ ಕಾಲದಲ್ಲೇ ಆಗಿರತಕ್ಕಂಥದ್ದು. ಇವತ್ತಿನ ದಿವಸ ಆ ಕಾಲದಲ್ಲಿ ಶ್ರೀ ಎಸ್. ಬಂಗಾರಪ್ಪನವರು ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಎಸ್.ಎಂ.ಕೃಷ್ಣ ರವರು ಸ್ಪೀಕರ್ ಆಗಿದ್ದರು. ಮಾನ್ಯ ಖುರ್ಷೀದ್ ಆಲಂ ಖಾನ್‌ರವರು ರಾಜ್ಯಪಾಲರಾಗಿದ್ದರು. ಆ ಒಂದು ಸಮಯದಲ್ಲಿ ಅಲ್ಲಿರತಕ್ಕಂಥ ಒಂದು moral values ಮೌಲ್ಯಗಳನ್ನು ನೋಡಿದಾಗ, ಇವತ್ತಿನ ದಿವಸ ಆ ರೀತಿ ಕಾಣುವುದಕ್ಕೆ ಬರುತ್ತಿಲ್ಲ. ಆ ಒಂದು ವ್ಯಕ್ತಿತ್ವ ಅವರಲ್ಲಿತ್ತು. ಅವರು ಉತ್ತಮ ನಡವಳಿಕೆ ಹೊಂದಿದ್ದರು. ಇವತ್ತಿನ ದಿವಸ ಅವರ dress ಮತ್ತು ಅವರ dress code ಬಗ್ಗೆ ಮಾತನಾಡಿದ್ದೇವೆ. ಅವರು ನಡೆದುಕೊಳ್ಳುತ್ತಿದ್ದಂತಹ ರೀತಿ, ಅವರ character ಮತ್ತು ಅವರ cultural values ಇದೆಲ್ಲವನ್ನು ನೋಡಿದಾಗ ಆ ಸಮಯದಲ್ಲಿ ಆ ರೀತಿಯ ಜನಗಳು ಇದ್ದರು. ಅದರಲ್ಲೂ ಕೂಡ ಶ್ರೀ ಎಸ್.ಎಂ.ಕೃಷ್ಣ ರವರು ಮಾನ್ಯ ಖುರ್ಷಿದ್ ಅಲಂಖಾನ್ ರವರ ಜೊತೆ ಕುಳಿತುಕೊಂಡು ಸಾಕಷ್ಟು ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದನ್ನು ನಾವು ನೋಡಿದ್ದೇವೆ. ಅದೇ ರೀತಿ ಶ್ರೀ ಅಜಿತ್ ಸೇಠ್‌ರವರು ಇರಬಹುದು ಮತ್ತು ಶ್ರೀ ಜಾಫರ್ ಷರೀಫ್ ಆಗಿರಬಹುದು ಆ ರೀತಿಯ ಜನ ಇವತ್ತಿನ ದಿವಸ ಸಿಗುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹಾಗಾಗಿ ಇವತ್ತಿನ ದಿವಸ ಸಂತಾಪ ಸೂಚನೆ

ಸಂದರ್ಭದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲಿ ಎಂದು ಹೇಳಿ, ನನ್ನ ಎರಡು ಮಾತನ್ನು ಮುಗಿಸುತ್ತಿದ್ದೇನೆ.

**ಶ್ರೀ ಹೆಚ್.ಪಿ.ಸುಧಾಮ್‌ದಾಸ್ (ನಾಮನಿರ್ದೇಶಿತರು):** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಎಸ್.ಎಂ.ಕೃಷ್ಣರವರ ಅಗಲಿಕೆಯ ಸಂದರ್ಭದ ಸಂತಾಪ ಸೂಚನೆ ವೇಳೆಯಲ್ಲಿ ಅವರ ವ್ಯಕ್ತಿತ್ವವನ್ನಾಗಲಿ ಮತ್ತು ಅವರು ಅಲಂಕರಿಸಿದ ವಿವಿಧ ಹುದ್ದೆಗಳ ಸಂದರ್ಭದಲ್ಲಿ ಸಲ್ಲಿಸಿರುವ ಸೇವೆಗಳನ್ನಾಗಲಿ, ಕೆಲವೇ ಮಾತುಗಳಲ್ಲಿ ಹಿಡಿದಿಡುವುದು ಬಹಳ ಕಷ್ಟಸಾಧ್ಯವಾದ ಕೆಲಸ. ಆದರೂ ಕೂಡ ಮಾನ್ಯ ಸದಸ್ಯರುಗಳು ತಮ್ಮ ಮಾತುಗಳ ಮುಖಾಂತರ ಸಾಕಷ್ಟು ಅವರ ಸ್ಮರಣೆಯ ಕೆಲಸ ಮಾಡಿದ್ದಾರೆ. ಭಾರತದ ಅತ್ಯಂತ "politically vibrant district" ಎಂದು ಕರೆಯಲ್ಪಡುವ ಮಂಡ್ಯದಿಂದ ಬಂದಂತಹ ಮಾನ್ಯ ಎಸ್.ಎಂ.ಕೃಷ್ಣರವರು, ಮಾನ್ಯ ಶ್ರೀ ಬಿ.ಕೆ.ಹರಿಪ್ರಸಾದ್ ರವರು ಹೇಳಿದಂತೆ, ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಏಳುಬೀಳುಗಳ ನಡುವೆಯು ಕೂಡ ಪ್ರಧಾನಿ, ಉಪಪ್ರಧಾನಿ ಮತ್ತು ಅಧ್ಯಕ್ಷರು ಇಷ್ಟು ಹುದ್ದೆಗಳನ್ನು ಬಿಟ್ಟು ಇನ್ನೆಲ್ಲಾ ಹುದ್ದೆಗಳನ್ನೂ ಅಲಂಕರಿಸಿದ ಹೆಗ್ಗಳಿಕೆ ಹೊಂದಿದ್ದಾರೆ. ನಾನು "Politically vibrant" ಎಂದು ಏಕೆ ಹೇಳಿದೆನೆಂದರೆ, ರಾಜಕೀಯವಾಗಿ ಬಹಳ ಪ್ರಬುದ್ಧತೆ ತೋರುವಂತಹ ಜನ ಅವರು. ಇಷ್ಟಪಟ್ಟರೆ ಪಕ್ಷೇತರ ಅಭ್ಯರ್ಥಿಯನ್ನೂ ಗೆಲ್ಲಿಸುತ್ತಿದ್ದರು. ನಡವಳಿಕೆಯಲ್ಲಿ ಸ್ವಲ್ಪ ದೋಷ ಕಂಡುಬಂದರೆ ಬಲಿಷ್ಠ ರಾಷ್ಟ್ರೀಯ ಪಕ್ಷದ ಅಭ್ಯರ್ಥಿಯನ್ನೂ ಕೂಡ ಸೋಲಿಸುತ್ತಿದ್ದರು. ಇಂತಹ ಹಿನ್ನೆಲೆಯಿಂದ ಬಂದಂತಹ ಮಾನ್ಯ ಎಸ್.ಎಂ.ಕೃಷ್ಣರವರು ರಾಜ್ಯದ ಮುಖ್ಯಮಂತ್ರಿಯಾಗಿ ಸಲ್ಲಿಸಿರುವ ಸೇವೆಯನ್ನು ಯಾರೂ ಕೂಡ ಮರೆಯುವುದಕ್ಕೆ ಸಾಧ್ಯವಿಲ್ಲ. ಅವರು ಅಧಿಕಾರ ವಹಿಸಿಕೊಳ್ಳುವ ಮುಂಚೆ ನೆರೆ ರಾಜ್ಯದ ಆಂಧ್ರಪ್ರದೇಶದಲ್ಲಿ ಮಾನ್ಯ ಚಂದ್ರಬಾಬು ನಾಯ್ಡುರವರ ನೇತೃತ್ವದಲ್ಲಿ "ಹೈದರಾಬಾದ್ ಭಾರತದ ಸಿಲಿಕಾನ್ ವ್ಯಾಲಿ" ಎಂದು ಕರೆಯಲ್ಪಡುತ್ತಿತ್ತು. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ "ಮಾಹಿತಿ ತಂತ್ರಜ್ಞಾನದ ನೈಜ ವಾರಸುದಾರರು, ನೈಜ ಸಂಪನ್ಮೂಲ ಹೊಂದಿರುವರು ಕರ್ನಾಟಕದವರು" ಎಂದು ಇಡೀ ಜಗತ್ತಿಗೆ ಪರಿಚಯ ಮಾಡಿಸಿರುವ ಹೆಗ್ಗಳಿಕೆ ಮಾನ್ಯ ಎಸ್.ಎಂ.ಕೃಷ್ಣರವರಿಗೆ ಸಲ್ಲುತ್ತದೆ. ಅವರ

ಅನೇಕ ಸಾಧನೆಗಳನ್ನು, ಸೇವೆಗಳನ್ನು ನಮ್ಮ ಮಾನ್ಯ ಸದಸ್ಯರುಗಳು ಸ್ಮರಣಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಇನ್ನೊಂದು ಬಹು ಮುಖ್ಯ ಸಾಧನೆಯನ್ನು ಸೇವೆಯನ್ನು ಸ್ಮರಿಸಲಿಲ್ಲವೆಂದರೆ ಬೆಂಗಳೂರಿನ ಜನಗಳು ಅವರ ಭಾವನೆಗಳಿಗೆ ಧಕ್ಕೆ ಮಾಡಿಸಿದ ರೀತಿ ಆಗುತ್ತದೆ. ಏಕೆಂದರೆ, ಇವತ್ತಿನ ದಿವಸ ಬೆಂಗಳೂರಿನಲ್ಲಿ ನಿವೇಶನ ಹೊಂದಿಸುವುದು ಬಹಳ ಕಷ್ಟಸಾಧ್ಯ. ಅದು ಕನಸಿನ ಮಾತು ಎಂದು ಜನರ ಭಾವನೆ ಇದ್ದಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮುಖಾಂತರ ಅವರ ಅಧಿಕಾರದ ಅವಧಿಯುದ್ದಕ್ಕೂ ಕೂಡ ಅತ್ಯಂತ ಸರಳ ರೀತಿಯಲ್ಲಿ ಬಡವ ಹಾಗೂ ಮಧ್ಯಮ ವರ್ಗದ ಜನಗಳಿಗೆ ಕೈಗೆಟುವ ರೀತಿಯಲ್ಲಿ, ಯಾವುದೇ ವಿವಾದ ಇಲ್ಲದೇ ನಿವೇಶನಗಳನ್ನು ಕೊಟ್ಟಂತಹ ಸಾಧನೆ ಮಾನ್ಯ ಎಸ್.ಎಂ.ಕೃಷ್ಣರವರದು. ಅವರು ಅಧಿಕಾರದಿಂದ ನಿರ್ಗಮಿಸಿದ ನಂತರ ಮತ್ತೇ ಪಾಪ ಕೂಪಕ್ಕೆ ಮರಳಿದಂತಹ ಬಿ.ಡಿ.ಎ.ಯನ್ನು ಹೊರಗೆ ತರುವುದಕ್ಕೆ ಯಾರಿಗೂ ಕೂಡ ಸಾಧ್ಯವಾಗದೇ ಇರುವುದು ಮಾನ್ಯ ಎಸ್.ಎಂ.ಕೃಷ್ಣ ರವರ ಕಾರ್ಯಕ್ಷಮತೆ ಸಣ್ಣ ಪರಿಚಯ ಮಾಡುತ್ತದೆ. ಮಾನ್ಯ ಎಸ್.ಎಂ.ಕೃಷ್ಣ ರವರು ವಿದೇಶಾಂಗ ಸಚಿವರಾದ ಸಂದರ್ಭದಲ್ಲಿ ಅವರ ವಿಶೇಷ ಕರ್ತವ್ಯಾಧಿಕಾರಿಯಾಗಿ ಸೇವೆ ಸಲ್ಲಿಸುವ ಅವಕಾಶ ನನಗೆ ಒಲಿದು ಬಂದಿತ್ತು. ಆದರೆ ವೈಯಕ್ತಿಕ ಕಾರಣದಿಂದ ಆ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳುವುದಕ್ಕೆ ಆಗಲಿಲ್ಲ. ಇಂದಿನ ಸಾರ್ವಜನಿಕ ಜೀವನದಲ್ಲಿ ಬಹಿರಂಗ ಸಭೆಗಳಲ್ಲಾಗಿರಬಹುದು, ಮಾಧ್ಯಮದೊಳಗೆ ಮಾತನಾಡುವುದು ಇರಬಹುದು, ನಮ್ಮ ಹಿಂದಿನ ರಾಜಕಾರಣಿಗಳು ಮಾಡುತ್ತಿರುವ ಭಾಷೆಯ ದುರ್ಬಳಕೆಯನ್ನು ಗಮನಿಸಿದರೆ ಮಾನ್ಯ ಎಸ್.ಎಂ.ಕೃಷ್ಣ ರವರ ಸಜ್ಜನಿಕೆಯ ನಡವಳಿಕೆಯನ್ನು, ಅವರ ಕೆಲವು ಧನಾತ್ಮಕ ಅಂಶಗಳನ್ನು ತಮ್ಮ ನಡವಳಿಕೆಗಳಲ್ಲೂ ಅಳವಡಿಸಿಕೊಂಡರೆ ಮಾನ್ಯ ಎಸ್.ಎಂ.ಕೃಷ್ಣರವರಿಗೆ ಅದನ್ನೇ ನಾವು ಸಲ್ಲಿಸಬಹುದಾದ ನೈಜ ಶ್ರದ್ಧಾಂಜಲಿ. ರಾಜ್ಯದ ಜನಗಳಿಗೆ ಕೊಡಬಹುದಾದ ಗೌರವ ಎನ್ನುವ ಭಾವನೆಗಳನ್ನು ವ್ಯಕ್ತಪಡಿಸುವ ಮುಖಾಂತರ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಸಹಮತವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ತಾವು ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸುತ್ತೇನೆ. ಮಾನ್ಯ ಎಸ್.ಎಂ.ಕೃಷ್ಣ ರವರು ಈ

ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕೇಂದ್ರದ ಸಚಿವರಾಗಿದ್ದರು. ಈ ದೇಶದ ಮತ್ತು ರಾಜ್ಯದ ಎರಡೂ ಸದನಗಳಲ್ಲಿ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿದ ಅಪರೂಪದ ವ್ಯಕ್ತಿಗಳಲ್ಲಿ ಒಬ್ಬರು. ಬಹುಶಃ ಅವರ ಆಕರ್ಷಣೀಯ ರಾಜಕಾರಣೀಯ ಒಂದು ದೊಡ್ಡ ಬದ್ಧತೆ ಮತ್ತು ಅವರಿಗೆ ಕೊಟ್ಟಂತಹ ಜವಾಬ್ದಾರಿಯನ್ನು ಬಹಳ ಸಮರ್ಪಕವಾಗಿ ನಿರ್ವಹಣೆ ಮಾಡತಕ್ಕಂಥ ರೀತಿ ಬಹುಶಃ ಅವರನ್ನು ಬಹಳ ದೊಡ್ಡ ಎತ್ತರದ ಸ್ಥಾನಕ್ಕೆ ಕೊಂಡೊಯ್ಯುವುದಕ್ಕೆ ಸಾಧ್ಯವಾಯಿತು ಎಂದು ನಾನಂತು ಭಾವಿಸಿಕೊಂಡಿದ್ದೇನೆ. ದೇವರು ಯಾರಿಗೂ "ವರವನ್ನೂ ಕೊಡುವುದಿಲ್ಲ, ಶಾಪವನ್ನೂ ಕೊಡುವುದಿಲ್ಲ". ಆದರೆ ಅವಕಾಶವನ್ನು ಕೊಡುತ್ತಾನೆ. ಅವಕಾಶ ಕೊಟ್ಟಾಗ ಆ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ರಾಜ್ಯ ಮತ್ತು ದೇಶದಲ್ಲಿ ಹಾಗೂ ಅಂತರ‍್ರಾಷ್ಟ್ರೀಯ ಮಟ್ಟದಲ್ಲಿ ಸೇವೆಯನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ಅತ್ಯಂತ ಪ್ರಭಾವಿಗಳಾಗಿ ಭಾಷೆ ಪ್ರಭುತ್ವವನ್ನು ಹೊಂದಿಕೊಂಡು ಅತ್ಯಂತ ಕಷ್ಟದ ಯಾವುದೇ ಕೆಲಸವನ್ನು ನಿರ್ವಹಣೆ ಮಾಡಿದ್ದಾರೆ. ಅದು ವಿದೇಶಾಂಗ ಸಚಿವಾಲಯ ಇರಬಹುದು ಅಥವಾ Parliamentary Affairs ಇರಬಹುದು. ಸಂಸದೀಯ ವ್ಯವಹಾರಗಳ ಸಚಿವರಾಗಿ ಪಾರ್ಲಿಮೆಂಟ್‌ನಲ್ಲಿ ಕೆಲಸ ಮಾಡತಕ್ಕಂಥದ್ದು ಅತ್ಯಂತ ಕಷ್ಟದ ಕೆಲಸ. ಅದನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಣೆ ಮಾಡಿರುವುದು ಮಾನ್ಯ ಎಸ್.ಎಂ.ಕೃಷ್ಣ ರವರ ಪಾಲಿಗೆ ಅದು ಒಂದು ರೀತಿಯ ದೊಡ್ಡ ಅವಕಾಶವೆಂದು ನಾವು ಭಾವಿಸಿಕೊಂಡಿದ್ದೇವೆ. ಅವರ personality, ಅವರ ಗಂಭೀರತೆ ಮತ್ತು ಅವರು ನಡೆದುಕೊಂಡು ಬಂದಂತಹ ರೀತಿ ಇವೆಲ್ಲವೂ ಕೂಡ ಸಮಾಜಕ್ಕೆ ಒಂದು ಆದರ್ಶಪ್ರಾಯವಾಗಿದೆಯೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ನೆನಪಿಸಿಕೊಳ್ಳಲೇಬೇಕು. ನನ್ನ ರಾಜಕೀಯ ಜೀವನ 1986ರಲ್ಲಿ ಮಂಡಲ್ ಪಂಚಾಯತ್ ಮೂಲಕ ಪ್ರಾರಂಭವಾಯಿತು. ತದನಂತರ ಜನತಾದಳ ಪಕ್ಷಕ್ಕೆ ಸೇರಿದೆನು. 2003ರಲ್ಲಿ ಜನತಾದಳ ಅನೇಕ ಗುಂಪುಗಳಾಗಿ ಬೇರೆಬೇರೆ ಪಕ್ಷಗಳಾಗಿ ರಚನೆಗೊಂಡಾಗ ಒಂದು ದಿವಸ ಮಾನ್ಯ ರಮೇಶ್‌ಕುಮಾರ್ ರವರು ನನಗೆ ಫೋನ್ ಮಾಡಿ, ಮಾನ್ಯ ಎಸ್.ಎಂ.ಕೃಷ್ಣ ರವರಿಗೆ ಫೋನ್ ಕೊಟ್ಟು, "ಸನ್ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ.ಕೃಷ್ಣ ರವರು ತಮ್ಮ ಹತ್ತಿರ ಮಾತನಾಡಬೇಕಂದು ಬಯಸಿದ್ದಾರೆ" ಎಂದು ಹೇಳಿದರು. ಮಾನ್ಯ ಎಸ್.ಎಂ.ಕೃಷ್ಣ ರವರು ಫೋನ್‌ನ್ನು ತೆಗೆದುಕೊಂಡಾಗ ನಾನು "ಸರ್, ತಾವು ಹೇಗಿದ್ದೀರಿ" ಎಂದು ಕೇಳಿದೆನು. ಅದಕ್ಕೆ ಅವರು "ಮಾನ್ಯ

ರಮೇಶ್‌ಕುಮಾರ್ ರವರು ನಿಮ್ಮ ಬಗ್ಗೆ ಎಲ್ಲಾ ವಿಚಾರಗಳನ್ನು ನನಗೆ ತಿಳಿಸಿದ್ದಾರೆ. ನೀವು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಆಗಬೇಕು, ನೀವು ನಮ್ಮ ಜೊತೆ ಬನ್ನಿ, ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ.

(ಮುಂದು)

(746)10.12.2024/1.30/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):**

ಈ ಪಕ್ಷದಲ್ಲಿ ನಿಮಗೆ ಒಳ್ಳೆಯ ಅವಕಾಶವಿದೆ ಎಂಬ ಮಾತನ್ನು ಹೇಳಿ ತದನಂತರ ಕೆ.ಪಿ.ಸಿ.ಸಿ. ಗೆ ನಾನು, ಮಾನ್ಯ ರಮೇಶ್ ಕುಮಾರ್ ಮತ್ತು ಶ್ರೀ ಬಿ.ಎಂ. ವೈದ್ಯರವರು ಸೇರಿ 2003ರಲ್ಲಿ ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳಿಸುತ್ತಾರೆ. ಸೇರ್ಪಡೆಗೊಳಿಸಿ 2004ರಲ್ಲಿ ನಡೆದ ಚುನಾವಣೆಯಲ್ಲಿ ನನಗೆ ಮಂಗಳೂರು ವಿಧಾನಸಭಾ ಕ್ಷೇತ್ರಕ್ಕೆ ಟಿಕೆಟ್ ಕೊಡಬೇಕು ಎಂದು ಪ್ರಯತ್ನ ಮಾಡುತ್ತಾರೆ. ಆಗ ಬೇರೆ ಬೇರೆ ರಾಜಕಾರಣಕ್ಕಾಗಿ ಆಗಲಿಲ್ಲ. ನಂತರ 2008ರಲ್ಲಿ ಮತ್ತೆ ನನಗೆ ಮಂಗಳೂರು ವಿಧಾನಸಭಾ ಕ್ಷೇತ್ರಕ್ಕೆ ಟಿಕೆಟ್ ಕೊಟ್ಟು ರಾಜಕಾರಣದಲ್ಲಿ ನಾನು ಈ ಸ್ಥಾನಕ್ಕೆ ಬಂದು, ಈ ಭಾಗದಲ್ಲಿ ಕುಳಿತುಕೊಳ್ಳಬೇಕಾಗಿದ್ದರೆ ಅದಕ್ಕೆ ಶ್ರೀ ಎಸ್.ಎಂ. ಕೃಷ್ಣರವರೇ ಕಾರಣ ಎಂದು ನಾನು ಸ್ಮರಿಸಿಕೊಳ್ಳುತ್ತೇನೆ. ಶ್ರೀ ಎಸ್.ಎಂ. ಕೃಷ್ಣರವರು ಒಬ್ಬ ದೊಡ್ಡ ರಾಜಕಾರಣಿ. ಅವರು ಸಮಾಜದಲ್ಲಿ ನಡೆದುಕೊಂಡು ಬಂದಂತಹ ರೀತಿ, ಅವರ behavior in politics, noble qualities in politics, ಬಹುಶಃ ಈ ಸಮಾಜಕ್ಕೆ ಮಾದರಿಯಾಗಿರತಕ್ಕಂತಹದ್ದು. ಯಾವುದೋ ಒಬ್ಬ ರಾಜಕಾರಣಿ ಹೇಗಿರಬೇಕೆಂದು ಬಯಸುತ್ತಾರೆಂದರೆ ಅದು ಶ್ರೀ ಎಸ್.ಎಂ. ಕೃಷ್ಣರವರ ಹಾಗಿರಬೇಕು, ಅವರ footsteps ಅನ್ನು ನಾವು ಫಾಲೋ ಮಾಡಬೇಕು. ಅವರು ಬಿಟ್ಟು ಹೋಗಿರುವಂತಹ ದೊಡ್ಡ ವಿಚಾರಗಳಿರಬಹುದು, ಅವರು ತಂದಿರತಕ್ಕಂತಹ ಯೋಜನೆಗಳಿರಬಹುದು. ಪ್ರತ್ಯೇಕವಾಗಿ ಹೇಳುವುದಾದರೆ ಬಿಸಿಯೂಟದ ಯೋಜನೆ, ಅವರ ಚಿಂತನೆ, ಅದೇ ರೀತಿ ಮಹಿಳೆಯರ ಸಬಲೀಕರಣಕ್ಕಾಗಿ ಮಾಡಿರುವಂತಹ ಸ್ತ್ರೀಶಕ್ತಿ ಗುಂಪುಗಳಂತಹ ಅನೇಕ ಯೋಜನೆಗಳು ಬಹುಶಃ ಹೆಜ್ಜೆಗುರುತಾಗಿ ಈ ದೇಶದಲ್ಲಿ, ರಾಜ್ಯದಲ್ಲಿ ಉಳಿದಿದೆ ಮತ್ತು ರಾಷ್ಟ್ರ, ಅಂತರ್‌ರಾಷ್ಟ್ರ ಮಟ್ಟದಲ್ಲಿ ಓರ್ವ

ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿದ್ದುಕೊಂಡು, ಕಾನೂನು ಪದವೀಧರರಾಗಿದ್ದುಕೊಂಡು, International law ಅನ್ನು ಸ್ಟಡಿ ಮಾಡಿ ಅದನ್ನು ಬೋಧನೆ ಮಾಡಿದಂತಹ ಒಬ್ಬ ವ್ಯಕ್ತಿ ದೇಶದ ಅತ್ಯುನ್ನತ ಮಟ್ಟಕ್ಕೆ ತಲುಪುತ್ತಾರೆ. ದೇಶದ first three positions ಬಿಟ್ಟು ಬೇರೆ ಎಲ್ಲವನ್ನೂ ಅಲಂಕರಿಸುವಂತಹ ಅವಕಾಶವನ್ನು ಮಾಡಿಕೊಳ್ಳುತ್ತಾರೆ. ದಕ್ಷಿಣ ಭಾರತದಲ್ಲಿ ಒಂದು ಮಾತಿದೆ. ದಕ್ಷಿಣ ಭಾರತದವರು ದೇಶದ ರಾಜಕಾರಣಕ್ಕೆ ಹೋದರೆ ಅಲ್ಲಿ ಹೆಚ್ಚು ಪ್ರಭಾವ ಬೀರುವ ರಾಜಕಾರಣಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಶ್ರೀ ಎಸ್.ಎಂ. ಕೃಷ್ಣರವರು ಅದಕ್ಕೆ ವ್ಯತಿರಿಕ್ತ ಎಂಬಂತೆ ದಕ್ಷಿಣ ಭಾರತದಿಂದ ಹೋಗಿ ಅಲ್ಲಿ ಎಲ್ಲಾ ಸ್ಥಾನಗಳನ್ನು ಪಡೆದು ಎಲ್ಲಾ ಸ್ಥಾನಗಳಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿಯೂ ತನ್ನ ಹೆಜ್ಜೆ ಗುರುತನ್ನು ಪಾರ್ಲಿಮೆಂಟ್ ಮಟ್ಟದಲ್ಲಿ, ದೆಹಲಿ ಮಟ್ಟದಲ್ಲಿ ಬೆಳೆಸಿಕೊಂಡಿದ್ದಂತಹ ಓರ್ವ ರಾಜಕಾರಣಿ. ಅವರು ತೀರಿಕೊಂಡಿರುವುದು ವಿಷಾದನೀಯ.

ಆದರೂ ಕೂಡ ಅವರ ನಿಧನದಿಂದ ಅವರ ಕುಟುಂಬಕ್ಕೆ ಉಂಟಾಗಿರುವ ನೋವನ್ನು ಭರಿಸುವ ಶಕ್ತಿಯನ್ನು ದೇವರು ಕೊಡಲಿ ಎಂದು ಕೋರಿ ತಾವು ತಂದಂತಹ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಡಾ:ಕೆ.ಗೋವಿಂದರಾಜು (ವಿಧಾನಸಭಾ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ನನ್ನ ವಂದನೆಗಳನ್ನು ಹೇಳುತ್ತಾ, ಇವತ್ತು ತಾವು ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ. ಕೃಷ್ಣರವರ ಸಂತಾಪ ಸೂಚನೆಯನ್ನು ತಂದಿದ್ದೀರಿ. ಶ್ರೀ ಎಸ್.ಎಂ. ಕೃಷ್ಣರವರ ಬಗ್ಗೆ ಹೇಳಬೇಕಾದರೆ ಕನಿಷ್ಠ ಎರಡು ಗಂಟೆಯಾದರೂ ಮಾತನಾಡಬೇಕಾಗುತ್ತದೆ. ಆದರೆ ನೀವು ಕಡಿಮೆ ಸಮಯ ಕೊಟ್ಟಿರುವುದರಿಂದ ಎಷ್ಟು ಸಾಧ್ಯವೋ ಅಷ್ಟನ್ನು ಹೇಳುತ್ತೇನೆ. ಶ್ರೀ ಎಸ್.ಎಂ. ಕೃಷ್ಣರವರು ನಾವು ಕಂಡಂತಹ ಅಪರೂಪದ ರಾಜಕಾರಣಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಅವರ discipline and dress code ಅನ್ನು ಯಾರೂ ಮೀರಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಮೊದಲನೆಯದಾಗಿ ಅವರ time discipline ಬಗ್ಗೆ ಹೇಳುವುದಾದರೆ ಅವರು ಐದು ಗಂಟೆಗೆ ಸಮಯ ಕೊಟ್ಟರೆ ಐದು ಗಂಟೆಗೆ ಹೋಗಿಲ್ಲ ಎಂದರೆ ಅವರು ಯಾರನ್ನೂ ಬೈಯ್ಯುತ್ತಿರಲಿಲ್ಲ. ಸುಮ್ಮನೇ ವಾಚ್ ನೋಡುತ್ತಿದ್ದರು.

ಅವರಿಗೆ ಅದೇ ಮೆಸೇಜ್. ಅಂದರೆ ಟೈಮಾಯಿತು, ನೀನು ಆಮೇಲೆ ಬಾ ಎಂದು ಅದರ ಅರ್ಥ. That is one aspect. ಅವರು ಇವತ್ತು ದೇಶದ ಭೂಪಟದಲ್ಲಿ ಬೆಂಗಳೂರು ಇರಬೇಕಾದರೆ ಅವರೇ ಕಾರಣ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ಎಸ್.ಎಂ. ಕೃಷ್ಣ ಅವರು ಬೆಂಗಳೂರನ್ನು ಸಿಂಗಾಪುರ ಮಾಡಬೇಕೆಂದು ಹೇಳುತ್ತಿದ್ದರು. ಆದರೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದರು. ನನಗೆ ಮೊದಲ ಬಾರಿಗೆ ಶಿವಾಜಿನಗರ ಕ್ಷೇತ್ರದಿಂದ ವಿಧಾನ ಸಭೆಗೆ ಸ್ಪರ್ಧಿಸುವುದಕ್ಕೆ ಶ್ರೀಮಾನ್ ಎಸ್.ಎಂ. ಕೃಷ್ಣ ಮತ್ತು ಶ್ರೀಮಾನ್ ಜಾಫರ್ ಷರೀಫ್ ಇಬ್ಬರೂ ಸೇರಿ ಟಿಕೆಟ್ ಕೊಟ್ಟರು. ನಾನು ಪಾಸ್ ಆಗಲಿಲ್ಲ, ಫೇಲ್ ಆದೆ. ಆದರೆ ಅದಕ್ಕೆ ಅವರು ಮುಂದುವರೆದು "don't worry work hard, you will get everything and don't bother about anything" ಎಂದು advice ಮಾಡಿದರು. ಅದೇ ರೀತಿ ಶ್ರೀ ಜಾಫರ್ ಷರೀಫರು ನನಗೆ ಬೆನ್ನು ತಟ್ಟಿ 'ನೀನು ಸೋತಿರಬಹುದು, ಚೆನ್ನಾಗಿ ಕೆಲಸ ಮಾಡು, ನಾವೆಲ್ಲಾ ಇದ್ದೇವೆ, ನಿನಗೆ ಸಪೋರ್ಟ್ ಮಾಡುತ್ತೇವೆ' ಎಂದು ಹೇಳಿದರು. ಅದಾದ ನಂತರ ನನಗೆ ಶ್ರೀ ಎಸ್.ಎಂ. ಕೃಷ್ಣರವರು ಕ್ರೀಡೆಗೆ ಬಹಳಷ್ಟು ಸಪೋರ್ಟ್ ಮಾಡುತ್ತಿದ್ದರು. 2002ರಲ್ಲಿ ಒಲಂಪಿಕ್ ಸಂಸ್ಥೆಗೆ ಅಧ್ಯಕ್ಷನಾಗುವುದಕ್ಕೆ ನನ್ನನ್ನು ಸಂಪೂರ್ಣವಾಗಿ ಸಪೋರ್ಟ್ ಮಾಡಿ ಒಲಂಪಿಕ್ ಸಂಸ್ಥೆಯ ಅಧ್ಯಕ್ಷನಾಗಿ ಇವತ್ತು ನಾನೇನಾದರೂ ಒಳ್ಳೆಯ ಕೆಲಸ ಮಾಡಿದ್ದರೆ ಅವರೇ ನನಗೆ ಮಾರ್ಗದರ್ಶಕರು ಎಂದು ಹೇಳಬಯಸುತ್ತೇನೆ. ಅವರು ಆಗ Tennis Association ನ President ಆಗಿದ್ದರು. ಜೊತೆಗೆ ಕಬ್ಬನ್ ಪಾರ್ಕ್‌ನಲ್ಲಿರುವ ಟೆನಿಸ್ ಸ್ಟೇಡಿಯಂ ಅದು ಹಾಳುಬಿದ್ದಿತ್ತು. ಅದನ್ನು ಅವರು remodel ಮಾಡಿ ಟೆನ್ನಿಸ್ ಕ್ರೀಡೆಗೆ ದೊಡ್ಡ ಶಕ್ತಿಯನ್ನು ತುಂಬಿ ಕೇವಲ 3-4 ವರ್ಷಗಳ ಹಿಂದ Tennis Association ನ President ಹುದ್ದೆಯಿಂದ ನಿವೃತ್ತಿಯಾದರು. ಅವರು All India Tennis Association ನ Vice President ಸಹ ಆಗಿದ್ದರು. ವಿಂಬಲ್ಡನ್ ಟೆನ್ನಿಸ್ ಮ್ಯಾಚ್ ಬಂದರೆ ಅವರು ಎಷ್ಟೇ ಕೆಲಸ ಇರಲಿ ಮ್ಯಾಚ್ ನೋಡುವುದನ್ನು ತಪ್ಪಿಸುತ್ತಿರಲಿಲ್ಲ. ರಾತ್ರಿ 2 ಗಂಟೆಯಾದರೂ ನೋಡುತ್ತಿದ್ದರು. ಎಷ್ಟೋ ಸಲ ಮ್ಯಾಚ್ ನೋಡುವುದಕ್ಕೆ ಲಂಡನ್‌ಗೆ ಹೋಗಿದ್ದರು. ಈಗಲೂ ಸಹ ಅವರು ನಿವೃತ್ತಿಯಾದ ಮೇಲೂ ಮ್ಯಾಚ್ ನೋಡುವುದಕ್ಕೆ ಲಂಡನ್‌ಗೆ ಹೋಗುತ್ತಿದ್ದರು. ಅಲ್ಲಿಂದ ಬಂದ ಮೇಲೆ 'I saw excellent Wimbledon matches' ಎಂದು ಹೇಳುತ್ತಿದ್ದರು. ಇದರ ಜೊತೆಗೆ ಪ್ರಮುಖವಾದ ಮತ್ತು ವಿಶೇಷವಾದ ವಿಚಾರವೊಂದನ್ನು ಹೇಳುತ್ತೇನೆ.

ಇವತ್ತು ವಿಕಾಸಸೌಧ ಯಾವರೀತಿ ಬಂತು ಎಂದರೆ, 2000ನೇ ಇಸವಿಯ ಮಾರ್ಚ್ 16 ಅಥವಾ 17ನೇ ತಾರೀಖಿನಲ್ಲಿ ನಮ್ಮ ಮನೆಗೆ ಊಟಕ್ಕೆ 4-5 ಜನರನ್ನು ಆಹ್ವಾನವನ್ನು ಮಾಡಿದ್ದೆ. ಅದರಲ್ಲಿ ಶ್ರೀ ಎಸ್.ಎಂ. ಕೃಷ್ಣರವರು ಸಹ ಬಂದರು. ಅವರು ಬಂದು ಊಟವಾದ ಮೇಲೆ ಹಾಗೆಯೇ ಮಾತನಾಡುತ್ತಿದ್ದಾಗ ಈ ರೀತಿ ಶ್ರೀ ಕೆಂಗಲ್ ಹನುಮಂತಯ್ಯನವರು ವಿಧಾನಸೌಧವನ್ನು ಕಟ್ಟಿಸಿದರು. ನೀವು ಸಹ ಏನಾದರೂ ಮಾಡಿ ಎಂದು ಸಲಹೆ ಕೊಟ್ಟಾಗ ಸುತ್ತಮುತ್ತಲೂ ಎಲ್ಲಿಯೂ ಜಾಗವೇ ಇಲ್ಲ ಕಷ್ಟವಾಗುತ್ತದೆ ಎಂದರು. ಜಾಗ ತೋರಿಸಿದರೆ ಮಾಡುತ್ತೀರಾ ಎಂದು ಕೇಳಿದೆ. ಅಗತ್ಯವಾಗಿ ಆಗಬಹುದು ಎಂದರು. ಮೊದಲು ನಾವು ಫ್ರೀಡಂ ಪಾರ್ಕ್ ಜಾಗವನ್ನು ತೋರಿಸಿದೆವು. ಹೆಸರು ಹೇಳಿದ್ದಕ್ಕೆ ಅಲ್ಲಿ ಕಷ್ಟವಾಗಬಹುದು, ದೂರವಾಗುತ್ತದೆ ಎಂದು ಹೇಳಿದರು. ಆಮೇಲೆ ಸರ್ಕಾರಿ ಮುದ್ರಣಾಲಯ ವಿಧಾನಸೌಧದ ಪಕ್ಕದಲ್ಲಿಯೇ ಇತ್ತು. ಆ ಜಾಗ ಆಗಬಹುದೇ ಎಂದು ಹೇಳಿದಾಗ 'ಆಯಿತು ನಡೆಯಿರಿ' ಎಂದು ರಾತ್ರಿ 11.30ರಲ್ಲಿ ಅವರ ಕಾರಿನಲ್ಲಿಯೇ ಕರೆದುಕೊಂಡು ಬಂದು ಪ್ರೆಸ್ ಪಕ್ಕದಲ್ಲಿಯೇ ಮೇನ್ ರೋಡ್‌ನಲ್ಲಿ ಒಂದು ಬಸ್ ನಿಲ್ದಾಣವಿತ್ತು. ಅಲ್ಲಿ ಕಾರನ್ನು ನಿಲ್ಲಿಸಿ ಗೌರ್ನಮೆಂಟ್ ಪ್ರೆಸ್‌ನ ಕೊನೆಯ ಭಾಗದವರೆಗೂ ನಡೆದುಕೊಂಡು ಹೋಗಿ ನೋಡಿ 'ಆಯಿತು ಯೋಚನೆ ಮಾಡುತ್ತೇನೆ', tomorrow I will get back to you ಎಂದು ಹೇಳಿ ಮರುದಿನ ಬೆಳಗ್ಗೆ Chief Secretary, Chief Architect, PWD Secretary, Law Secretary ಎಲ್ಲರನ್ನೂ ಕರೆಸಿ ಮೀಟಿಂಗ್ ಮಾಡಿ ಅಲ್ಲಿ ಎರಡನೇ ವಿಧಾನಸೌಧ ಕಟ್ಟುವುದು ಎಂದು ತೀರ್ಮಾನ ಮಾಡಿಯೇ ಬಿಟ್ಟರು. ಅದಾದ ನಂತರ ನಾಲ್ಕು ವರ್ಷದೊಳಗೆ ಅದನ್ನು ಕಟ್ಟಲಾಯಿತು. ಬಹುಶಃ ಫೆಬ್ರವರಿ, 2004ರಲ್ಲಿ ಅವರ ಅಮೃತಹಸ್ತದಿಂದ ಅದನ್ನು ಉದ್ಘಾಟನೆ ಮಾಡಿದರು. ಅವತ್ತು ಇದಕ್ಕೆ ಹೆಸರೇನಿಡಬೇಕೆಂದು 3-4 ಹೆಸರುಗಳನ್ನು suggest ಮಾಡುತ್ತಾರೆ. ಕೊನೆಗೆ 'ವಿಕಾಸಸೌಧ' ಎರಡನೇ ವಿಧಾನಸೌಧ ಎಂದು ಅದಕ್ಕೆ ಹೆಸರು ಇಡುತ್ತಾರೆ. ಇದೇ ಅದರ ಇತಿಹಾಸ.

ಇನ್ನೊಂದು ಘಟನೆಯೆಂದರೆ, ಡಾ:ರಾಜ್‌ಕುಮಾರ್‌ರವರು ಕಿಡ್ನಾಪ್ ಆದಾಗ ನಮ್ಮ ಲೇಔಟ್ ಕೃಷ್ಣಪ್ಪನವರು ಮನೆಗೆ ಊಟಕ್ಕೆ ಕರೆದಿದ್ದರು. ಅವರ ಮನೆಯಲ್ಲಿ ಊಟ ಮಾಡುತ್ತಿದ್ದಾಗ IG, Intelligence ಇಂದ ಸರ್, ಈ ರೀತಿ ಡಾ: ರಾಜ್‌ಕುಮಾರ್‌ರವರು ಕಿಡ್ನಾಪ್ ಆಗಿದ್ದಾರೆ' ಎಂದು

ಫೋನ್ ಬಂತು. ಊಟವನ್ನು ಬಾಯಿಗೆ ಇಡುತ್ತಿದ್ದವರು ಊಟ ಮಾಡುವುದನ್ನು ಅಲ್ಲಿಯೇ ಬಿಟ್ಟು ಸೀದಾ ನಡಿರಿ ಹೋಗೋಣ ಎಂದು ಮನೆಗೆ ಬಂದು ತಕ್ಷಣವೇ ಗೃಹ ಸಚಿವರನ್ನು ಮತ್ತು ಬೇರೆ ಬೇರೆ ಅಧಿಕಾರಿಗಳನ್ನು ರಾತ್ರಿ ಅಷ್ಟೊತ್ತಿನಲ್ಲಿಯೇ ಕರೆಸಿ ಸಭೆ ನಡೆಸಿ ಯಾವ ರೀತಿ ಮಾಡಬೇಕೆಂದು ಚರ್ಚೆ ಮಾಡಿದರು. ಅದಕ್ಕೊಂದು ದೊಡ್ಡ ಇತಿಹಾಸವೇ ಇದೆ. ಅದೆಲ್ಲಾ ಆದಮೇಲೆ ಅವರು ಮುಖ್ಯಮಂತ್ರಿಯಾದಾಗ ನಾನು ಅವರಿಗೊಂದು ಸಲಹೆ ಕೊಟ್ಟೆ. ಬೆಂಗಳೂರಿನಲ್ಲಿ ಸಾರ್ವಜನಿಕ ಶೌಚಾಲಯಗಳಿಗೆ ಬಹಳ ತೊಂದರೆ ಇದೆ. ವಿಶೇಷವಾಗಿ ಮಹಿಳೆಯರು ಬಸ್‌ಸ್ಟ್ಯಾಂಡ್‌ಗಳಲ್ಲಿ ಮತ್ತು ಪ್ರಮುಖವಾದ ಜಾಗಗಳಲ್ಲಿ ಶೌಚಕ್ಕೆ ಹೋಗುವುದಕ್ಕೆ ಬಹಳ ಕಷ್ಟವಿದೆ ಹಾಗೂ ವಯಸ್ಸಾದವರಿಗೂ ಬಹಳ ಕಷ್ಟವಿದೆ ಎಂದು ಹೇಳಿದಾಗ ಏನು ಮಾಡಬೇಕೆಂದು ಕೇಳಿದರು. ಒಂದು ಪೇಪರ್ ಕೊಟ್ಟೆ. ಅವತ್ತು ಭಾನುವಾರವಾಗಿತ್ತು. ಭಾನುವಾರವಾಗಿದ್ದರಿಂದ ಅಧಿಕಾರಿಗಳಿಗೆ ಫೋನ್ ಮಾಡುವುದು ಸರಿಯಲ್ಲವೆಂದರು. ಆದರೂ ನಾನು ಫೋನ್ ಮಾಡಿ ಎಂದೆ. ಶ್ರೀ ಕೆ. ಜಯರಾಜ್‌ರವರು ಕಾರ್ಪೋರೇಷನ್ Commissioner ಆಗಿದ್ದರು. ಅವರು ಫೋನ್ ಮಾಡಿ 'ನೋಡಿ ಈ ರೀತಿ ಒಂದು ಪ್ರಪೋಸಲ್ ಕೊಟ್ಟಿದ್ದಾರೆ ಇದನ್ನು ನಾಳೆ ನನ್ನ ಮುಂದೆ ತೆಗೆದುಕೊಂಡು ಬನ್ನಿ' ಎಂದು ಹೇಳಿದರು. ತಕ್ಷಣವೇ ಅವರು ಪ್ರಪೋಸಲ್ ಅನ್ನು ರೆಡಿ ಮಾಡಿದರು. ಆದರೆ ಅದನ್ನು ಒಂದು ವಾರದೊಳಗಡೆಯೇ 'ಇನ್ಫೋಸಿಸ್ ಫೌಂಡೇಷನ್'ನ ಶ್ರೀಮತಿ ಸುಧಾಮೂರ್ತಿಯವರು ನಾನೇ 10 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದರು. ಮಾನ್ಯ ಸಭಾಪತಿಯವರೇ, ಎರಡೇ ನಿಮಿಷ. ನಾನೇನು ಟೈಂ ತೆಗೆದುಕೊಳ್ಳುವುದಿಲ್ಲ.

(ಮುಂದು)

(747) 10.12.2024 1.40 ಹೆಚ್‌ವಿ. ವಿಕೆ

**ಡಾ॥ಕೆ.ಗೋವಿಂದರಾಜು (ಮುಂದು):**

ಸನ್ಮಾನ್ಯ ಸಭಾಪತಿಯವರೇ, ತಕ್ಷಣ ಅವರು ಪ್ರಸ್ತಾವನೆಯನ್ನು ತಯಾರು ಮಾಡಿದರು. ಆದರೇ, ಒಂದು ವಾರದೊಳಗಾಗಿ ಇನ್ಫೋಸಿಸ್‌ನ ಮಾನ್ಯ ನಾರಾಯಣಮೂರ್ತಿಯವರ ಧರ್ಮಪತ್ನಿಯವರಾದ

ಶ್ರೀಮತಿ ಸುಧಾಮೂರ್ತಿಯವರು 100 ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ 10 ಕೋಟಿ ರೂಪಾಯಿಗಳ ಕೊಡುಗೆಯನ್ನು ನೀಡಿದರು. ಸಾರ್ವಜನಿಕ ಶೌಚಾಲಯಗಳ ನಿರ್ಮಾಣವನ್ನು ಪ್ರಪ್ರಥಮ ಬಾರಿಗೆ ಶ್ರೀ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಪ್ರಾರಂಭ ಮಾಡಿದ್ದರು. ಮಾನ್ಯ ಜೆ.ಜೈರಾಜ್‌ರವರು ಅದರ ಜವಾಬ್ದಾರಿಯನ್ನು ವಹಿಸಿಕೊಂಡು ಅದನ್ನು ಮಾಡಿ ಮುಗಿಸಿಕೊಟ್ಟಿದ್ದರು.

ಹಿಂದೆ ನಾವು ಪಾಸ್‌ಪೋರ್ಟ್ ತೆಗೆದುಕೊಳ್ಳುವುದಕ್ಕೆ ಬಹಳಷ್ಟು ಕಷ್ಟಪಡುತ್ತಿದ್ದೆವು ಅದನ್ನು ಮನಗಂಡ ಮಾನ್ಯ ಎಸ್.ಎಂ.ಕೃಷ್ಣರವರು ವಿದೇಶಾಂಗ ಸಚಿವರಾಗಿದ್ದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯನ್ನು ಮಾಡಿಕೊಟ್ಟರು. ಇದೇ ರೀತಿ ಹಲವಾರು ಉತ್ತಮವಾಗಿರುವ ಕೆಲಸಗಳನ್ನು ಮಾಡಿದ್ದಾರೆ. ವೈಟ್‌ಫೀಲ್ಡ್‌ನಲ್ಲಿರುವ ಐ.ಟಿ., ಕಂಪನಿಗಳು ಶ್ರೀ ಎಸ್.ಎಂ.ಕೃಷ್ಣರವರ ಹೆಸರನ್ನು ಹೇಳಲೇಬೇಕಾಗುತ್ತದೆ. ಇವುಗಳ ಜೊತೆಗೆ ನೀರಾವರಿ ಕ್ಷೇತ್ರಕ್ಕೆ ಹೆಚ್ಚು ಒತ್ತು ಕೊಟ್ಟು ಹಲವಾರು ಕಾಮಗಾರಿಯನ್ನು ಮಾಡಿದ್ದಾರೆ. ಅವರ ಬಗ್ಗೆ ಹೇಳುವುದಕ್ಕೆ ಬಹಳಷ್ಟು ವಿಷಯಗಳಿವೆ ಆದರೆ, ಸಮಯದ ಅಭಾವದಿಂದಾಗಿ ನನ್ನ ಮಾತನ್ನು ಮೊಟಕುಗೊಳಿಸುವಂತಹ ಅನಿವಾರ್ಯತೆ ಇದೆ. ಮಾನ್ಯ ಎಸ್.ಎಂ.ಕೃಷ್ಣರವರಿಗೆ ನನ್ನ ನಮನಗಳನ್ನು ಸಲ್ಲಿಸುತ್ತಾ, ನನ್ನ ಎರಡು ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಹಿರಿಯ ರಾಜಕಾರಣಿಯಾಗಿರುವ ಮಾನ್ಯ ಎಸ್.ಎಂ.ಕೃಷ್ಣರವರ ನಿಧನದ ಹಿನ್ನೆಲೆಯಲ್ಲಿ ತಾವು ತಂದಿರುವಂತಹ ಸಂತಾಪ ಸೂಚನೆಯ ಮೇಲೆ ಮಾತನಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸೋಮನಹಳ್ಳಿ ಮಲ್ಲಯ್ಯ ಕೃಷ್ಣರವರನ್ನು ನಾನು Smart and Matured ಕೃಷ್ಣ ಎಂದು ಕರೆಯುವುದಕ್ಕೆ ಇಷ್ಟಪಡುತ್ತೇನೆ. ಶ್ರೀಯುತರು ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡ ಸಂದರ್ಭದಲ್ಲಿ ಅವರ ಪ್ರಾಥಮಿಕ ಸದಸ್ಯತ್ವದ ಚೀಟಿಯನ್ನು ಕೊಡುವುದಕ್ಕೆ ನಮ್ಮ ಪಕ್ಷದ ರಾಜ್ಯಾಧ್ಯಕ್ಷರ ಕೊಠಡಿಗೆ ಹೋಗಿದ್ದೆ, ಆ ಸಂದರ್ಭದಲ್ಲಿ ಶ್ರೀಯುತರು “ನಿನ್ನ ಕಕ್ಷೆಗೆ ಬಂದು ಅದನ್ನು ತೆಗೆದುಕೊಳ್ಳುತ್ತೇನೆ” ಎನ್ನುವ ಮಾತನ್ನು ಹೇಳಿದರು. ನಾವು ಒತ್ತಾಯ ಮಾಡಿ ಅಲ್ಲಿಯೇ

ಕೊಟ್ಟ ಮೇಲೆ ನನ್ನ ಕಕ್ಷೆಗೆ ಬಂದು ನನ್ನ ಕೈ ಕುಲುಕಿ ನನ್ನ ಪರಿಚಯವನ್ನು ಮಾಡಿಕೊಂಡು ಹೋದರು. ಇದು ಅವರನ್ನು ನಾನು ಭೇಟಿ ಮಾಡಿದ ಮೊದಲನೆಯ ಸಂದರ್ಭವಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳು ಒಂದು ಕಾರ್ಯಕ್ರಮದ ಪ್ರಯುಕ್ತ ಬೆಂಗಳೂರಿಗೆ ಆಗಮಿಸುತ್ತಿದ್ದಾರೆ, ತಾವು ಬಂದು ಆ ವೇದಿಕೆಯನ್ನು ಅಲಂಕರಿಸಬೇಕೆಂದು ಮಾನ್ಯ ಎಸ್.ಎಂ.ಕೃಷ್ಣರವರಿಗೆ ದೂರವಾಣಿಯ ಮೂಲಕ ತಿಳಿಸಿದಾಗ, ಅವರು "ಅವರು ಬರುವಾಗ, ಸಾಲಿನಲ್ಲಿ ನಿಂತು ಹೂಗುಚ್ಛವನ್ನು ನೀಡಬಹುದೇ?" ಎಂದು ಕೇಳಿದರು. "ಇಲ್ಲ ತಾವು ವೇದಿಕೆಯ ಮೇಲೆಯೇ ಮಾನ್ಯ ಪ್ರಧಾನ ಮಂತ್ರಿಗಳಿಗೆ ಹೂಗುಚ್ಛವನ್ನು ನೀಡುವುದಕ್ಕೆ ವ್ಯವಸ್ಥೆಯನ್ನು ಮಾಡಲಾಗಿದೆ" ಎಂದು ನಾನು ಹೇಳಿದೆ. ಆ ಕಾರ್ಯಕ್ರಮವಾದ ನಂತರ ಅವರು ನನಗೆ ಫೋನ್ ಮಾಡಿ " ಇಷ್ಟು ಚೆನ್ನಾಗಿ ವ್ಯವಸ್ಥೆ ಮಾಡಿರುವುದಕ್ಕೆ thank you gentleman" ಎಂದು ಹೇಳಿ ಅಭಿನಂದನೆಯನ್ನು ಸಲ್ಲಿಸಿದ್ದರು. ಈ ಎರಡೂ ಕೂಡ ನನ್ನ ಜೀವನದಲ್ಲಿ ಮರೆಯಲಾಗದ ಘಟನೆಯಾಗಿದೆ. ಅದಕ್ಕಾಗಿಯೇ ನಾನು ಅವರನ್ನು Smart and Matured ರಾಜಕಾರಣಿ ಈ ರಾಜ್ಯಕ್ಕೆ ಮತ್ತು ಈ ದೇಶಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದು ಹೇಳುತ್ತಾ, ಅವರ ಮನೆಯವರಿಗೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಆ ಭಗವಂತನು ಕರುಣಿಸಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:-** ಮೃತರ ಬಗ್ಗೆ ಈ ಸದನದಲ್ಲಿ ಸುಮಾರು 23 ಜನ ಸದಸ್ಯರು ಮಾತನಾಡಿದ್ದಾರೆ. ನಾನು ಸಹ ಅವರೊಂದಿಗೆ ಒಡನಾಟದಲ್ಲಿದ್ದೆ. ನಾನು ಮಾತನಾಡುವುದಕ್ಕೆ ಆಗುತ್ತಿಲ್ಲ. ಇಂತಹ ಶ್ರೇಷ್ಠವಾಗಿರುವ ವ್ಯಕ್ತಿಯನ್ನು ನಮ್ಮ ರಾಜ್ಯ ಇಂದು ಕಳೆದುಕೊಂಡಿದೆ. ತಮ್ಮೆಲ್ಲರ ಭಾವನೆಗಳನ್ನು ನಾನು ಕ್ರೋಢೀಕರಿಸಿ, ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಶಾಸಕರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

ಸದನವನ್ನು 12.12.2024ರ ಗುರುವಾರ ಬೆಳಗ್ಗೆ 11 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 1 ಗಂಟೆ 44 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 12ನೇ ಡಿಸೆಂಬರ್ ಮಾಹೆ 2024ರ ಗುರುವಾರ ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

<><><>